"JANAPADA" Monthly - June 2016
"ಜನಪದ" ಮಾಸಿಕ - ಜೂನ್ 2016

Page No. -52
RNI No. KAR/KAN/2010/20676

REGD NO. : KA/BG/GPO-2526/2015-17 License to post without prepayment WPP 34
Dt. 29th & 30th Posted at (Every month) Bangalore PSO, Mysore Road, Bangalore-26



# ಪರಿಸರ ಬೆಳೆಸಿ; ಜೀವ ಉಳಿಸಿ

ವಿಶ್ವ ಪರಿಸರ ದಿನ, ಜೂನ್ 5

ವಾರ್ಷಿಕ ಚಂದಾ ರೂ.25/-

# ಜನಪದ

ಜೂನ್ 2016






ಜನ ಮನ
ಸರ್ಕಾರದಿಂದ ಜನಾಭಿಪ್ರಾಯ ಸಮಾವೇಶ



"ನಾಲ್ಕನೇ ವರ್ಷದೆಡೆಗೆ ಭರವಸೆಯ ನಡಿಗೆ..." ಸರ್ಕಾರದ ಮೂರು ವರ್ಷಗಳ ಸಾಧನೆಯ ಪುಸ್ತಕವನ್ನು
ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ದಿನಾಂಕ 14–5–2016ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬಿಡುಗಡೆ ಮಾಡಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ದೇವನಹಳ್ಳಿ ತಾಲ್ಲೂಕು ಬೀರಸಂದ್ರದಲ್ಲಿ ಜಿಲ್ಲಾ ಸಂಕೀರ್ಣಕ್ಕೆ ಶಂಕುಸ್ಥಾಪನೆ









**05** ಜನಮನ
ಸರ್ಕಾರದಿಂದ
ಜನಾಭಿಪ್ರಾಯ
ಸಮಾವೇಶ
• ಎನ್. ಆರ್. ವಿಶುಕುಮಾರ್



ಸಂಪುಟ–59 • ಸಂಚಿಕೆ–3

**ಜೂನ್ 2016**

ಪ್ರಧಾನ ಸಂಪಾದಕರು
**ಎನ್. ಆರ್. ವಿಶುಕುಮಾರ್**
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
**ಆರ್. ಸರಸ್ವತಿ**
ಉಪ ನಿರ್ದೇಶಕರು

ಉಪ ಸಂಪಾದಕರು
**ಸಿ. ರೂಪಾ**
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ
ಬೆಂಗಳೂರು–560 001
Email : varthajanapada@yahoo.co.in

ಮುದ್ರಕರು
**ಲಾವಣ್ಯ ಮುದ್ರಣ**
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ
ಬೆಂಗಳೂರು – 560 050


ಲೇಖನದ ಅಭಿಪ್ರಾಯಗಳು, ಸರ್ಕಾರದ ಅಭಿಪ್ರಾಯಗಳಲ್ಲ

## ಪುಟ ತೆರೆದಂತೆ...


**14** ಸರ್ಕಾರದ ಯೋಜನೆಗಳ ಸಾಧಕ, ಬಾಧಕ ಪರಿಚಯಿಸಿದ ಜನಮನ
• ಹರತೀಸುತ

**20** ನಾವೇ ಬರಮಾಡಿಕೊಂಡ ಬರ
• ನಾಗೇಶ ಹೆಗಡೆ

**25** ಬರಗಾಲದ ಸಂಕಷ್ಟದಲ್ಲಿ ಜನರ ಜೊತೆಯಲ್ಲಿ

**28** ಜಾಗತಿಕ ತಾಪಮಾನ ನಿಮ್ಮ ಕೊಡುಗೆ ಎಷ್ಟು ?
• ಡಾ॥ ಯಲ್ಲಪ್ಪರೆಡ್ಡಿ

**30** ಬರ ಎಂಬ ಶಾಪಕ್ಕೆ ಮರಗಳು ಇಲ್ಲಿ ನೀಡಿವೆ ಮುಕ್ತಿ
• ಡಾ॥ ಎಸ್. ವಿ. ಹಿತ್ತಲಮನಿ

**34** ಮೈಸೂರು ಗಂಧದ ಸಾಬೂನು ತಯಾರಿಕೆಗೆ ನೂರು ವರ್ಷ
• ನೇಸರ

**37** ಬರಡು ಭೂಮಿಯಲ್ಲೂ ಬಂಗಾರ ಬೆಳೆದ ದಿಟ್ಟ ಮಹಿಳೆ
• ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ

**40** ಆಗಸಬಾಳದಲ್ಲಿ ಭಾರೀ ಬೆಳ್ಳುಳ್ಳಿ ಬೆಳೆಗಾರ; ಮೂರು ತಿಂಗಳಲ್ಲಿ 14 ಲಕ್ಷ ರೂ.
• ಗುರುರಾಜ ಬಿ ಕನ್ನೂರ

**42** ವಿದ್ಯಾನಗರಿಗೆ ಮತ್ತೊಂದು ಮುಕುಟ ಐಎಎಸ್, ಕೆಎಎಸ್ ತರಬೇತಿ ಕೇಂದ್ರ
• ಮಂಜುನಾಥ್ ಬಿ. ಡೊಳ್ಳಿನ

**44** ಆಡು ಕುರಿ ಸಾಕಾಣಿಕೆದಾರರ ಸಹಕಾರ ಮಹಾಮಂಡಲ
• ಡಾ॥ ರಘುಪತಿ ಸಿ. ಎಸ್.

**48** ಶಾಲ್ಮಲಾ ಶಿಲ್ಪವನ
• ನಾಗರಾಜ್ ಹರಪ್ಪನಹಳ್ಳಿ




# ಓದುಗರಿಂದ...




**ಸಾಧನೆಗಳ ಸಮರ್ಥ ವಿವರ**

ಅಖಂಡ ಕರ್ನಾಟಕದ ಅಭ್ಯುದಯದ ಆಶಾಕಿರಣ ಹಾಗೂ ಜನಜೀವನದ ಜೀವನಾಡಿಯಾದ 'ಜನಪದ ಮಾಸಪತ್ರಿಕೆ ನಮಗೆಲ್ಲರಿಗೂ ಅಚ್ಚುಮೆಚ್ಚು. ಮಾನ್ಯ ಮುಖ್ಯಮಂತ್ರಿಗಳ ಮುಖಪುಟ ಚಿತ್ತಾಕರ್ಷಕವಾಗಿತ್ತು. ಅವರು ಮೂರುವರ್ಷಗಳಿಂದ ನಡೆಸಿಕೊಂಡು ಬಂದಿರುವ ಜನಪರ ಯೋಜನೆಗಳ ಸವಿವರ ಚಿತ್ರಣ, **'ಸಂಭ್ರಮಿಸಲು ಸಾಕಷ್ಟು ಕಾರಣಗಳಿವೆ..'** ಎಂಬ ಅರ್ಥಪೂರ್ಣ ವ್ಯಾಖ್ಯಾನ ಸರ್ಕಾರದ ಎಲ್ಲ ಸಾಧನೆಗಳನ್ನು ಸಮರ್ಥವಾಗಿ ಕಟ್ಟಿಕೊಟ್ಟಿದೆ. ಧನ್ಯವಾದಗಳು.

**–ಬಸವರಾಜ ಹೂಗಾರ,** ಹಿರೇಸಿಂಗನಗುತ್ತಿ

'ತಂಬಾಕು ರಹಿತ ಜೀವನ ಸುಖ ಸಂತೋಷಗಳ ಆಗರ' ಲೇಖನ ಓದುಗರ ಮನ ಮುಟ್ಟುವಂತಿದೆ. ತಂಬಾಕಿನಿಂದ ಆಗುವ ದುಷ್ಪರಿಣಾಮಗಳು ಹಾಗೂ ಅದರ ತೀವ್ರತೆ ಮನುಕುಲವನ್ನು ವಿನಾಶದತ್ತ ಕೊಂಡೊಯ್ಯುತ್ತಿದೆ ಎಂಬುದು ಈ ಲೇಖನದಿಂದ ಸ್ಪಷ್ಟವಾಗಿ ತಿಳಿದುಬಂದಿತು. ಧೂಮರಹಿತ ಉತ್ಪನ್ನಗಳಾದ ಜರ್ದಾ, ಗುಟ್ಕಾ, ಪಾನ್ ಮಸಾಲ ಆರೋಗ್ಯಕ್ಕೆ ಹೇಗೆಲ್ಲಾ ಮಾರಕ ಎಂದು ಲೇಖನದಲ್ಲಿ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು.

**–ವಿಲ್ಸನ್ ಅಲೆಕ್ಸಾಂಡರ್**
ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ)

**ಚಿತ್ತಾಕರ್ಷಕ ಮುಖಪುಟ**

ಶ್ವೇತವಸ್ತ್ರಧಾರಿಯಾದ ಮಾನ್ಯ ಮುಖ್ಯಮಂತ್ರಿಗಳ ಮುಖಪುಟ ಆಕರ್ಷಕವಾಗಿತ್ತು. ಸರ್ಕಾರಕ್ಕೆ ಮೂರು ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಮೂಡಿ ಬಂದ ಸಂಭ್ರಮಿಸಲು ಸಾಕಷ್ಟು ಕಾರಣಗಳಿವೆ.. ಹಾಗೂ ಸರ್ಕಾರಕ್ಕೆ 3 ವರ್ಷ ಎಲ್ಲೆಡೆ ಹರ್ಷ ಲೇಖನಗಳು ಬಹಳಷ್ಟು ಮಾಹಿತಿಗಳನ್ನು ನೀಡಿದೆ. ಜನಪದಕ್ಕೆ ವಂದನೆಗಳು.

ಕರ್ನಾಟಕಕ್ಕೆ ಜೈನಧರ್ಮದ ವಾಸ್ತುಶಿಲ್ಪದ ಕೊಡುಗೆ ಸುಂದರ ಪ್ರಾಚೀನ ಬಸದಿಗಳು ಲೇಖನ ಮತ್ತು ಲೇಖನದೊಂದಿಗೆ ಪ್ರಕಟವಾದ ಚಿತ್ರಗಳು ಬಹಳಷ್ಟು ಅತ್ಯಮೂಲ್ಯ ವಿಷಯಗಳನ್ನು ತಿಳಿಸಿಕೊಟ್ಟವು. ನೇಮಿನಾಥ ತೀರ್ಥಂಕರರ ಮೂರ್ತಿ ಭಕ್ತಿಭಾವ ಮೂಡಿಸುವಂತಿವೆ. ಸಂಚಿಕೆಯಲ್ಲಿ ಮೂಡಿಬಂದ ಕರ್ನಾಟಕ ಕುಲ ಪುರೋಹಿತ ಆಲೂರ ವೆಂಕಟರಾಯರು ಮತ್ತು ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪ ಲೇಖನಗಳು ಸಂಗ್ರಹಯೋಗ್ಯವಾಗಿವೆ.

**–ವಿ. ಹೇಮಂತಕುಮಾರ,**
ಬೆಂಗಳೂರು

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

ಸರ್ಕಾರ ಮೂರು ವರ್ಷದ ಆಳ್ವಿಕೆಯಲ್ಲಿ ನುಡಿದಂತೆ ನಡೆದು ಸಾಧಿಸಿ ಜನಮನ ಗೆದ್ದಿದೆ. ಉತ್ತಮ ಆಡಳಿತ ನೀಡಿ ಜನತೆಯ ವಿಶ್ವಾಸ ಗಳಿಸುವುದು ಆಡಳಿತ ವ್ಯವಸ್ಥೆಯ ಹಿರಿಯಾಸೆ. ಮುಖಪುಟ ಲೇಖನದಲ್ಲಿ ಈ ಆಶಯಗಳು ಅರ್ಥಬದ್ಧವಾಗಿ ಅನಾವರಣಗೊಂಡಿದೆ. ಸರ್ಕಾರದ ಸಾಧನೆಗಳು ಸವಿಸ್ತಾರವಾಗಿ ಮೂಡಿಬಂದಿವೆ.

ಕರ್ನಾಟಕಕ್ಕೆ ಜೈನಧರ್ಮ ವಾಸ್ತುಶಿಲ್ಪದ ಲೇಖನದಲ್ಲಿ ಜೈನಧರ್ಮದ ಪರಂಪರೆ, ಜೈನ ಬಸದಿಗಳ ಕುರಿತ ವಿವರಗಳು ಬಹಳ ಆಸಕ್ತಿದಾಯಕ. ಧನ್ಯವಾದಗಳು.

**–ಕೊತ್ತಲ ಮಹಾದೇವಪ್ಪ,**
ಲಕ್ಷ್ಮೇಶ್ವರ

ಮೇ ತಿಂಗಳ ಜನಪದ ಮಾಹಿತಿಪೂರ್ಣ ಸಂಚಿಕೆಯೆಂದು ಹೇಳಲು ಸಂತಸಪಡುತ್ತೇನೆ. ಬಹಳ ಸುಂದರವಾಗಿದೆ. ಸರ್ಕಾರದ ಮೂರು ವರ್ಷಗಳ ಸಾಧನೆಯ ಮಾಹಿತಿ ಸಂದರ್ಭೋಚಿತವಾಗಿದೆ. ಅನ್ನಭಾಗ್ಯ. ಕ್ಷೀರಭಾಗ್ಯ, ಹಾಲಿಗೆ ನೀಡುವ ಪ್ರೋತ್ಸಾಹ ಧನ ಎಲ್ಲವೂ ಬಡವರ ಪಾಲಿಗೆ ಬಹಳ ಅನುಕೂಲವಾದ ಯೋಜನೆಗಳೆ. ಹರೀಶ್ ಸಾಂತ್ವನ ಯೋಜನೆ ಬಹಳ ಅರ್ಥಪೂರ್ಣವಾಗಿದೆ.

**ಕೇಶವರಾಜು.** ಎನ್,ಹೊಸಪೇಟೆ.

'ಜನಪದ ಪುಸ್ತಕವನ್ನು ನೋಡಿ ಬಹಳ ಖುಷಿಯಾಯಿತು. ಮಾಸಪತ್ರಿಕೆಯೊಳಗಿನ ವಿಷಯಗಳನ್ನು ಓದಿ ಇನ್ನಷ್ಟು ಸಂತೋಷವಾಯಿತು. ಮುಖಪುಟ ಲೇಖನ ಸೇರಿದಂತೆ ಆಲೂರ ವೆಂಕಟರಾಯರು, ಹರ್ಡೇಕರ್ ಮಂಜಪ್ಪ ನವರ ಲೇಖನಗಳನ್ನು ಓದಿ ಅವರ ಆದರ್ಶಮಯ ಜೀವನ ಪರಿಚಯವಾಯಿತು. ಇಂತಹ ಇನ್ನಷ್ಟು ಮಾಹಿತಿಗಳು ಜನಪದದಲ್ಲಿ ಮೂಡಿಬರಲಿ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ನನ್ನ ಕೃತಜ್ಞತೆಗಳು.

**–ಉಜ್ಜಿನಿ ನಾಗರಾಜ,**
ಹರಪನಹಳ್ಳಿ

ಜನಪದಕ್ಕೆ ಚಂದಾ ಹಣವನ್ನು ಡಿಡಿ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು
**ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪ್ರಕಟಣಾ ಶಾಖೆ ವಿಭಾಗ**
ವಾರ್ತಾಸೌಧ, 17, ಭಗವಾನ್ ಮಹಾವೀರ ರಸ್ತೆ (ಇನ್ಫೆಂಟ್ರಿ ರಸ್ತೆ), ಬೆಂಗಳೂರು–560 001





# ಜನ ಮನ

## ಸರ್ಕಾರದಿಂದ ಜನಾಭಿಪ್ರಾಯ ಸಮಾವೇಶ

ಕಳೆದ ವರ್ಷ ಸರ್ಕಾರ ಆರಂಭಿಸಿರುವ ಜನಮನ ಕಾರ್ಯಕ್ರಮ ಜನರ ಆಸೆ, ಆಕಾಂಕ್ಷೆ ಮತ್ತು ನಿರೀಕ್ಷೆಗಳನ್ನು ಬಿಂಬಿಸುತ್ತದೆ. ಸರ್ಕಾರದ ಯೋಜನೆಗಳಿಂದ ಫಲಾನುಭವಿಗಳಿಗೆ ಆಗಿರುವ ಅನುಕೂಲ ಹಾಗೂ ಸವಲತ್ತುಗಳನ್ನು ಪಡೆಯುವಲ್ಲಿ ಆಗುತ್ತಿರುವ ಅನಾನುಕೂಲಗಳ ಬಗ್ಗೆ ಜನಪ್ರತಿನಿಧಿಗಳಿಗೆ ವಾಸ್ತವ ಚಿತ್ರಣವನ್ನು ನೀಡುತ್ತದೆ.

▪ **ಎನ್. ಆರ್. ವಿಶುಕುಮಾರ್**

**ಮೇ** 13, 2016. ಶ್ರೀ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳು ತುಂಬಿದ ದಿನ. ಸಾಮಾನ್ಯವಾಗಿ ಸರ್ಕಾರಗಳು ತಮ್ಮ ವಾರ್ಷಿಕ ದಿನಾಚರಣೆಯನ್ನು ಸಂಭ್ರಮ – ಸಡಗರಗಳಿಂದ ಸಾಧನೆಯ ಸಮಾವೇಶದ ಹೆಸರಿನಲ್ಲಿ ಅದ್ದೂರಿಯಾಗಿ ಆಚರಿಸುವುದು ವಾಡಿಕೆ. ಆದರೆ ಶ್ರೀ ಸಿದ್ದರಾಮಯ್ಯನವರ ಸರ್ಕಾರ ಮೂರನೆ ವರ್ಷದ ಆಚರಣೆಯನ್ನು ವಿಭಿನ್ನವಾಗಿ, ವಿನೂತನವಾಗಿ ನಾಡಿಗೇ ಮಾದರಿಯಾಗುವಂತೆ ಆಚರಿಸಿ "ಜನಮನ" ಸೆಳೆಯಿತು.

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿರುವ ನಗರದ ಗಾಂಧೀ ಕೃಷಿ ವಿಜ್ಞಾನ ಕೇಂದ್ರದಲ್ಲಿ ನೂತನವಾಗಿ ತಲೆಯೆತ್ತಿರುವ ಡಾ॥ ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಅಂದು ಸರ್ಕಾರ ವಿನೂತನ ಕಾರ್ಯಕ್ರಮವನ್ನು ಸಂಘಟಿಸಿತ್ತು. ಅಂದು ಸರ್ಕಾರದ ಮುಂಚೂಣಿ ಕಾರ್ಯಕ್ರಮಗಳಾದ 'ಅನ್ನಭಾಗ್ಯ',

ಚಿತ್ರಗಳು : ಡಿ. ಸಿ. ನಾಗೇಶ್




'ಕ್ಷೀರಭಾಗ್ಯ', 'ಋಣಮುಕ್ತ', 'ಕ್ಷೀರಧಾರ', 'ಮೈತ್ರಿ', 'ಮನಸ್ವಿನಿ', 'ವಸತಿ', 'ವಿದ್ಯಾಸಿರಿ', ಇತ್ಯಾದಿ ಯೋಜನೆಗಳ ನಾಲ್ಕುನೂರಕ್ಕೂ ಹೆಚ್ಚು ಫಲಾನುಭವಿಗಳು ರಾಜ್ಯದ ಎಲ್ಲಾ 30 ಜಿಲ್ಲೆಗಳಿಂದ ಆಗಮಿಸಿದ್ದರು. ನಾಡಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಸಚಿವ ಸಂಪುಟದೊಂದಿಗೆ ಈ ಫಲಾನುಭವಿಗಳ ಜೊತೆ ಮುಖಾ ಮುಖಿ ಸಂವಾದ ನಡೆಸಿ ಸರ್ಕಾರದ ಮೂರು ವರ್ಷಗಳ ಆಡಳಿತದ ಬಗ್ಗೆ ಜನಾಭಿಪ್ರಾಯ ಆಲಿಸಿದರು.

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಳೆದ ವರ್ಷದಿಂದ ತನ್ನ ಹೆಸರಿಗೆ ಅನುಗುಣವಾಗಿ ಜನಸಂಪರ್ಕ ಕಾರ್ಯನಿರ್ವಹಿಸಲು 'ಜನಮನ' ಕಾರ್ಯಕ್ರಮ ಆರಂಭಿಸಿದೆ. ಇದರ ಮುಂದುವರೆದ ಭಾಗವಾಗಿ ಈ ವರ್ಷ ಕೂಡ **"ಜನಮನ – ಸರ್ಕಾರದಿಂದ ಜನಾಭಿಪ್ರಾಯ ಸಮಾವೇಶ"**ವನ್ನು ಸಂಘಟಿಸಿತ್ತು. ಫಲಾನುಭವಿಗಳ ಜೊತೆಗೆ ಸಾರ್ವಜನಿಕರೂ, ವಿವಿಧ ವಲಯಗಳ ಗಣ್ಯರು, ರಾಜಕೀಯ ಧುರೀಣರು ಈ ಸಮಾವೇಶದಲ್ಲಿ ಭಾಗಿಯಾಗಿದ್ದರು.

ಇತ್ತೀಚೆಗಷ್ಟೇ ಲೋಕಾರ್ಪಣೆಗೊಂಡಿರುವ ಬಾಬು ರಾಜೇಂದ್ರಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ "ಜನಮನ" ಕಾರ್ಯಕ್ರಮ ಸಮಾವೇಶಗೊಂಡಿತ್ತು. 2000 ಅಸನಗಳ ಅತ್ಯಾಧುನಿಕ ವಿಶಾಲ ಸಭಾಂಗಣದ ಸುತ್ತಮುತ್ತಲಿನ ಆವರಣದಲ್ಲಿ ಸರ್ಕಾರದ ಮುಂಚೂಣಿ ಕಾರ್ಯಕ್ರಮಗಳ ಪ್ರತಿಕೃತಿಗಳು ಪ್ರದರ್ಶನಗೊಂಡಿದ್ದವು. ಗ್ರಾಮೀಣ ಸೊಗಡಿನ ಜನಜೀವನ ಬಿಂಬಿಸುವ ಗ್ರಾಮೀಣ ಕಲಾಕೃತಿಗಳಿಂದ ಇಡೀ ವಾತಾವರಣ ಕಲಾವಂತಿಕೆಯಿಂದ ತುಂಬಿ ತುಳುಕುತ್ತಿತ್ತು.

ನಾಡಿನ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ತಮ್ಮ ಎಂದಿನ ಸರಳ, ಸಹಜವಾದ ಹತ್ತಿಬಟ್ಟೆಯ ಉಡುಗೆ ಪಂಚೆ ಮತ್ತು ಮೈಸೂರು ರೇಷ್ಮೆ ಶಾಲು ಧರಿಸಿ ಸಮಾವೇಶಕ್ಕೆ ಆಗಮಿಸಿದರು. ಜನಪದ ಕಲೆಗಳ ಸ್ವಾಗತದೊಂದಿಗೆ ಮುಖ್ಯಮಂತ್ರಿಗಳನ್ನು ಹಾಗೂ ಸಚಿವ ಸಂಪುಟದ ಸದಸ್ಯರೆಲ್ಲರನ್ನು ಸಮಾರಂಭಕ್ಕೆ ಬರಮಾಡಿಕೊಳ್ಳಲಾಯಿತು. ಸಮಾವೇಶದ ಸಭಾಂಗಣದೊಳಗೆ ಕುಳಿತಿದ್ದ ಜನಸ್ತೋಮದ ನಡುವೆಯೆ ನಡೆದು ಬಂದ ಶ್ರೀ ಸಿದ್ದರಾಮಯ್ಯನವರು ಜನಸಾಮಾನ್ಯರಿಗೆ ಮತ್ತು ಫಲಾನುಭವಿಗಳಿಗೆ ಹಸ್ತಲಾಘವ ನೀಡುತ್ತಾ ತಮ್ಮ ಸರಳತೆಯನ್ನು ಸಾದರಪಡಿಸಿದರು.

ವಿಶಾಲ ವೇದಿಕೆಯ ಮೇಲೆ ಮಧ್ಯದಲ್ಲಿ ಬೃಹತ್ ಎಲ್‌ಇಡಿ ಪರದೆಯಿತ್ತು. ಪರದೆಯ ಇಕ್ಕೆಲಗಳಲ್ಲಿ ಒಂದು ಕಡೆ










**ಕರ್ನಾಟಕ ರಾಜ್ಯ ಈ ವರ್ಷ ಭೀಕರ ಬರಗಾಲ ಎದುರಿಸುತ್ತಿರುವ ಸಂದರ್ಭದಲ್ಲಿ ನಾವು ನಮ್ಮ ಸರ್ಕಾರದ ಸಾಧನೆಗಳನ್ನು ಸಂಭ್ರಮ ಸಡಗರದಿಂದ ಆಚರಿಸುವ ಮನಸ್ಥಿತಿಯಲ್ಲಿಲ್ಲ. ಈಗ ಬರ ನಿರ್ವಹಣೆಯೇ ನಮ್ಮ ಸರ್ಕಾರದ ಪ್ರಥಮ ಆದ್ಯತೆ. ಒಳ್ಳೆಯ ಮಳೆಗಾಲವಾಗಿ ಮಳೆ ಬೆಳೆ ತೃಪ್ತಿಕರವಾದರೆ ನಂತರದ ದಿನಗಳಲ್ಲಿ ಸರ್ಕಾರದ ಮೂರುವರ್ಷಗಳ ಸಂಭ್ರಮವನ್ನು ಸಾಧನೆಯ ಸಮಾವೇಶವನ್ನಾಗಿ ಅರ್ಥಪೂರ್ಣವಾಗಿ ಆಚರಿಸಲು ಚಿಂತಿಸುವುದಾಗಿ ಮುಖ್ಯಮಂತ್ರಿಗಳು ಹೇಳಿದರು.**

ಶ್ರೀ ಸಿದ್ದರಾಮಯ್ಯನವರ ಹಾಗೂ ಸಚಿವ ಸಂಪುಟದ ಸದಸ್ಯರುಗಳು ಆಸೀನರಾಗಿದ್ದರೆ, ಇನ್ನೊಂದೆಡೆ ತಮ್ಮ ಅಭಿಪ್ರಾಯಗಳನ್ನು ಸರ್ಕಾರಕ್ಕೆ ತಿಳಿಸಲು ಬಂದಿದ್ದ ಫಲಾನುಭವಿಗಳು ಕುಳಿತಿದ್ದರು.

ಸುಮಾರು ನಾಲ್ಕು ಗಂಟೆಗಳಷ್ಟು ಕಾಲ ನಡೆದ ಈ **"ಜನಮನ – ಜನಾಭಿಪ್ರಾಯ ಸಮಾವೇಶ"** ಸರ್ಕಾರದ ಮೂರನೇ ವರ್ಷಾಚರಣೆಯನ್ನು ಬಹುಕಾಲ ನೆನಪಿನಲ್ಲಿಟ್ಟುಕೊಳ್ಳುವಂತೆ ಸಂಯೋಜಿತವಾಗಿತ್ತು. ಅತ್ಯಾಧುನಿಕ ಗುಣಮಟ್ಟದ ಧ್ವನಿವರ್ಧಕದಲ್ಲಿ ನಾಡಗೀತೆ ಜಯ ಭಾರತ ಜನನಿಯ ತನುಜಾತೆ...... ಮೊಳಗುತ್ತಿದ್ದಂತೆ ಇಡೀ ಸಭಾಂಗಣದಲ್ಲಿ ಒಂದು ರೀತಿಯ ಚೈತನ್ಯ ಸಂಚಲನಗೊಂಡಿತು. ಮುಖ್ಯಮಂತ್ರಿಗಳು ಸಚಿವ ಸಂಪುಟದ ಸದಸ್ಯರಾದಿಯಾಗಿ ಸಭಾಂಗಣದಲ್ಲಿದ್ದವರೆಲ್ಲ ನಾಡಗೀತೆಗೆ ಎದ್ದು ನಿಂತು ಗೌರವ ಸಲ್ಲಿಸಿದ ದೃಶ್ಯ ಅಭೂತಪೂರ್ವವಾಗಿತ್ತು. ಬೃಹತ್ ಎಲ್‌ಇಡಿ ಪರದೆಯ ಮೇಲೆ ಅತ್ಯುತ್ತಮವಾಗಿ ವಿನ್ಯಾಸಗೊಂಡಿದ್ದ ಸರ್ಕಾರದ ಜನಪರ ಕಾರ್ಯಕ್ರಮಗಳನ್ನು ಪರಿಚಯಿಸುವ ಚಿತ್ರಿಕೆಗಳು ಜನಮನ ಸೂರೆಗೊಂಡವು. ಉತ್ತಮ ಗುಣಮಟ್ಟದ ಧ್ವನಿ–ಬೆಳಕಿನ ಸಂಯೋಜನೆ ಇಡೀ ಕಾರ್ಯಕ್ರಮಕ್ಕೆ ವೈಶಿಷ್ಟತೆಯ ಮೆರಗು ನೀಡಿತು.

ಸಿದ್ದರಾಮಯ್ಯನವರು ತಮ್ಮ ಸಚಿವ ಸಂಪುಟದ ಸದಸ್ಯರೆಲ್ಲರ ಜೊತೆಗೆ ವೇದಿಕೆಯ ಮೇಲಕ್ಕೆ ಏರಿದಾಗ ಇಡೀ ಸಭಾಂಗಣವೆ ಅವರ ಈ ನಡೆಯನ್ನು ಮೆಚ್ಚಿ ಕರತಾಡನ ಮಾಡಿತು. ತಮ್ಮ ಸಚಿವ ಸಂಪುಟ ಸಹೋದ್ಯೋಗಿಗಳ ಜೊತೆ ಕುಳಿತ ಮುಖ್ಯಮಂತ್ರಿಗಳು ಸರ್ಕಾರವೇ ಜನಾಭಿಪ್ರಾಯ ಆಲಿಸಲು ಬಂದಿದೆ ಎನ್ನುವ ಭಾವನೆಯನ್ನು ಜನರಲ್ಲಿ ಮೂಡಿಸಿದರು.

ಜನಮನ – ಸರ್ಕಾರದಿಂದ ಜನಾಭಿಪ್ರಾಯ ಸಮಾವೇಶದ







ಉದ್ಘಾಟನೆ ಕೂಡ ವಿಶಿಷ್ಟವಾಗಿತ್ತು. ಮುಖ್ಯಮಂತ್ರಿಗಳು ಹಾಗೂ ಸಚಿವರುಗಳು ಜನಸಾಮಾನ್ಯರು, ಫಲಾನುಭವಿಗಳು, ಲಿಂಗ ಅಲ್ಪಸಂಖ್ಯಾತರ ಜೊತೆಗೂಡಿ ಸಾಂಪ್ರದಾಯಿಕವಾಗಿ ದೀಪ ಬೆಳಗಿಸುವ ಮೂಲಕ ಸಮಾವೇಶಕ್ಕೆ ಚಾಲನೆ ನೀಡಿದರು.

ಫಲಾನುಭವಿಗಳಿಂದ ಜನಾಭಿಪ್ರಾಯ ಕಾರ್ಯಕ್ರಮ ಆರಂಭವಾಗುವ ತನಕ ಸಚಿವ ಸಂಪುಟದ ಸಹೋದ್ಯೋಗಿಗಳ ಜೊತೆ ಕುಳಿತಿದ್ದ ಮಾನ್ಯ ಮುಖ್ಯಮಂತ್ರಿಗಳು ನಂತರ ವಿವಿಧ ಜಿಲ್ಲೆಗಳಿಂದ ಜನಮನ ಸಮಾವೇಶಕ್ಕೆಂದೇ ವಿಶೇಷವಾಗಿ ಆಗಮಿಸಿದ್ದ ಫಲಾನುಭವಿಗಳ ನಡುವೆಯೆ ಕುಳಿತು ಜನಾಭಿಪ್ರಾಯ ಆಲಿಸಿದರು. ಸಹಜವಾಗಿಯೇ ಸರ್ಕಾರದ ಜನಪ್ರಿಯ ಹಾಗೂ ಜನಪರ ಕಾರ್ಯಕ್ರಮವಾದ **"ಅನ್ನಭಾಗ್ಯ"** ಯೋಜನೆಯ ಯಶಸ್ಸಿನ ಬಗ್ಗೆ ಫಲಾನುಭವಿಗಳು ಮೆಚ್ಚುಗೆಯ ಮಾತುಗಳನ್ನಾಡಿದರು. ಅನ್ನಭಾಗ್ಯ ಯೋಜನೆಯಿಂದ ನಮಗೆ ಪ್ರತಿ ತಿಂಗಳು ಕನಿಷ್ಠ 700 ರಿಂದ 800ರೂಗಳು ಉಳಿತಾಯವಾಗುತ್ತದೆ. ಅನ್ನದ ಸಮಸ್ಯೆಯಂತು ನಮಗೆ ಇಲ್ಲವೇ ಇಲ್ಲ. ಗುಣಮಟ್ಟದ ಆಹಾರಧಾನ್ಯ ಮನೆಯ ಮುಂದೆ ಸಿಗುತ್ತಿದೆ. ಇಂತಹ ಯಶಸ್ವಿ ಯೋಜನೆಯ ದುರುಪಯೋಗವನ್ನು ತಡೆಗಟ್ಟಬೇಕು. ಬಿ.ಪಿ.ಎಲ್. ಕಾರ್ಡ್ ನೀಡಿಕೆಯ ನಿಯಮಗಳನ್ನು ಸರಳೀಕರಿಸಿ ಅರ್ಹತೆಯುಳ್ಳ ಎಲ್ಲರಿಗೂ ಆಹಾರಧಾನ್ಯ ವಿತರಿಸಬೇಕು. ಬಡವರ ಹಸಿವನ್ನು ನಿವಾರಿಸಿದ ಸರ್ಕಾರಕ್ಕೆ ನಾವು ಋಣಿಗಳು ಎಂದರು. ಪ್ರತಿ ಯುನಿಟ್‌ಗೆ ನೀಡುವ ಆಹಾರ ಧಾನ್ಯದ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ಕೆಲವು ಫಲಾನುಭವಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

**"ಕ್ಷೀರಭಾಗ್ಯ"** ಯೋಜನೆಯ ಬಗ್ಗೆ ಶಾಲಾಮಕ್ಕಳು ಖುಷಿಯಿಂದ ಮಾತನಾಡಿದರು. ಉಚಿತ ಹಾಲಿನಿಂದಾಗಿ ನಮ್ಮ ಪೌಷ್ಟಿಕಾಂಶ ಹೆಚ್ಚಾಗಿದೆ. ನಾವು ಈಗ ಹೆಚ್ಚು ಲವಲವಿಕೆಯಿಂದ ಕಲಿಯುತ್ತಿದ್ದೇವೆ. ಶಾಲೆಗೆ ತಪ್ಪಿಸಿಕೊಳ್ಳುವುದೇ ಇಲ್ಲ. ಈಗ ವಾರದಲ್ಲಿ ಮೂರು ದಿನ ಕೊಡುತ್ತಿರುವ ಉಚಿತ ಹಾಲಿನ ಸೌಕರ್ಯವನ್ನು ವಾರದಲ್ಲಿ ಆರು ದಿನ ನೀಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡರು.

ಈ ಸರ್ಕಾರ ಬರುವುದಕ್ಕೆ ಮುಂಚೆ ಪ್ರತಿ ಲೀಟರ್ ಹಾಲಿಗೆ ನೀಡುತ್ತಿದ್ದ 2 ರೂಗಳ ಪ್ರೋತ್ಸಾಹ ಧನವನ್ನು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರ ಸ್ವೀಕರಿಸಿದ ದಿನವೇ ನಾಲ್ಕು ರೂಗಳಿಗೆ ಏರಿಕೆ ಮಾಡಿದ್ದನ್ನು ಹಲವಾರು ಫಲಾನುಭವಿಗಳು ಕೃತಜ್ಞತೆಯಿಂದ ಸ್ಮರಿಸಿಕೊಂಡರು. ಒಂದೆರಡು ಹಸು, ಎಮ್ಮೆಗಳನ್ನು ಸಾಕಿಕೊಂಡು ಕಷ್ಟದ ಜೀವನ ನಡೆಸುತ್ತಿದ್ದ ಹಲವರು ಈ **"ಕ್ಷೀರಧಾರೆ"** ಯೋಜನೆಯಿಂದ ಅನುಕೂಲ ಪಡೆದು ತಾವು ಈಗ ನೆಮ್ಮದಿಯ ಜೀವನ ನಡೆಸುತ್ತಿದ್ದೇವೆ. ತಮ್ಮ ಮಕ್ಕಳಿಗೆ ಇಂಜಿನಿಯರಿಂಗ್ ಶಿಕ್ಷಣ ಕೊಡಿಸುತ್ತಿದ್ದೇವೆ. ಈಗ ಆರು ಹಸುಗಳನ್ನು ಸಾಕಿ ಕೈತುಂಬಾ ಹಣ ಸಂಪಾದಿಸುತ್ತಿದ್ದೇವೆ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು. ಹಾಲಿಗೆ ನೀಡುವ ಪ್ರೋತ್ಸಾಹ ಧನ ನೇರವಾಗಿ ನಮ್ಮ ಬ್ಯಾಂಕ್ ಖಾತೆಗೆ ಜಮಾ ಆಗುವುದರಿಂದ ಯಾವುದೇ ರೀತಿಯ ಮಧ್ಯವರ್ತಿಗಳ ಕಾಟವಿಲ್ಲದೆ ಪೂರ್ಣ ಹಣ ತಮಗೆ ಸಕಾಲದಲ್ಲಿ ದೊರೆಯುತ್ತದೆ ಎಂದು ತೃಪ್ತಿ ವ್ಯಕ್ತಪಡಿಸಿದರು.



**"ಕೃಷಿಭಾಗ್ಯ"**ದ ಹಲವಾರು ಫಲಾನುಭವಿಗಳು ಈ ಯೋಜನೆ ನಮ್ಮ ಪಾಲಿಗೆ ಭಾಗ್ಯದ ಬಾಗಿಲನ್ನೆ ತೆರೆದಿದೆ. ಮಳೆಗಾಲದ ನೀರನ್ನು ಕೃಷಿ ಹೊಂಡಗಳಲ್ಲಿ ಸಂಗ್ರಹಿಸಿ ಬೇಸಿಗೆ ಸಮಯದಲ್ಲಿ ಬೆಳೆ ಬೆಳೆಯುವುದಕ್ಕೆ ನಮಗೆ ಬಹಳ ಅನುಕೂಲವಾಗಿದೆ. ಕೃಷಿ ಹೊಂಡದಿಂದಾಗಿ ಸುತ್ತಮುತ್ತಲ ಪ್ರದೇಶದಲ್ಲಿ ಅಂತರ್ಜಲ ಏರಿಕೆಯಾಗಿದೆ. ನೀರಿನ ಕೊರತೆಯಿಂದ ಬೆಳೆ ಕೈಗೆ ಸಿಗುವುದಿಲ್ಲ ಎನ್ನುವ ಪರಿಸ್ಥಿತಿ ಈಗ ಬದಲಾಗಿದೆ. ನೀರಿನ ಮಿತ ಬಳಕೆಯ ಅರಿವು ಕೂಡ ನಮಗೆ ಆಗಿದೆ. ಒಣಭೂಮಿ ಬೇಸಾಯಕ್ಕೆ ಕೃಷಿಭಾಗ್ಯ ಯೋಜನೆಯಿಂದ ಹೊಸ ಬಲ ಬಂದಿದೆ ಎಂದು ರೈತರುಗಳು ಹಲವಾರು ಬಗೆಯಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಬಣ್ಣಿಸಿದರು.

ಸಣ್ಣಪುಟ್ಟ ಸ್ವಯಂ ಉದ್ದಿಮೆಗಾಗಿ ಬ್ಯಾಂಕ್‌ನಲ್ಲಿ ಮಾಡಿದ್ದ ಸಾಲ ತೀರಿಸಲಾಗದೆ ಭಾದೆಯಿಂದ ಬಳಲುತ್ತಿದ್ದ ಹಲವರು ತಮ್ಮ ಬದುಕಿಗೆ **"ಋಣಮುಕ್ತ"** ಯೋಜನೆ ಹೊಸ ಬೆಳಕಾಗಿ ಬಂತು ಎಂದು ಸರ್ಕಾರಕ್ಕೆ ಧನ್ಯತೆಯಿಂದ ಕೈ ಮುಗಿದು ಸ್ಮರಿಸಿದರು. ಸಾಲದ ಹಣ ಮರುಪಾವತಿ ಮಾಡಲಾಗದೆ ಬಡ್ಡಿಯ ಹೊರೆಯನ್ನು ಹೊರಲಾಗದೆ ಬದುಕೇ ಬೇಡವೆನ್ನುವಷ್ಟು ಬೇಸರದಿಂದ ಇದ್ದ ನಮ್ಮ ಜೀವನಕ್ಕೆ ಋಣಮುಕ್ತ ಯೋಜನೆ ತಂಗಾಳಿಯಂತೆ ಬೀಸಿ ನಮ್ಮನ್ನು ಸಾಲದಿಂದ ಮುಕ್ತಿ ಮಾಡಿ ಹೊಸ ಬದುಕಿಗೆ ನಾಂದಿಯಾಯಿತು ಎಂದು ಕೃತಜ್ಞತೆಯಿಂದ ಸರ್ಕಾರವನ್ನು ಅಭಿನಂದಿಸಿದರು.











"ಮನಸ್ವಿನಿ" ಯೋಜನೆಯಡಿ ಪ್ರತಿ ತಿಂಗಳು 500 ರೂಗಳ ಮಾಸಾಶನ ಪಡೆಯುತ್ತಿರುವ ಮದುವೆಯಾಗದೆ ಉಳಿದಿರುವ ಮಹಿಳೆಯರು ನೊಂದ ಮಹಿಳೆಯರ ಕಷ್ಟಗಳನ್ನು ಅರಿತು ನೆರವಿನ ಹಸ್ತ ಚಾಚಿದ ಸರ್ಕಾರದ ಮಾನವೀಯ ಅಂತಃಕರಣವನ್ನು ಅಭಿನಂದಿಸಿದರು. ಸಮಾಜದಲ್ಲಿ ನಿಕೃಷ್ಟವಾಗಿರುವ ಲಿಂಗ ಅಲ್ಪಸಂಖ್ಯಾತರನ್ನು ಸಹ ಸರ್ಕಾರ ಗುರುತಿಸಿ ಅವರಿಗೆ ವಿಶೇಷ ಸ್ಥಾನಮಾನ ನೀಡಿ ಪ್ರತಿ ತಿಂಗಳು 500 ರೂಗಳ ಮಾಶಾಸನ ನೀಡಿ ಅವರಿಗೆ ಸಮಾಜದಲ್ಲಿ ಒಂದು

**ಸರ್ಕಾರದ ಪ್ರಮುಖ ಮುಂಚೂಣಿ ಯೋಜನೆಗಳಾದ 'ಅನ್ನಭಾಗ್ಯ', 'ಕ್ಷೀರಭಾಗ್ಯ', 'ಋಣಮುಕ್ತ', 'ಮೈತ್ರಿ', 'ಮನಸ್ವಿನಿ', 'ವಿದ್ಯಾಸಿರಿ' ಇವುಗಳೆಲ್ಲ ನನ್ನ ಸ್ವಂತ ಅನುಭವದಿಂದ ರೂಪುಗೊಂಡ ಯೋಜನೆಗಳು. ಈ ಯೋಜನೆಗಳಲ್ಲಿ ಮಾನವೀಯ ಅಂತಕರಣವಿದೆ. ಮಾತೃಹೃದಯದ ಸೆಲೆಯಿದೆ. ಕಡುಬಡವರ ನೋವನ್ನು ನಿವಾರಿಸುವ ಚೈತನ್ಯವಿದೆ. ಭವಿಷ್ಯದ ಮುನ್ನೋಟದ ದಾರ್ಶನಿಕತೆಯಿದೆ. ಇವು ಇಂದು ರೂಪಿಸಿ ನಾಳೆ ಮರೆಯುವ ಯೋಜನೆಗಳಲ್ಲ. ಯಾವುದೇ ಸರ್ಕಾರವೂ ಇವುಗಳನ್ನು ಮುಂದುವರೆಸಿಕೊಂಡು ಹೋಗುವಂತಹ ಅನಿವಾರ್ಯತೆಯಿದೆ ಎಂದು ಜನತೆಗೆ ಮನದಟ್ಟು ಮಾಡಿದರು.**





ಗೌರವದ ಸ್ಥಾನ ನೀಡಿದ್ದನ್ನು ಹಲವರು ಮನದುಂಬಿ ಸ್ಮರಿಸಿದರು. ಲಿಂಗ ಅಲ್ಪಸಂಖ್ಯಾತರಿಗೆ ಯಾರೂ ಬಾಡಿಗೆ ಮನೆ ನೀಡದಿರುವ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದ ಹಲವರು ತಮ್ಮ ವಸತಿ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ನೆರವಾಗಬೇಕೆಂದು ಮನವಿ ಮಾಡಿಕೊಂಡರು.

**"ವಿದ್ಯಾಸಿರಿ"** ಹೆಸರೇ ಹೇಳುವಂತೆ ನಮ್ಮ ಪಾಲಿಗೆ ಸಿರಿಯಾಗಿಯೇ ಬಂದಿದೆ ಎಂದು ಹಲವು ವಿದ್ಯಾರ್ಥಿಗಳು ಈ ಯೋಜನೆಯ ಫಲವನ್ನು ಬಣ್ಣಿಸಿದರು. ಸರ್ಕಾರಿ ವಸತಿ ಗೃಹಗಳಲ್ಲಿ ಪ್ರವೇಶ ಸಿಗದೆ ವಿದ್ಯಾಭ್ಯಾಸವನ್ನೇ ಮೊಟಕುಗೊಳಿಸುವಂತಹ ಸಂದರ್ಭದಲ್ಲಿ ವಿದ್ಯಾಸಿರಿ ಸಕಾಲಕ್ಕೆ ನಮ್ಮ ನೆರವಿಗೆ ಬಂತು. ಈಗ ನಾವು ನೆಮ್ಮದಿಯಿಂದ ಕಲಿಯುತ್ತಿದ್ದೇವೆ. ಮಾಸಿಕ 1500ರೂಗಳ ನೆರವಿನ ಮೊತ್ತವನ್ನು ಹೆಚ್ಚು ಮಾಡಿದರೆ ಹಾಗೂ ಸಕಾಲಕ್ಕೆ ಪ್ರತೀ ತಿಂಗಳೂ ಈ ಹಣ ನಮ್ಮ ಖಾತೆಗೆ ಜಮೆಯಾದರೆ ಇನ್ನೂ ಅನುಕೂಲವಾಗುತ್ತದೆ ಎಂದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಹಿಂದುಳಿದ ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಐ.ಎ.ಎಸ್., ಐ.ಪಿ.ಎಸ್. ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಸರ್ಕಾರ ನೀಡುತ್ತಿರುವ ಧನಸಹಾಯ ಯೋಜನೆಯಡಿ ಐ.ಎ.ಎಸ್‌ಗೆ ಆಯ್ಕೆಯಾಗಿರುವ ಕೆಲ ಯುವಕರು ಸರ್ಕಾರದ ಈ ಯೋಜನೆಯನ್ನು ಕೊಂಡಾಡಿದರು. ತಮ್ಮ ಪಾಲಿಗೆ ಗಗನಕುಸುಮವಾಗಿದ್ದ ಐ.ಎ.ಎಸ್ ಹುದ್ದೆಯನ್ನು ನಿಜಕುಸುಮವನ್ನಾಗಿ ಮಾಡಿದ ಸರ್ಕಾರಕ್ಕೆ ಕೃತಜ್ಞತೆ ಅರ್ಪಿಸಿದರು.

ಶಿವಮೊಗ್ಗದ ಪುಟ್ಟ ಬಾಲಕನೊಬ್ಬ ದಿಟ್ಟತನದಿಂದ ತನ್ನ ಭಾವನೆಯನ್ನು ಮುಖ್ಯಮಂತ್ರಿಗಳ ಬಳಿ ತೋಡಿಕೊಂಡಿದ್ದು ವಿಶೇಷವಾಗಿತ್ತು. ಸರ್ಕಾರದ ಬಹುತೇಕ ಸವಲತ್ತುಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮಾತ್ರ ದೊರಕುತ್ತಿವೆ. ಮೇಲ್ವರ್ಗಕ್ಕೆ ಸೇರಿದ ನಮ್ಮಂತಹ ಬಡವರಿಗೂ ಕೂಡ ಸರ್ಕಾರದ ಕೆಲವು ಸವಲತ್ತುಗಳು ದೊರಕುವಂತೆ ಯೋಜನೆಗಳನ್ನು ರೂಪಿಸಬೇಕೆಂದು ನೇರವಾಗಿ ಮುಖ್ಯಮಂತ್ರಿಗಳಿಗೆ ಕೇಳಿದ್ದು ಇಡೀ ಜನಮನ ಕಾರ್ಯಕ್ರಮದಲ್ಲಿ ಎಲ್ಲರ ಗಮನ ಸೆಳೆಯಿತು. ಸರ್ಕಾರ ತಮಗೆ ಬೇಕಾದವರನ್ನ ಕರೆಯಿಸಿಕೊಂಡು, ಅವರಿಂದ ಹೊಗಳಿಕೆಯ ಮಾತುಗಳನ್ನು ಹೇಳಿಸಿಕೊಳ್ಳಲು ಇಂತಹ ಸರ್ಕಾರಿ ಕಾರ್ಯಕ್ರಮಗಳನ್ನು ಸಂಘಟಿಸುತ್ತದೆ




ಎನ್ನುವ ಕಟು ಟೀಕೆಗಳಿಗೆ ಉತ್ತರವಾಗಿ ಈ ಬಾಲಕ ತನ್ನ ಮನದಾಳದ ಮಾತುಗಳನ್ನು ನೇರವಾಗಿ ಮುಖ್ಯಮಂತ್ರಿಗಳಿಗೆ ಹೇಳುವ ಮೂಲಕ ಇಡೀ ಕಾರ್ಯಕ್ರಮಕ್ಕೆ ವಿಶ್ವಾಸಾರ್ಹತೆ ತುಂಬಿದರು.

ಇದೇ ರೀತಿ ಕೃಷಿಭಾಗ್ಯ ಯೋಜನೆಯಡಿ ತನಗೆ ಸಿಗಬೇಕಾದ ಸವಲತ್ತುಗಳನ್ನು ನೀಡಲು ಅಧಿಕಾರಿಗಳು ನಿರಾಕರಿಸುತ್ತಿರುವುದನ್ನು ನೇರವಾಗಿ ಮುಖ್ಯಮಂತ್ರಿಗಳಿಗೆ ದೂರು ನೀಡುವ ಮೂಲಕ ಮತ್ತೊಬ್ಬ ರೈತರು ಗಮನ ಸೆಳೆದರು. ಅಧಿಕಾರಿಗಳು ಲಂಚದ ನಿರೀಕ್ಷೆಯಿಂದ ನಮಗೆ ಯೋಜನೆಯ ನೆರವು ನೀಡದೆ ಸತಾಯಿಸುತ್ತಿದ್ದಾರೆ ಎಂದು ಎಲ್ಲರ




ಸಮ್ಮುಖದಲ್ಲಿ ಯಾವುದೇ ಹಿಂಜರಿಕೆಯಿಲ್ಲದೆ ದೂರು ನೀಡಿದ್ದು "ಜನಮನ" ಕಾರ್ಯಕ್ರಮದ ವಿಶ್ವಾಸಾರ್ಹತೆಗೆ ಇನ್ನೊಂದು ಸಾಕ್ಷಿಯಾಯಿತು.

ಸುಮಾರು ಮೂರು ಗಂಟೆಗಳ ಕಾಲ ಜನಾಭಿಪ್ರಾಯ ಆಲಿಸಿದ ಮುಖ್ಯಮಂತ್ರಿಗಳು ಮೂರು ವರ್ಷದ ತಮ್ಮ ಸರ್ಕಾರದ ಆಡಳಿತ ಫಲಶ್ರುತಿಯನ್ನು ತಮ್ಮದೇ ನಿಧಾನ ಶೈಲಿಯಲ್ಲಿ ಎಳೆಎಳೆಯಾಗಿ ಸಭಿಕರ ಮುಂದೆ ಬಿಡಿಸಿಟ್ಟರು. ಮೇ13,





ಹಸಿವಿನ ಸಂಕಟ ಹಸಿದವರಿಗಷ್ಟೇ ಗೊತ್ತಾಗುತ್ತದೆ. ಕಡು ಬಡವರ ಹಸಿವನ್ನು ನಿವಾರಿಸಲು ಸರ್ಕಾರ ರೂಪಿಸಿರುವ "ಅನ್ನಭಾಗ್ಯ" ಯೋಜನೆಯ ನಡೆ ಸರಿಯಾಗಿದೆ. ಇದು ಮಾನವೀಯ ಅಂತಃಕರಣದ ಯೋಜನೆ.

**ಗುರುರಾಜ ಕರ್ಜಗಿ**
ಶಿಕ್ಷಣ ತಜ್ಞರು



ಗಾಂಧೀ ಚಿಂತನೆಗಳ ಅನುಷ್ಠಾನಕ್ಕೆ ಪೂರಕವಾದ ಹಲವಾರು ಕಾರ್ಯಕ್ರಮಗಳು ಸಿದ್ದರಾಮಯ್ಯ ಸರ್ಕಾರದಲ್ಲಿ ಬಿರುಸಿನಿಂದ ನಡೆಯುತ್ತಿವೆ. ಪ್ರತೀ ಜಿಲ್ಲೆಯಲ್ಲಿ ತಲಾ ಮೂರು ಕೋಟಿ ರೂಗಳ ವೆಚ್ಚದಲ್ಲಿ ಗಾಂಧೀ ಭವನ ನಿರ್ಮಿಸುವ ಯೋಜನೆಯನ್ನು ಇಡೀ ರಾಷ್ಟ್ರದಲ್ಲಿಯೇ ಯಾರೂ ಮಾಡಿಲ್ಲ. ಸಿದ್ದರಾಮಯ್ಯನವರು ಗಾಂಧೀಜಿ ಹೆಸರಿನ ಕಾರ್ಯಕ್ರಮಗಳಿಗೆ 'ನೋ' ಎನ್ನುವ ಪ್ರಶ್ನೆಯೇ ಇಲ್ಲ ಎನ್ನುತ್ತಾರೆ. ಇದು ಗಾಂಧೀಜಿ ಅವರ ಚಿಂತನೆಗಳ ಬಗ್ಗೆ ಅವರಿಗಿರುವ ಬದ್ಧತೆ.

**ಹೋ ಶ್ರೀನಿವಾಸಯ್ಯ**
ಹಿರಿಯ ಗಾಂಧೀವಾದಿಗಳು



ಸಿದ್ದರಾಮಯ್ಯನವರು ದೇವರಾಜ ಅರಸು ನಂತರದ ಸಮರ್ಥ ನಾಯಕರು. ಜನರಿಗೆ ಏನು ಬೇಕು, ಅವರಿಗೆ ಏನನ್ನು ನೀಡಬೇಕು ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿದೆ. ಯೋಜನೆಗಳ ಅನುಷ್ಠಾನದಲ್ಲಿ ಅವರಿಗೆ ಯಶಸ್ಸು ಸಿಗಲಿ.

**ಅ. ನ. ಯಲ್ಲಪ್ಪರೆಡ್ಡಿ**
ಪರಿಸರ ಚಿಂತಕರು



ಚಲನಚಿತ್ರೋದ್ಯಮಕ್ಕೆ ಸಿದ್ದರಾಮಯ್ಯನವರ ಸರ್ಕಾರ ನೀಡಿರುವ ಕೊಡುಗೆ ಬಹಳ ದೊಡ್ಡದು. ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಹೊಣೆಗಾರಿಕೆ ನಮ್ಮ ಮೇಲಿದೆ.

**ಹಂಸಲೇಖ**
ಹಿರಿಯ ಚಲನಚಿತ್ರ ಸಂಗೀತ ನಿರ್ದೇಶಕರು



2013ರಂದು ಸಹಸ್ರಾರು ಸಾರ್ವಜನಿಕರ ಸಮ್ಮುಖದಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಂದರ್ಭವನ್ನು ಸ್ಮರಿಸಿಕೊಂಡರು. ಚುನಾವಣೆಯ ಸಂದರ್ಭದಲ್ಲಿ ಜನತೆಗೆ ನೀಡಿದ್ದ ಭರವಸೆಗಳಲ್ಲಿ ಶೇಕಡ 80ಕ್ಕೂ ಹೆಚ್ಚು ಭರವಸೆಗಳನ್ನು ಈಡೇರಿಸಿ ನಾವು ನುಡಿದಂತೆ ನಡೆದಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಂಡರು.

ಸರ್ಕಾರದ ಪ್ರಮುಖ ಮುಂಚೂಣಿ ಯೋಜನೆಗಳಾದ 'ಅನ್ನಭಾಗ್ಯ', 'ಕ್ಷೀರಭಾಗ್ಯ', 'ಋಣಮುಕ್ತ', 'ಮೈತ್ರಿ', 'ಮನಸ್ವಿನಿ', 'ವಿದ್ಯಾಸಿರಿ' ಇವುಗಳೆಲ್ಲ ನನ್ನ ಸ್ವಂತ ಅನುಭವದಿಂದ ರೂಪುಗೊಂಡ ಯೋಜನೆಗಳು. ಈ ಯೋಜನೆಗಳಲ್ಲಿ ಮಾನವೀಯ ಅಂತಕರಣವಿದೆ. ಮಾತೃಹೃದಯದ ಸೆಲೆಯಿದೆ. ಕಡುಬಡವರ ನೋವನ್ನು ನಿವಾರಿಸುವ ಚೈತನ್ಯವಿದೆ. ಭವಿಷ್ಯದ ಮುನ್ನೋಟದ ದಾರ್ಶನಿಕತೆಯಿದೆ. ಇವು ಇಂದು ರೂಪಿಸಿ ನಾಳೆ ಮರೆಯುವ ಯೋಜನೆಗಳಲ್ಲ. ಯಾವುದೇ ಸರ್ಕಾರವೂ ಇವುಗಳನ್ನು ಮುಂದುವರೆಸಿಕೊಂಡು ಹೋಗುವಂತಹ ಅನಿವಾರ್ಯತೆಯಿದೆ ಎಂದು ಜನತೆಗೆ ಮನದಟ್ಟು ಮಾಡಿದರು.

ಫಲಾನುಭವಿಗಳ ಅಭಿಪ್ರಾಯವನ್ನು ಮೆಚ್ಚಿದ ಮುಖ್ಯಮಂತ್ರಿಗಳು ಶಾಲಾ ಮಕ್ಕಳಿಗೆ ಮೀಸಲಾದ 'ಕ್ಷೀರಭಾಗ್ಯ' ಯೋಜನೆಯನ್ನು ಮಕ್ಕಳ ಆಶಯಕ್ಕೆ ಅನುಗುಣವಾಗಿ ವಾರದಲ್ಲಿ ಆರು ದಿನಗಳಿಗೆ ವಿಸ್ತರಿಸುವುದಾಗಿ ವೇದಿಕೆಯಲ್ಲೇ ಭರವಸೆ ನೀಡಿದರು. 'ಕೃಷಿಭಾಗ್ಯ' ಯೋಜನೆಯ ಅಡಿಯಲ್ಲಿ ಕಳಪೆ ಪ್ಲಾಸ್ಟಿಕ್ ಹಾಳೆಗಳು ಪೂರೈಕೆಯಾಗುತ್ತಿವೆ ಎನ್ನುವ ದೂರಿನ ಬಗ್ಗೆ ಪ್ರಸ್ತಾಪಿಸಿ ಇದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ವೇದಿಕೆಯ ಮೇಲಿದ್ದ ಕೃಷಿ ಸಚಿವರಿಗೆ ಸ್ಥಳದಲ್ಲೇ ಸೂಚನೆ ನೀಡಿದರು. ಮೈತ್ರಿ ಮತ್ತು ಮನಸ್ವಿನಿ ಯೋಜನೆಯ ಫಲಾನುಭವಿಗಳಿಗೆ ಆದ್ಯತೆಯ ಮೇಲೆ ವಸತಿ ಕಲ್ಪಿಸುವ ಇಂಗಿತ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಈ ವರ್ಷ ಭೀಕರ ಬರಗಾಲ ಎದುರಿಸುತ್ತಿರುವ ಸಂದರ್ಭದಲ್ಲಿ ನಾವು ನಮ್ಮ ಸರ್ಕಾರದ




ಸಾಧನೆಗಳನ್ನು ಸಂಭ್ರಮ ಸಡಗರದಿಂದ ಆಚರಿಸುವ ಮನಸ್ಥಿತಿಯಲ್ಲಿಲ್ಲ. ಈಗ ಬರ ನಿರ್ವಹಣೆಯೇ ನಮ್ಮ ಸರ್ಕಾರದ ಪ್ರಥಮ ಆದ್ಯತೆ. ಒಳ್ಳೆಯ ಮಳೆಗಾಲವಾಗಿ ಮಳೆ ಬೆಳೆ ತೃಪ್ತಿಕರವಾದರೆ ನಂತರದ ದಿನಗಳಲ್ಲಿ ಸರ್ಕಾರದ ಮೂರುವರ್ಷಗಳ ಸಂಭ್ರಮವನ್ನು ಸಾಧನೆಯ ಸಮಾವೇಶವನ್ನಾಗಿ ಅರ್ಥಪೂರ್ಣವಾಗಿ ಆಚರಿಸಲು ಚಿಂತಿಸುವುದಾಗಿ ಮುಖ್ಯಮಂತ್ರಿಗಳು ಹೇಳಿದರು.

ಕಳೆದ ವರ್ಷ ಸರ್ಕಾರ ಆರಂಭಿಸಿರುವ ಈ ಜನಮನ ಕಾರ್ಯಕ್ರಮ ಜನರ ಆಸೆ, ಆಕಾಂಕ್ಷೆ ಮತ್ತು ನಿರೀಕ್ಷೆಗಳನ್ನು ಬಿಂಬಿಸುತ್ತದೆ. ಸರ್ಕಾರದ ಯೋಜನೆಗಳಿಂದ ಫಲಾನುಭವಿಗಳಿಗೆ ಆಗಿರುವ ಅನುಕೂಲ ಹಾಗೂ ಸವಲತ್ತುಗಳನ್ನು ಪಡೆಯುವಲ್ಲಿ ಆಗುತ್ತಿರುವ ಅನಾನುಕೂಲಗಳ ಬಗ್ಗೆ ಜನಪ್ರತಿನಿಧಿಗಳಿಗೆ ವಾಸ್ತವ ಚಿತ್ರಣವನ್ನು ನೀಡುತ್ತದೆ. ಆದ್ದರಿಂದ ಎಲ್ಲ ಸಚಿವರುಗಳು ತಮ್ಮ ಉಸ್ತುವಾರಿ ಜಿಲ್ಲೆಗಳಲ್ಲಿ ಇಂತಹ ಜನಮನ ಕಾರ್ಯಕ್ರಮವನ್ನು ಏರ್ಪಡಿಸಿ ಜನಾಭಿಪ್ರಾಯವನ್ನು ಪಡೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ವೇದಿಕೆಯಲ್ಲಿದ್ದ ಎಲ್ಲಾ ಸಚಿವರಿಗೆ ಸೂಚನೆ ನೀಡಿದರು.

ಸರ್ಕಾರದ ಮೂರು ವರ್ಷಗಳ ದ್ಯೇಯ ವಾಕ್ಯ **"ನುಡಿದಂತೆ ನಡೆಯುತ್ತಿದ್ದೇವೆ ... "ನಾಲ್ಕನೇ ವರ್ಷದೆಡೆಗೆ ಭರವಸೆಯ ನಡಿಗೆ"** ಎನ್ನುವ ಶೀರ್ಷಿಕೆಯಡಿ ನಡೆದ ಈ ಸಮಾವೇಶ ಅರ್ಥಪೂರ್ಣವಾಗಿತ್ತು. ಕಳೆದ ವರ್ಷ ನಡೆದ









ಎಲ್ಲ ಜನಮನ ಕಾರ್ಯಕ್ರಮಗಳಲ್ಲಿ ಶಾಲಾ ಮಕ್ಕಳ ಒಕ್ಕೊರಲಿನ ಕೋರಿಕೆಯಾಗಿದ್ದ ವಾರದಲ್ಲಿ ಆರು ದಿನಗಳೂ ಉಚಿತ ಬಿಸಿ ಹಾಲು ಪೂರೈಕೆಗೆ ಸರ್ಕಾರದ ಮೂರನೇ ವರ್ಷಾಚರಣೆಯ ದಿನದಂದು ಸಮ್ಮತಿ ಸಿಕ್ಕಿತು. ಇದು ಜನಾಭಿಪ್ರಾಯಕ್ಕೆ ದೊರೆತ ಸರ್ಕಾರದ ಸಕರಾತ್ಮಕ ಸ್ಪಂದನೆ. ಹಾಗೆಯೇ "ಜನಮನ" ಕಾರ್ಯಕ್ರಮದ ಯಶಸ್ಸಿಗೆ ಸಂದ ಮನ್ನಣೆ.



# ಸರ್ಕಾರದ ಯೋಜನೆಗಳ ಸಾಧಕ, ಬಾಧಕ ಪರಿಚಯಿಸಿದ ಜನಮನ

▪ ಹರತೀಸುತ

**ಮು**ಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೋಟ್ಯಾಂತರ ರೂ.ಗಳ ಸಬ್ಸಿಡಿ ನೀಡಿ ಜಾರಿಗೆ ತಂದಿರುವ ಯೋಜನೆಗಳ ಬಗ್ಗೆ ಇನ್ನೂ ಮೌಲ್ಯಮಾಪನವೇನೂ ಸರ್ಕಾರದ ಮಟ್ಟದಲ್ಲಿ ನಡೆದಿಲ್ಲ. ಆದರೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಡೆಸುವ "ಜನಮನ" ಕಾರ್ಯಕ್ರಮ ಫಲಾನುಭವಿಗಳ ಮನಸ್ಥಿತಿ ಅರಿಯಲು ಉತ್ತಮ ವೇದಿಕೆಯಾಗಿ, ಆ ಮೂಲಕ ಒಂದು ರೀತಿಯಲ್ಲಿ ಮೌಲ್ಯಮಾಪನ ನಡೆದಿದೆ.

2013ರ ಮೇ 13ರಂದು ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅಧಿಕಾರ ಸ್ವೀಕರಿಸುತ್ತಿದ್ದಂತೆ ಜನಪರವಾದ ಹಲವು ಕಾರ್ಯಕ್ರಮಗಳನ್ನು ಘೋಷಿಸಿದರು. ಹಸಿವು ಮುಕ್ತ ರಾಜ್ಯ ರೂಪಿಸಲು ಅನ್ನಭಾಗ್ಯ, ಮಕ್ಕಳ ಪೌಷ್ಠಿಕಾಂಶದ ಕೊರತೆ ನೀಗಿಸಲು ಹಾಗೂ ಶಾಲೆಗಳ ಕಡೆ ಆಕರ್ಷಿಸಲು ಕ್ಷೀರಭಾಗ್ಯ, ಹೈನೋದ್ಯಮದಲ್ಲಿ ತೊಡಗಿರುವ ರೈತರ ನೆರವಿಗೆ ಧಾವಿಸಲು ಹಾಲಿಗೆ ನೀಡುವ ಪ್ರೋತ್ಸಾಹಧನದ ಪ್ರಮಾಣ ಹೆಚ್ಚಳ, ಹಾಸ್ಟೆಲ್ ಸೌಲಭ್ಯ ಸಿಗದ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ, ವಸತಿ ರಹಿತರಿಗಾಗಿ ವಸತಿ ಭಾಗ್ಯ, ಮುಸ್ಲಿಂ ಮಹಿಳೆಯರ ವಿವಾಹಕ್ಕಾಗಿ ಶಾದಿಭಾಗ್ಯ, ಮದುವೆಯಾಗದ ಹೆಣ್ಣು ಮಕ್ಕಳಿಗಾಗಿ ಮನಸ್ವಿನಿ, ಲೈಂಗಿಕ ಅಲ್ಪಸಂಖ್ಯಾತರಿಗಾಗಿ ಮೈತ್ರಿ, ರೈತರಿಗೆ ನ್ಯಾಯಯುತ ಬೆಲೆ ಸಿಗುವಂತಾಗಲು ಆನ್‌ಲೈನ್ ಮಾರುಕಟ್ಟೆ, ಕೃಷಿ ಭಾಗ್ಯ, ಪಶುಭಾಗ್ಯ ಹೀಗೆ ಹಲವು ಯೋಜನೆಗಳನ್ನು ಜಾರಿಗೆ ತಂದರು.

ನಾಡಿನ ಕೋಟ್ಯಾಂತರ ಜನರಿಗೆ ಈ ಎಲ್ಲಾ ಯೋಜನೆಗಳ ಫಲ ಸಿಕ್ಕಿರುವುದು ಸುಳ್ಳೇನು ಅಲ್ಲ. ನಾಡಿನ ಜನ ಸಾಮಾನ್ಯರಿಗೆ ಕನಿಷ್ಠ ಅಗತ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಹತ್ತು ಹಲವು ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲು ಸರ್ಕಾರ ಪ್ರಯತ್ನ ನಡೆಸಿದೆ.

ಬಡವರ ಹಸಿವಿನ ಅರಿವಿಲ್ಲದ ಕೆಲ ಪಟ್ಟಭದ್ರರು ಹಾಗೂ ಪ್ರತಿಪಕ್ಷಗಳು ಸರ್ಕಾರದ ಭಾಗ್ಯ ಯೋಜನೆಗಳ ಸರಣಿಗಳನ್ನು ಟೀಕಿಸಿದರು. ಅನ್ನಭಾಗ್ಯವನ್ನು ಕನ್ನಭಾಗ್ಯವೆಂದು ಜರಿದರು. ಯೋಜನೆಗಳು ಬೊಕ್ಕಸಕ್ಕೆ ಭಾರವೆಂದು ಕಿಡಿಕಾರಿದರು. ಬಡವರು ಸೋಮಾರಿಗಳಾಗುತ್ತಿದ್ದಾರೆಂದು ಲೇವಡಿ ಮಾಡಿದರು. ಆದರೆ ಪ್ರತಿಯೊಂದು ಯೋಜನೆಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಬಾಲ್ಯ ಹಾಗೂ ಶಿಕ್ಷಣದ ಸಂದರ್ಭದಲ್ಲಿ ಎದುರಿಸಿದ ಸಂಕಟ, ನೋವು, ಅಪಮಾನಗಳೇ ಇಂತಹ ಬಡವರ ಪರವಾದ ಹಾಗೂ ಜನಪರವಾದ ಯೋಜನೆಗಳನ್ನು ರೂಪಿಸಲು ಕಾರಣವಾಗಿದೆ.

ಅನೇಕ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರೇ ಈ ಮಾತನ್ನು ಹೇಳಿದ್ದಾರೆ. ಆ ಮೂಲಕ ಬಡವರ, ಶೋಷಿತರ ಪರವಾದ ತಮ್ಮ ಹೋರಾಟವನ್ನು ಸಮರ್ಥಿಸಿದ್ದಾರೆ. ಇಷ್ಟು ದಿನ ದುಡಿದು ಹೈರಾಣಾದ ಬಡವರು ಈಗಲಾದರೂ ನೆಮ್ಮದಿಯಾಗಿರಲಿ ಎಂಬ ಸಾಮಾಜಿಕ ನ್ಯಾಯದ ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಯೊಂದು ಯೋಜನೆಯನ್ನು ರೂಪಿಸಿದಾಗಲೂ ಆರಂಭದಲ್ಲಿ ಲೋಪಗಳು ಸರ್ವೇ ಸಾಮಾನ್ಯ, ದಿನ ಕಳೆದಂತೆ ಯೋಜನೆಗಳು ಎಷ್ಟು ಉಪಯುಕ್ತ ಎಂಬುದು ಅರಿವಾಗುತ್ತದೆ. ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರು, ಅನ್ನಭಾಗ್ಯ ಯೋಜನೆ ಜಾರಿಗೆ ತಂದಿದ್ದರಿಂದಲೇ ಇಂತಹ ಬರದಲ್ಲೂ ಜನಸಾಮಾನ್ಯರಿಗೆ ಹಸಿವಿನ ಅನುಭವವಾಗಿಲ್ಲವೆಂದು ಮುಕ್ತಕಂಠದಿಂದ ಶ್ಲಾಘಿಸಿದ್ದನ್ನು ಇಲ್ಲಿ ನೆನಪಿಸಿಕೊಂಡಾಗ ಸರ್ಕಾರದ ಯೋಜನೆಗಳು ಎಷ್ಟರ ಮಟ್ಟಿಗೆ ಉಪಯುಕ್ತವಾಗಿವೆ ಎಂಬುದರ ಅರಿವಾಗುತ್ತದೆ.

ಸಿದ್ದರಾಮಯ್ಯ ನೇತೃತ್ವದ ಯೋಜನೆಗಳು ಫಲಾನುಭವಿಗಳ ಪಾಲಿಗೆ ಎಷ್ಟು ಅಗತ್ಯವೆಂಬುದನ್ನು ಅರಿಯುವ ಪ್ರಯತ್ನ ವಾರ್ತಾ ಇಲಾಖೆಯ "ಜನಮನ" ಕಾರ್ಯಕ್ರಮದ ಮೂಲಕ ಆಗಿರುವುದು ಸುಳ್ಳೇನು ಅಲ್ಲ.

**ನಾಡಿಮಿಡಿತ ತಿಳಿಯುವ ಯತ್ನ:**

ವಾರ್ತಾ ಇಲಾಖೆಯ "ಜನಮನ" ಕಾರ್ಯಕ್ರಮವನ್ನು ರೂಪಿಸಿ ಒಂದು ವರ್ಷ ಕಳೆದಿದೆ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ಹಾಗೂ ಬೆಂಗಳೂರುಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ವಿವಿಧ ಜಿಲ್ಲೆಗಳಲ್ಲಿ ಜನಮನ ಯಶಸ್ವಿಯಾಗಿ ನಡೆದಿದೆ.

ಕಾರ್ಯಕ್ರಮ ಸಂಘಟಿಸುವಲ್ಲಿ ಸಣ್ಣಪುಟ್ಟ ಲೋಪಗಳೇನೆ ಇದ್ದರೂ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸದುದ್ದೇಶ ಇಟ್ಟು ರೂಪಿಸಿರುವ ಯೋಜನೆ ಇದು ಎಂಬುದು ಕಾರ್ಯಕ್ರಮ ನೋಡಿದ ಯಾರಿಗಾದರೂ ಅರ್ಥವಾಗುತ್ತದೆ. ಈ ಕಾರ್ಯಕ್ರಮದ ಹಿಂದೆ ಕಾಳಜಿ ಇದೆ. ಸರ್ಕಾರದ ಯೋಜನೆಗಳ ಬಗ್ಗೆ ಜನರ ನಾಡಿಮಿಡಿತ ಅರಿಯುವ, ಏನಾದರೂ ಬದಲಾವಣೆಗಳಿದ್ದರೆ ಅದನ್ನು ಜಾರಿಗೊಳಿಸಲು ಸರ್ಕಾರಕ್ಕೆ ನೆರವಾಗುವ ಪ್ರಾಮಾಣಿಕ ಪ್ರಯತ್ನ ಇರುವುದು ಕಂಡು ಬರುತ್ತದೆ.

ಬೆಂಗಳೂರಿನಲ್ಲಿ ಜಿಕೆವಿಕೆಯಲ್ಲಿ ಇತ್ತೀಚೆಗೆ ನಡೆದ "ಜನಮನ" ಕಾರ್ಯಕ್ರಮದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬಂದಿದ್ದ ವಿವಿಧ ಫಲಾನುಭವಿಗಳು ಯೋಜನೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಂಡರು. ಯೋಜನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಆ ಮೂಲಕ ಸರ್ಕಾರದ ಯೋಜನೆಗಳು ಜನರಿಗೆ ಎಷ್ಟರ ಮಟ್ಟಿಗೆ ಇಷ್ಟವಾಗಿವೆ ಹಾಗೂ ಎಷ್ಟರ ಮಟ್ಟಿಗೆ ಅರ್ಹರಿಗೆ ತಲುಪಿವೆ ಎಂಬುದು ಈ ಕಾರ್ಯಕ್ರಮದ ಮೂಲಕ ಸರ್ಕಾರದ ಅರಿವಿಗೆ ಬಂತು.

**ಕಾರ್ಯಕ್ರಮದ ಸಂಘಟನೆ ಹೇಗಿತ್ತು?:**

ಬೆಂಗಳೂರಿನ ಜಿಕೆವಿಕೆ ಕಾರ್ಯಕ್ರಮಕ್ಕೆ ಪ್ರತಿ ಜಿಲ್ಲೆಯಿಂದ 10 ಜನರನ್ನು ಕರೆತರಲಾಗಿತ್ತು. ಪ್ರತಿಯೊಬ್ಬರು ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿಯಲ್ಲಿ ಅನುಮಾನಗಳನ್ನು ಪರಿಹಾರ ಮಾಡಿಕೊಂಡರು, ಆಗಬೇಕಾಗಿರುವ ಬದಲಾವಣೆಗಳನ್ನು ಹೇಳಿಕೊಂಡರು.

**ಫಲಶ್ರುತಿ ಏನು?:**

ಕ್ಷೀರಭಾಗ್ಯ ಯೋಜನೆಯ ಮಕ್ಕಳು ವಾರದಲ್ಲಿ ಆರು ದಿನವೂ ಹಾಲು ಕೊಡಬೇಕೆಂಬ ಮನವಿ ಮಾಡಿದರು. ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿಯ ಪ್ರಮಾಣ ಹೆಚ್ಚಿಸುವಂತೆ ಕೋರಿದರು, ಸಾಮಾನ್ಯ ವರ್ಗದ ಬಡವರಿಗೂ ವಿದ್ಯಾಸಿರಿ



ಬೇಕೆಂಬ ಬೇಡಿಕೆಯನ್ನಿಟ್ಟರು, ಯೋಜನೆಗಳ ಜಾರಿಯಲ್ಲಿ ಆಗುತ್ತಿರುವ ಲೋಪಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಲೈಂಗಿಕ ಅಲ್ಪಸಂಖ್ಯಾತರು, ಬಡ ಮಹಿಳೆಯರು ನೀಡುತ್ತಿರುವ ಪಿಂಚಣಿಯ ಪ್ರಮಾಣ ಹೆಚ್ಚಿಸುವಂತೆ ಮನವಿ ಮಾಡಿದರು, ದೇವದಾಸಿ ಎಂಬ ಅನಿಷ್ಠ ಪದ್ಧತಿಗೆ ಒಳಗಾಗಿರುವ ಮಹಿಳೆಯರು ತಮಗೂ ಸೂರು ಕಲ್ಪಿಸುವಂತೆ ಹಕ್ಕೊತ್ತಾಯ ಮಂಡಿಸಿದರು.

ಯೋಜನೆಯ ಫಲ ಎಷ್ಟರ ಮಟ್ಟಿಗೆ ಆಗಿದೆ ಎಂದರೆ ಜನಮನ ಕಾರ್ಯಕ್ರಮಕ್ಕೆ ಬಂದಿದ್ದ ಫಲಾನುಭವಿಗಳಲ್ಲಿ ಕೆಎಎಸ್ ಹಾಗೂ ಐಎಎಸ್ ಪರೀಕ್ಷೆಗಳಲ್ಲಿ ಪಾಸಾಗಿರುವವರು ಇದ್ದರು. ಅಂತಹವರು ವಿದ್ಯಾಕ್ಷೇತ್ರಕ್ಕೆ ಸರ್ಕಾರದಿಂದ ಆಗಬೇಕಾಗಿರುವ ಅಗತ್ಯಗಳ ಕುರಿತು ಸಲಹೆಗಳನ್ನು ನೀಡಿದರು.

ಕೆಲ ಯೋಜನೆಗಳ ಫಲ ಪಡೆಯಲು ಎಷ್ಟರ ಮಟ್ಟಿಗೆ ಲಂಚ ನೀಡಬೇಕಾಗಿದೆ ಎಂಬ ಅಂಶವನ್ನು ಮನವರಿಕೆ ಮಾಡಿಕೊಟ್ಟ ಫಲಾನುಭವಿಗಳು ಇದ್ದಾರೆ. ಆ ಮೂಲಕ ಸರ್ಕಾರದ ಯೋಜನೆಗಳ ದುರುಪಯೋಗವನ್ನು ತಡೆಗಟ್ಟುವುದನ್ನು ಫಲಾನುಭವಿಗಳು ಒತ್ತಾಯ ಮಾಡಿದರು.

ಸರ್ಕಾರದ ಜನಪರ ಯೋಜನೆಗಳ ಫಲಾನುಭವಿಗಳ ಮುಕ್ತ ಅನಿಸಿಕೆಗಳನ್ನು ಸಾವಧಾನದಿಂದಲೇ ಆಲಿಸಿ, ಈ ಎಲ್ಲಾ ಬೇಡಿಕೆಗಳಿಗೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸ್ಥಳದಲ್ಲಿಯೇ ಹಲವು ಬೇಡಿಕೆಯನ್ನು ಈಡೇರಿಸುವ ಘೋಷನೆಗಳನ್ನು ಮಾಡಿ ಭಾಗ್ಯ ಸರಣಿಯ ಯೋಜನೆಗಳಿಗೆ ಇನ್ನಷ್ಟು ಬಲ ತುಂಬಿದರು. ವಾರದಲ್ಲಿ ಆರು ದಿನವೂ ಮಕ್ಕಳಿಗೆ ಹಾಲು, ದೇವದಾಸಿಯರಿಗೆ ಮನೆ, ದಲಿತರ ಕಾಲೋನಿಗಳಿಗೆ ಕಾಂಕ್ರಿಟ್ ರಸ್ತೆ ಹೀಗೆ ಹಲವು ಕಾರ್ಯಕ್ರಮಗಳನ್ನು ಸಿದ್ದರಾಮಯ್ಯ ಪ್ರಕಟಿಸಿದರು.

**ಭ್ರಷ್ಟಾಚಾರಕ್ಕೆ ಕಡಿವಾಣ ಸಹಕಾರಿ:**

ಜನಮನ ಕಾರ್ಯಕ್ರಮ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವಲ್ಲಿ ಸಹಕಾರಿಯೂ ಆಗಿದೆ ಎಂದೇ ಹೇಳಲಾಗುತ್ತಿದೆ. ಫಲಾನುಭವಿಗಳು ಯೋಜನೆಯ ಫಲ ಪಡೆಯಲು ತಾವು ಪಡೆಯುವ ಸಂಕಷ್ಟವನ್ನು ಮುಖ್ಯಮಂತ್ರಿ ಅಥವಾ ಮಂತ್ರಿಗಳ ಬಳಿಯಲ್ಲಿ ನೇರವಾಗಿ ಹೇಳಿಕೊಳ್ಳಲು ಅವಕಾಶ ಇದೆ. ಮುಖ್ಯಮಂತ್ರಿ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿಯೇ ಕೆಲ ಫಲಾನುಭವಿಗಳು ತಮ್ಮ ಕಹಿ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಕೆಲ ಮಂತ್ರಿಗಳು ಸ್ಥಳದಲ್ಲಿಯೇ ಸ್ಪಂದಿಸಿದ್ದಾರೆ. ಇದರಿಂದ ಸರ್ಕಾರ ಬಡವರಿಗೆ ನೀಡುವ ಸವಲತ್ತುಗಳನ್ನು ವಿತರಿಸುವ ಅಧಿಕಾರಿಗಳು ಹಾಗೂ ನೌಕರರು ಲಂಚ ಕೇಳಲು ಇನ್ನು ಮುಂದೆ ಹಿಂದೆ ಮುಂದೆ ನೋಡುವ ಸ್ಥಿತಿ ಎದುರಾದರೂ ಅಚ್ಚರಿ ಪಡಬೇಕಾಗಿಲ್ಲ.

**ಆಡಳಿತ ಚುರುಕಿಗೂ ಸಹಕಾರಿ:**

ವಾರ್ತಾ ಇಲಾಖೆಯ ದೂರದೃಷ್ಟಿಯ ಈ ಕಾರ್ಯಕ್ರಮ ಕಾರ್ಯಾಂಗದ ಚುರುಕಿಗೂ ಸಹಕಾರಿಯಾಗುತ್ತದೇ ಎಂದೇ ವಿಶ್ಲೇಷಣೆ ಮಾಡಲಾಗುತ್ತಿದೆ. ರಾಜ್ಯದಲ್ಲಿ ಆಡಳಿತ ಯಂತ್ರಕ್ಕೆ ಜಡತ್ವ ಬಂದಿದೆ ಎಂಬ ಟೀಕೆಗಳಿಗೆ ಬರವೇನೂ ಇಲ್ಲ. ಆದರೆ ಇಂತಹ ಕಾರ್ಯಕ್ರಮಗಳ ಮೂಲಕ ಆಡಳಿತ ಯಂತ್ರವನ್ನು ಚುರುಕು ಮಾಡಲು ಸಾಧ್ಯವಿದೆ. ಹೇಗೆ ಭ್ರಷ್ಟಾಚಾರವನ್ನು ಅಧಿಕಾರಸ್ಥರಿಗೆ ಮನವರಿಕೆ ಮಾಡಿಕೊಡಲು ಅವಕಾಶ ಇದೆಯೋ ಅದೇ ರೀತಿಯಲ್ಲಿ ಜಡ್ಡುಗಟ್ಟಿರುವ ಆಡಳಿತದ ಬಗ್ಗೆ ಸರ್ಕಾರದ ಗಮನಕ್ಕೆ ತರಬಹುದಾಗಿದೆ. ಆಗ ಮುಖ್ಯಮಂತ್ರಿಯಾಗಲಿ ಅಥವಾ ಸಂಬಂಧಪಟ್ಟ ಇಲಾಖೆಗಳ ಮಂತ್ರಿಗಳು ತಮ್ಮ ತಮ್ಮ ಇಲಾಖೆಯಲ್ಲಿ ಚುರುಕು ಮೂಡಿಸಬಹುದಾಗಿದೆ. ಅಷ್ಟರ ಮಟ್ಟಿಗೆ ಇದೊಂದು ಯಶಸ್ವಿ ಕಾರ್ಯಕ್ರಮವೇ ಸರಿ.

**ಮೌಲ್ಯಮಾಪನ ಆಗಬೇಕು:**

ಜನಮನ ಕಾರ್ಯಕ್ರಮ ನಡೆದ ಮಾರನೇಯ ದಿನವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದರಿಂದ ಪ್ರೇರಿತರಾದವರ ರೀತಿಯಲ್ಲಿ ಯೋಜನೆಗಳ ಬಗ್ಗೆ ಮೌಲ್ಯಮಾಪನ ನಡೆಸುವುದಾಗಿ ಘೋಷಿಸಿದ್ದಾರೆ. ಜನಮನ ಕಾರ್ಯಕ್ರಮ ಮುಖ್ಯಮಂತ್ರಿಗಳ ಮನವನ್ನು ಎಷ್ಟರ ಮಟ್ಟಿಗೆ ಸೆಳೆದಿರಬಹುದೆಂಬುದು ಇದರಿಂದಲೇ ತಿಳಿಯುತ್ತದೆ. ವಿವಿಧ ಯೋಜನೆಗಳ ಸಹಾಯಧನಗಳಿಗಾಗಿಯೇ ಸರ್ಕಾರ ಸುಮಾರು 20 ಸಾವಿರ ಕೋಟಿ ರೂ.ಗಳನ್ನು ವೆಚ್ಚ ಮಾಡುತ್ತದೆ. ಬಡವರು, ಅಶಕ್ತರು, ಅಸಹಾಯಕರ ಬದುಕಿನಲ್ಲಿ ಒಂದಿಷ್ಟು ನೆಮ್ಮದಿ ಮೂಡಿಸಲು ಹಣ ವೆಚ್ಚ ಮಾಡಲೇಬೇಕಾಗುತ್ತದೆ. ಈ ಬಗ್ಗೆ ಏನೇ ಟೀಕೆಗಳಿದ್ದರೂ ಸರ್ಕಾರ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಆದರೆ ಇಷ್ಟೊಂದು ದೊಡ್ಡ ಮೊತ್ತ ವೆಚ್ಚ ಮಾಡುವಾಗ ಅದರಿಂದ ರೂಪಿಸುವ ಯೋಜನೆಗಳ ಅನುಷ್ಠಾನದ ಬಗ್ಗೆ ಮೌಲ್ಯಮಾಪನ ಅಗತ್ಯವಾಗಿ ಆಗಲೇಬೇಕಾಗುತ್ತದೆ. ವಾರ್ತಾ ಇಲಾಖೆಯ ಜನಮನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಫಲಾನುಭವಿಗಳು ವ್ಯಕ್ತಪಡಿಸಿರುವ ಮುಕ್ತ ಅನಿಸಿಕೆಗಳು ಮುಖ್ಯಮಂತ್ರಿಗಳ ಕಣ್ಣು ತೆರೆಸಿವೆ. ಇದೀಗ ಮುಖ್ಯಮಂತ್ರಿಗಳ ಮೇಲೆ ವೈಜ್ಞಾನಿಕವಾಗಿ ಯೋಜನೆಗಳ ಅನುಷ್ಠಾನದ ಬಗ್ಗೆ ಮೌಲ್ಯಮಾಪನ ನಡೆಸುವ ಜವಾಬ್ದಾರಿ ಬಿದ್ದಿದೆ.

**ವಿಸ್ತಾರದ ಅಗತ್ಯವಿದೆ:**

ಇಂತಹ ಯಶಸ್ವಿಯಾದ ಜನಮನ ಕಾರ್ಯಕ್ರಮ ಕೇವಲ ಬೆಂಗಳೂರು ಅಥವಾ ಜಿಲ್ಲಾ ಕೇಂದ್ರಗಳಿಗೆ ಸೀಮಿತವಾಗಬಾರದು.ತಾಲೂಕು ಕೇಂದ್ರಗಳಿಗೂ ತೆಗೆದುಕೊಂಡು ಹೋಗಬೇಕು. ಶಾಸಕರು ಹಾಗೂ ಮಂತ್ರಿಗಳ ನೇತೃತ್ವದಲ್ಲಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳು ನಡೆಯುವಂತಾಗಬೇಕು. ಆಗ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ. ಯೋಜನೆಯ ಯಶಸ್ಸು ಹಾಗೂ ಲೋಪಗಳು ಹೆಚ್ಚು ಬೆಳಕಿಗೆ ಬರುತ್ತವೆ. ಇನ್ನೂ ಹೆಚ್ಚಿನ ಯಶಸ್ಸು ಸಾಧಿಸಲು ಹಾಗೂ ಲೋಪಗಳನ್ನು ಸರಿಪಡಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ.

ಯೋಜನೆಗಳ ಫಲ ಸಿಕ್ಕಿಲ್ಲದವರಿಗೆ ಸಿಗುವಂತೆ ಮಾಡಲು ಇಂತಹ ಕಾರ್ಯಕ್ರಮ ಅನುಕೂಲವಾಗುತ್ತದೆ. ಪ್ರತಿ ತಿಂಗಳು ನಡೆಯುವಂತಾದರೆ ಆಗ ಸರ್ಕಾರದ ಯೋಜನೆಗಳ ಪ್ರಚಾರವೂ ಆಗುತ್ತದೆ. ಸರ್ಕಾರದಲ್ಲಿ ಜಡತ್ವ ಆವರಿಸಿದೆ, ಟೇಕಾಫ್ ಆಗಿಲ್ಲವೆಂಬ ಟೀಕೆಗಳಿಗೂ ಇದರಿಂದ ಉತ್ತರ ಸಿಗುತ್ತದೆ. ವಾರ್ತಾ ಇಲಾಖೆಯ ಕಾರ್ಯವೇ ಸರ್ಕಾರದ ಯೋಜನೆಗಳ ಬಗ್ಗೆ ಪ್ರಚಾರ ಮಾಡುವುದಾಗಿದೆ. ಬೇರೆ ಎಲ್ಲಾ ಕಾರ್ಯಕ್ರಮಗಳಿಗಿಂತ ಇದನ್ನು ಅಚ್ಚುಕಟ್ಟಾಗಿ ರೂಪಿಸಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಈ ನಿಟ್ಟಿನಲ್ಲಿ ಪ್ರಯತ್ನಶೀಲವಾಗಬೇಕಾಗಿದೆ.



ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಗಿರಿಗಾವ್‌ನ ಮಹದೇವ ಬಾಬು ಚೌಗಲೆ ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳು. ಇವರಿಗೆ ಕೃಷಿ ಭಾಗ್ಯ ನೆಮ್ಮದಿ ಕೊಟ್ಟಿದೆ.

ಬಾಗಲಕೋಟೆ ಜಿಲ್ಲೆಯ ಶಿರಸೂರು ಗ್ರಾಮದ ರೈತ ಶ್ರೀ ಬಸಲಿಂಗಪ್ಪ ಗುಗ್ಗಿ ಅವರು ಹೇಳಿದ್ದು ಹೀಗೆ "ನಮ್ಮ ಭಾಗದಲ್ಲಿ ಕಳೆದ ಎರಡು ವರ್ಷಗಳಿಂದ ಮಳೆ ಇಲ್ಲ. ಸಂಕಷ್ಟದಲ್ಲಿದ್ದೆವು. ಕೃಷಿ ಹೊಂಡದಿಂದಾಗಿ ನಮ್ಮ ಜಮೀನು ಹಸನಾಯಿತು. ಉತ್ತಮ ಬೆಳೆ ತೆಗೆದು ನೆಮ್ಮದಿಯ ಬದುಕಿಗೆ ದಾರಿಯಾಯಿತು. ಗ್ರಾಮಕ್ಕೊಂದು ಕೃಷಿ ಹೊಂಡದ ಬದಲು ರಾಜ್ಯದ ಎಲ್ಲ ರೈತರ ಜಮೀನುಗಳಲ್ಲೂ ಕೃಷಿ ಹೊಂಡ ಮಾಡಿದರೆ ಸರ್ಕಾರ ರೈತರಿಗೆ ಇದಕ್ಕಿಂತ ಒಳ್ಳೇ ಭಾಗ್ಯ ನೀಡಲು ಸಾಧ್ಯವಿಲ್ಲ". ಎಂದರು.



ಶಿಡ್ಲಘಟ್ಟ ತಾಲ್ಲೂಕಿನ ಹಿತ್ತಲಲ್ಲಿ ನಿವಾಸಿ ಹೆಚ್.ಜಿ.ಗೋಪಾಲಗೌಡ ಅವರು ಕೃಷಿ ಭಾಗ್ಯ ಫಲಾನುಭವಿ. ಸಮಗ್ರ ಕೃಷಿ ಪದ್ಧತಿಯಲ್ಲಿ 16 ಮಿಶ್ರ ಬೆಳೆಯನ್ನು ಇವರು ಬೆಳೆದಿದ್ದಾರೆ. ಕಡಿಮೆ ನೀರಿನಲ್ಲಿ ಹೆಚ್ಚು ಬೆಳೆ ಬೆಳೆಯುವ ಉದ್ದೇಶವನ್ನು ಇವರು ಹೊಂದಿದ್ದು ಇವರು 11 ಎಕರೆಯಲ್ಲಿ ರೇಷ್ಮೆ ಬೆಳೆದಿದ್ದಾರೆ. ಅಲ್ಲದೆ ಇವರು ಕುರಿ ಸಾಕಾಣಿಕೆಯಲ್ಲಿ ಸಹ ಆದಾಯ ಗಳಿಸುತ್ತಿದ್ದಾರೆ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿರುವ ಇವರಿಗೆ ಕೃಷಿ ಪಂಡಿತ್ ಸೇರಿ 15 ಪ್ರಶಸ್ತಿಗಳು ಸಂದಿವೆ. ಅವರು ಸರ್ಕಾರ ನೀಡುತ್ತಿರುವ ಕೃಷಿ ಯೋಜನೆಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.



**ಸ್ವಾವಲಂಬನೆಗೆ ಸಹಕಾರಿಯಾದ ಪ್ರೋತ್ಸಾಹ ಧನ**

ಕೋಲಾರ ಜಿಲ್ಲೆಯ ಅಂದ್ರಹಳ್ಳಿ, ಮುಳಬಾಗಲು ತಾಲ್ಲೂಕಿನ ಹಳ್ಳಿ ಭೀಮಾಪುರದ ಮಹಿಳೆಯರು ಹಾಲೋದ್ಯಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ರೀತಿ ಮೆಚ್ಚುಗೆ ಮೂಡಿಸುತ್ತದೆ. ಭೀಮಾಪುರದ ಶಾರದಮ್ಮ ಹೇಳುವ ಹಾಗೆ, ಈ ಮುಂಚೆ ನಮ್ಮೂರಿಂದ ಡೈರಿಗೆ ಬರೀ ಎರಡು ಕ್ಯಾನ್ ಹೋಗುತ್ತಿತ್ತು. ಈಗ ಏಳು ಕ್ಯಾನ್ ಹೋಗುತ್ತೆ. ನಂದಿನಿ ಮಹಿಳಾ ಡೈರಿಯನ್ನು ನಮ್ಮ ಹಳ್ಳಿಯಲ್ಲಿ ಶುರು ಮಾಡಿದ ಮೇಲೆ ನಾವು ಹಳ್ಳಿಯ ಮಹಿಳೆಯರು ಅದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇವೆ. ನಾನು ಕಾಸಿಗೆ ಕಾಸು ಕೂಡಿ ಹಾಕಿ ಹಸು ತೆಗೆದುಕೊಂಡಿದ್ದು, ಆಮೇಲೆ ಸರ್ಕಾರ ಪ್ರೋತ್ಸಾಹ ಧನ ಕೊಡಲು ಶುರು ಮಾಡಿದ ನಂತರ ಮತ್ತೆ ಕಾಸಿಗೆ ಕಾಸು ಕೂಡಿಟ್ಟು ಇನ್ನೊಂದು ಹಸು ಕೊಳ್ಳುವಂತಾಯಿತು. ವ್ಯವಸಾಯದೊಂದಿಗೆ ಈ ಹಾಲೋದ್ಯಮ ನನಗೊಂದು ತೃಪ್ತಿಕರ ಬದುಕು ನೀಡಿದೆ. ನಾನು ನನ್ನ ಗಂಡ ಎರಡು ಮಕ್ಕಳು ನೆಮ್ಮದಿಯ ಜೀವನ ನಡೆಸುತ್ತಿದ್ದೇವೆ.

ಇದೇ ಹಳ್ಳಿಯ ಚೌಡಮ್ಮನಿಗೂ ತಮ್ಮ ಕಾಯಕದ ಬಗ್ಗೆ ಹಾಗೂ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನದ ಬಗ್ಗೆ ಬಹಳ ಸಂತಸ. "ಡೈರಿಗೆ ಹಾಲು ಹಾಕೋಕೆ ಶುರು ಮಾಡಿದ್ಮೇ ನಮಗೆಲ್ಲ ಒಂದು ನೆಲೆ ಸಿಕ್ಕಿದೆ. ಸ್ವಾವಲಂಬನೆಗೆ ಮಹಿಳಾ ಡೈರಿ ಆಸರೆಯಾಗಿದೆ. ಪ್ರೋತ್ಸಾಹ ಧನ ನಿಜಕ್ಕೂ ನಮಗೆ ಒಳ್ಳೆಯ ಬದುಕು ಸಾಗಿಸಲು ಪ್ರೋತ್ಸಾಹ ನೀಡುತ್ತಿದೆ. ಹಾಲಿನ ಹಣ ನೇರ ನಮ್ಮ ಬ್ಯಾಂಕ್ ಅಕೌಂಟಿಗೆ ಹೋಗುವುದರಿಂದ ಎಷ್ಟೋ ಸಹಾಯವಾಗುತ್ತದೆ. ಹಾಲೋದ್ಯಮ ಶುರು ಮಾಡಿದ ಮೇಲೆ ನನಗೆ ನನ್ನದೇ ಆದ ಸ್ವಂತ ಗೂಡು ಕಟ್ಟಿಕೊಳ್ಳಲು ಸಾಧ್ಯವಾಯಿತು" ಎನ್ನುತ್ತಾರೆ.

ಕೋಲಾರ ಜಿಲ್ಲೆಯ ಅಂದ್ರಹಳ್ಳಿಯ ಕೋಮಲಾ ಬಳಿ ಮೊದಲು ಒಂದೇ ಹಸು ಇತ್ತು. ಸರ್ಕಾರ ಹಾಲಿಗೆ ನೀಡುವ ಪ್ರೋತ್ಸಾಹ ಧನ ಹೆಚ್ಚು ಮಾಡಿದ್ಮೇ ಈಕೆಗೆ ಮತ್ತೂ ಒಂದು ಹಸುವನ್ನು ಕೊಳ್ಳುವ ಛಲ ಮೂಡಿತು. ಯಾರ ನೆರವೂ ಇಲ್ಲದೆ, ಚೀಟಿ ಹಾಕಿ ಹಣ ಹೊಂದಿಸಿ ಈಗ ಎರಡು ಹಸುಗಳ ಒಡತಿಯಾಗಿದ್ದಾಳೆ. ಈಕೆಯಲ್ಲಿರುವ ಛಲ, ಸ್ವಾವಲಂಬನೆಯ ತೃಪ್ತಿ ಸಂತೋಷ ಮೂಡಿಸುತ್ತದೆ. ಮುಂದಿನ ವರ್ಷಗಳಲ್ಲಿ ಇನ್ನಷ್ಟು ಹಸುಗಳನ್ನು ಖರೀದಿಸುವ ಬಯಕೆ ಈಕೆಯದು. ಈಕೆಯ ಪುಟ್ಟಗ್ರಾಮದಿಂದ ಸುಮಾರು 400ರಿಂದ 450 ಲೀಟರ್ ಹಾಲು ಡೈರಿ ಸೇರುತ್ತದೆ.



ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ಭೈರಸಂದ್ರದ ಮಂಜುಳಾ ಅವರು ಮನಸ್ವಿನಿ ಯೋಜನೆಯ ಫಲಾನುಭವಿ. 'ಈ ಯೋಜನೆಯಿಂದ ನನಗೆ ಬಹಳ ಉಪಯುಕ್ತವಾಗಿದೆ. ಮಾಸಿಕ 500ರೂ ಮೊತ್ತವನ್ನು 1000 ರೂಗೆ ಹೆಚ್ಚಿಸಿದರೆ ಇನ್ನೂ ಅನುಕೂಲವಾಗುತ್ತದೆ. ಸರ್ಕಾರದಿಂದ ಇನ್ನೂ ಸವಲತ್ತುಗಳು ಬೇಕಿವೆ' ಎಂದರು

ಹಾವೇರಿ ಜಿಲ್ಲೆಯ ಕುರಬಗೊಂಡ ಶಾಲೆಯ ಕುಮಾರಿ ಕೀರ್ತಿ ಆನಂದ್ ದೊಡ್ಡಗೌಡರ್ 7ನೆಯ ತರಗತಿಯ ವಿದ್ಯಾರ್ಥಿನಿ, ಅದೇ ಹಾವೇರಿ ಜಿಲ್ಲೆಯ ವರದಹಳ್ಳಿ ಗ್ರಾಮದ 8ನೇ ತರಗತಿಯ 14 ವರ್ಷದ ಕುಮಾರಿ ರಕ್ಷಿತ ಮಲ್ಲೇಶಪ್ಪ ಹಡಪದ್ ಕ್ಷೀರಭಾಗ್ಯ ಯೋಜನೆಯ ಫಲಾನುಭವಿಗಳು. ಬೆಳಗಾಗೆದ್ದು ಮನೆಯ ಕೆಲಸ ಮುಗಿಸಿ ಒಂದು ತುತ್ತು ಉಂಡು ಶಾಲೆಗೆ ಬಂದರೆ ಮತ್ತೆ ಊಟ ಕಾಣುತ್ತಿದ್ದುದು ರಾತ್ರಿಯೇ. "ಶಾಲೆಯಲ್ಲಿ ಅಪೌಷ್ಟಿಕತೆಯಿಂದಾಗಿ, ಹಸಿವಿನಿಂದಾಗಿ, ರಕ್ತ ಹೀನತೆಯಿಂದಾಗಿ ಬಳಲಿ ಹೋಗುತ್ತಿದ್ದೆವು. ಹಾಲು ಮನೆಯಲ್ಲಿ ಕೊಳ್ಳುವಷ್ಟು ಶಕ್ತರಾಗಿರಲಿಲ್ಲ. ಈಗ ವಾರದಲ್ಲಿ ಮೂರುದಿನ ಮಧ್ಯಾಹ್ನ ಶಾಲೆಯಲ್ಲಿಯೇ ಬಿಸಿ ಹಾಲು ಕೊಡುತ್ತಿದ್ದು ಮಧ್ಯಾಹ್ನದ ನಂತರ ಶಾಲೆಯಲ್ಲಿ ಉತ್ಸಾಹದಿಂದ ಪಾಠ ಕಲಿಯಲು ಅನುಕೂಲವಾಗುತ್ತಿದೆ ಎಂದು ಹೇಳುತ್ತಾರೆ.

66 ವರ್ಷದ ಸೈಯದ್ ಮೆಹಬೂಬ್ ಹನುಮನಾಳ ಅನ್ನಭಾಗ್ಯದ ಫಲಾನುಭವಿ. ಧಾರವಾಡ ಎಪಿಎಂಸಿಯಲ್ಲಿ ಹಮಾಲಿಯಾಗಿದ್ದರು. ಇವರ ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬಾತ ಬುದ್ಧಿಮಾಂದ್ಯ. ಇನ್ನೊಬ್ಬಾತ ಗಾರೆ ಕೆಲಸ ಮಾಡುತ್ತಾನೆ. ಎರಡು ಹೊತ್ತಿನ ಊಟಕ್ಕೆ ತೊಂದರೆ ಆಗಿತ್ರಿ. ಫ್ರೀ ರೇಷನ್ ಬಂದಂದಿಂದ ಆರಾಮಾಗೇವ್ರಿ. ಮಗನ ಔಷಧಿ ತರಾಕ ಅನುಕೂಲ ಆಗೇತ್ರಿ' ಎಂದು ತಮಗಾಗಿರುವ ಅನುಕೂಲವನ್ನು ವಿವರಿಸುತ್ತಾರೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುರಗೋಡಿನ ಶಿವಾನಂದ ಕುಂಬಾರ ಅವರು ಹಿಂದುಳಿದ ವರ್ಗದವರಿಗಾಗಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು 30,000/- ರೂ.ಗಳ ಸಾಲದ ನೆರವು ನೀಡಿದೆ. ನಶಿಸುತ್ತಿರುವ ಕುಂಬಾರಿಕೆ ಉಳಿಸಿ ಬೆಳೆಸುವ ಯತ್ನದಲ್ಲಿ ಸರ್ಕಾರವು ಪ್ರೋತ್ಸಾಹ ನೀಡಿದೆ. ಅಲ್ಲದೆ ನನಗೆ ನೀಡಿದ ಸಾಲ ಮನ್ನಾ ಮಾಡಿದ ಪರಿಣಾಮವಾಗಿ ಇಂದು ನಾನು ಹೆಚ್ಚು ಅಭಿವೃದ್ಧಿ ಹೊಂದಿದ್ದೇನೆ ಎಂದರು.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಕಡಕೇರಿ ಗ್ರಾಮದ ದೇವರಾಜ ನಾರಾಯಣ ನಾಯಕ ಅವರು ಸಹ ಅನ್ನಭಾಗ್ಯದ ಫಲಾನುಭವಿಗಳು. ಸಂಕಷ್ಟದಲ್ಲಿದ್ದ ಬಡವರ ಬದುಕು ಸರ್ಕಾರದ ಅನ್ನಭಾಗ್ಯ ಯೋಜನೆಯನ್ನು ಇಂದು ಸಹನೀಯವಾಗಿಸಿದೆ ಎನ್ನುತ್ತಾರೆ. ಕೊಪ್ಪಳ ಜಿಲ್ಲೆಯ ವಿಶಾಲಾಕ್ಷಮ್ಮ ಮತ್ತು ಯಂಕಮ್ಮ ಇವರುಗಳು ಸಹಾ ಅನ್ನಭಾಗ್ಯ ಯೋಜನೆಯ ಫಲಾನುಭವಿಗಳಾಗಿದ್ದು ಯೋಜನೆಯ ಬಗ್ಗೆ ಇವರು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಶಿವಮೊಗ್ಗ ಜಿಲ್ಲೆಯ ಬತ್ತುಲ್ಲ ತರನ್ನಮ್ ಎರಡು ಹೆಣ್ಣು ಮಕ್ಕಳ ತಾಯಿ. ಎರಡೂ ಮಕ್ಕಳೂ ಹೆಣ್ಣೆಂಬ ಕಾರಣಕ್ಕೆ ಪತಿ ಇವರಿಂದ ದೂರವಾಗಿದ್ದಾರೆ. ಹೆತ್ತವರೊಂದಿಗೆ ವಾಸವಾಗಿರುವ ಬತ್ತುಲ್ಲಾ ನೆರೆಹೊರೆಯ ಮಕ್ಕಳಿಗೆ ಮನೆಪಾಠ ಹೇಳಿ ಬದುಕು ಸಾಗಿಸುತ್ತಿದ್ದಾರೆ. ಅನ್ನಭಾಗ್ಯ, ಮನಸ್ವಿನಿ ಯೋಜನೆಗಳು ಹಾಗೂ ಮಕ್ಕಳಿಗೆ ಶಾಲೆಯಲ್ಲಿ ದೊರೆಯುವ ವಿದ್ಯಾರ್ಥಿ ವೇತನದಿಂದಾಗಿ ಬೇರೆಯವರೆದುರು ಕೈಚಾಚದೆ ಸ್ವಾಭಿಮಾನದಿಂದ ಬದುಕುತ್ತಿದ್ದೇನೆ ಎಂದು ಅವರು ಹೆಮ್ಮೆಯಿಂದ ನುಡಿಯುತ್ತಾರೆ.

ಬಳ್ಳಾರಿ ಜಿಲ್ಲೆ ಸಂಜೀವರಾಯನ ಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹುಲುಗಪ್ಪ ಮತ್ತು ಎರಿಸ್ವಾಮಿ ವಿದ್ಯಾರ್ಥಿಗಳು. ಕ್ಷೀರಭಾಗ್ಯ ಯೋಜನೆಯ ಕಂದಮ್ಮಗಳು. ಅವರ ಮುಖದಲ್ಲಿ ಬಡತನ ಎದ್ದುಕಾಣುತ್ತಿತ್ತು. "ಸಾ ನಮಗೆ ಸ್ಕೂಲಲ್ಲಿ ಸೋಮವಾರ, ಬುಧವಾರ, ಶುಕ್ರವಾರ ಹಾಲು ಕೊಡ್ತಾರೆ ಸಾ ನಿಜವಾಗಲೂ ನಮಗೆ ಇಷ್ಟ ಆಗೈತ್ ಸಾ" ಎಂದು ತಮ್ಮ ಅನಿಸಿಕೆಯನ್ನು ಹಂಚಿಕೊಳ್ಳುತ್ತಾರೆ.



ಕೊಪ್ಪಳದ ಗವಿಸಿದ್ದೇಶ್ವರ ಕಾಲೇಜಿನ ಬಸವರಾಜ ವಿದ್ಯಾಸಿರಿ ಅಡಿ ದೊರಕುತ್ತಿರುವ ಸೌಲಭ್ಯಕ್ಕೆ ಸಂತಸ ವ್ಯಕ್ತಪಡಿಸಿದರಾದರೂ ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡುವುದಾಗಿ ಹೇಳಿದರು. ಗುಲಬರ್ಗಾ ಜಿಲ್ಲೆಯ ಶಹಾಪೂರ ತಾಲ್ಲೂಕಿನ ದಸ್ತಾಪುರ್ಕಿ ಗ್ರಾಮ ಶಕುಂತಲಾ ಅವರು ಸರ್ಕಾರವು ವರ್ಷಕ್ಕೆ ಸರಿ ಸುಮಾರು 15 ಸಾವಿರ ರೂಪಾಯಿಗಳನ್ನು ನೀಡುತ್ತಿದೆ. ವಿದ್ಯಾರ್ಥಿನಿಯರ ವಿಧ್ಯಾಭ್ಯಾಸಕ್ಕೆ ಅನುಕೂಲವಾಗಿದೆ ಎಂದರು.

ಯಲಬುರ್ಗಾದ ತಹಕಲ್ ಗ್ರಾಮದ ಸಿದ್ದನಗೌಡ ತೋಟಯ್ಯ ಅವರು ಕೃಷಿ ಭಾಗ್ಯದಿಂದ ನಮಗೆ ಅನುಕೂಲವಾಗಿದೆ. "ಎಲ್ಲ ಭಾಗ್ಯಗಳಿಗಿಂತ ಇದು ಹೆಚ್ಚಿನ ಭಾಗ್ಯ ತಂದು ಕೊಟ್ಟಿದೆ. ಸರ್ಕಾರವು ಇನ್ನೂ ಒಂದು ಸಾವಿರ ಹೊಂಡ ನಮ್ಮಲ್ಲಿ ತೆಗೆಯುವ ಯೋಜನೆ ಇಟ್ಟುಕೊಂಡಿದೆ. ಈ ಯೋಜನೆಯಿಂದ ಭೂಮಿ ತಂಪಾಗುವುದಲ್ಲದೆ ಅಂತರ್ಜಲವು ಅಭಿವೃದ್ಧಿಯಾಗಲಿದೆ" ಎಂದರು.

ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಮುಗಳಿ ಗ್ರಾಮದ ಶ್ರೀಮತಿ ಸುಮಂಗಲ ಎಸ್. ಬೆಟಗೇರಿ ಅವರು ಕೃಷಿ ಕಾರ್ಯ ಮಾಡುವ ಮಹಿಳೆ. ತಮ್ಮ ಆದಾಯದಲ್ಲಿ ಮಾರುಕಟ್ಟೆಗೆ ಹೋಗಿ ಧಾನ್ಯ ಕೊಳ್ಳುವಷ್ಟು ಆದಾಯ ಇರಲಿಲ್ಲ. ಅದೇ ರೀತಿ ನೇತ್ರಾವತಿ ಚಂದ್ರಶೇಖರ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಗೊಂಬಿ ಗ್ರಾಮದ ಕೃಷಿಕ ಮಹಿಳೆ. ಈಕೆಯದು ಆರ್ಥಿಕ ಸಮಸ್ಯೆ. ಇವರಿಗೆ ಅನ್ನಭಾಗ್ಯ ಯೋಜನೆ ವರವಾಗಿ ಪರಿಣಮಿಸಿದೆ. ಆ ಮಹಿಳೆಯರ ಮಾತುಗಳಲ್ಲೇ ಹೇಳುವುದಾದರೆ "ರಾಜ್ಯ ಸರ್ಕಾರ ಉಚಿತ ಅಕ್ಕಿ, ಗೋಧಿಯ ಜೊತೆ, ಉಪ್ಪು, ಅಡಿಗೆ ಎಣ್ಣೆ ನೀಡುತ್ತಿದೆ. ಮಾರುಕಟ್ಟೆಯಲ್ಲಿ ಹನ್ನೊಂದು ರೂಪಾಯಿಗಳಿಗೆ ದೊರಕುವ ಉಪ್ಪು ನಮಗೆ ಎರಡು ರೂ.ಗೆ, ಐವತ್ತು ರೂಪಾಯಿಯ ತಾಳೆಎಣ್ಣೆ 25/- ರೂಪಾಯಿಗಳಿಗೆ ಹಾಗೂ ಮಾರುಕಟ್ಟೆಯಲ್ಲಿ 40 ರೂ.ಗಳಿಗೆ ಇರುವ ಸಕ್ಕರೆಯನ್ನು ರಾಜ್ಯ ಸರ್ಕಾರ 13.50 ರೂ.ಗಳಿಗೆ ನೀಡುತ್ತಿದೆ. ಇದು ನಮ್ಮ ದುಸ್ತರ ಬದುಕನ್ನು ಹಸನುಗೊಳಿಸಿದೆ" ಎನ್ನುತ್ತಾರೆ.


ಹಾವೇರಿ ಜಿಲ್ಲೆ ಹೊಸ ಕಿತ್ತೂರು ಗ್ರಾಮದ ಶ್ರೀಮತಿ ಸುಜಾತ ಮತ್ತು ಅದೇ ಜಿಲ್ಲೆಯ ದೇವಿ ಹೊಸೂರು ಗ್ರಾಮದ ಶ್ರೀಮತಿ ಚಂದ್ರಕಲಾ ಬಸವ ವಸತಿ ಯೋಜನೆಯ ಫಲಾನುಭವಿಗಳು. ಬಾಡಿಗೆ ಮನೆಗಳಲ್ಲಿ ವಾಸವಿದ್ದು ಬಾಡಿಗೆ ಕಟ್ಟಲಾಗದೆ ಸಂಕಷ್ಟದಲ್ಲಿದ್ದೆವು. ಇಂದು ಬಸವ ವಸತಿ ಯೋಜನೆ ಮೂಲಕ ರಾಜ್ಯ ಸರ್ಕಾರ ನಮಗೆ ನೆರಳಿನ ಗೂಡು ನೀಡಿದೆ ಎನ್ನುತ್ತಾರೆ. ಬಳ್ಳಾರಿ ಜಿಲ್ಲೆಯ ಸಿರಿವಾರ ಗ್ರಾಮದ ರೇಣುಕಮ್ಮ ಮತ್ತು ಗಂಗಮ್ಮ ಸರ್ಕಾರ ನಮಗೆ ಜನತಾ ಮನೆ ನೀಡುವ ಮೂಲಕ ಸರ್ಕಾರ ನೆರಳು ನೀಡಿದೆ" ಎಂದು ಕೃತಜ್ಞತೆ ಅರ್ಪಿಸ್ಮತ್ತಾರೆ.

ಕೊಪ್ಪಳದ ಮಲ್ಲಪ್ಪ ಹಿರೇಸಿಂಧೋಗಿ ಅವರು ಕ್ಷೀರಧಾರೆಯ ಫಲಾನುಭವಿಗಳು. ಪ್ರೋತ್ಸಾಹಧನ 4 ರೂ. ಏರಿಸಿರುವುದರಿಂದ ರೈತ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಿಸಿದೆ. ರಾಜ್ಯದಲ್ಲಿ ಹೈನುಗಾರಿಕೆಗೆ ಇನ್ನೂ ಹೆಚ್ಚು ಪ್ರೋತ್ಸಾಹ ನೀಡಿ, ಪ್ರೋತ್ಸಾಹಧನವನ್ನು ಇನ್ನೂ 2 ರೂ. ಹೆಚ್ಚಿಸಿದಲ್ಲಿ ರೈತರಿಗೆ ಇನ್ನೂ ನೆಮ್ಮದಿ ತರುವುದು ಎಂದರು.

ರೇವಣಸಿದ್ದಪ್ಪ ಆನಂದಪ್ಪ ಬುಕ್ಕಿ, ವಿಜಯಪುರ ಜಿಲ್ಲೆಯ ಬತ್ತಗುಣಕಿ ಗ್ರಾಮದವರು. ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಲೀಟರ್ ಹಾಲಿಗೆ ನಾಲ್ಕು ರೂ ಪ್ರೋತ್ಸಾಹ ಧನ ಪಡೆಯುತ್ತಿದ್ದು, ಪ್ರತಿ ತಿಂಗಳು ಸರಾಸರಿ 80 ಸಾವಿರ ರೂ. ಆದಾಯ ಗಳಿಸುತ್ತಿದ್ದಾರೆ. ಇದರಿಂದಾಗಿ ಹಾಲು ಕರೆಯುವ ಯಂತ್ರ, ಹುಲ್ಲು ಕತ್ತರಿಸುವ ಯಂತ್ರ ಮತ್ತಿತರ ಉಪಕರಣಗಳನ್ನು ಖರೀದಿಸಲು ಸಾಧ್ಯವಾಗಿದ್ದು, ಹೈನುಗಾರಿಕೆ ಸುಗಮವಾಗಿದೆ ಎಂದು ಸಂತೋಷ ವ್ಯಕ್ತಪಡಿಸುತ್ತಾರೆ.



ಬಾಗೇಪಲ್ಲಿಯ ಕೊತ್ತಕೋಟೆಯ ಸತಾರ್ ಸಾಬ್ ಅವರು ಗಂಗಾಕಲ್ಯಾಣ ಯೋಜನೆಯ ಫಲಾನುಭವಿ. ಇವರ ಎರಡೂವರೆ ಎಕರೆ ಜಮೀನಿನಲ್ಲಿ ಸರ್ಕಾರದ ವತಿಯಿಂದ ಕೊಳವೆ ಬಾವಿಯನ್ನು ಕೊರೆಯಲಾಗಿದ್ದು, ಇದಕ್ಕೆ ನೀರು ಸಹ ಬಂದಿದೆ. ಆದರೆ ಇದಕ್ಕೆ ಪಂಪ್ ಹಾಗೂ ಮೋಟಾರನ್ನು ಅಳವಡಿಸಿಲ್ಲ. ಇವನ್ನು ಅಳವಡಿಸಿದರೆ ಕೃಷಿ ಚಟುವಟಿಕೆಗಳಿಗೆ ಬಹಳಷ್ಟು ಉಪಯೋಗವಾಗುತ್ತದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.



# ನಾವೇ ಬರಮಾಡಿಕೊಂಡ ಬರ

▪ ನಾಗೇಶ ಹೆಗಡೆ

ನಾಳೆ ನಡೆದ ಒಂದು ಕಥೆ ಹೀಗಿದೆ: 2070ನೇ ಇಸವಿಯಲ್ಲಿ ಜೀವಿಸಿರುವ 40ರ ಹರೆಯದ ಹಣ್ಣು ಹಣ್ಣು ವೃದ್ಧನೊಬ್ಬ ಇಂದಿನ ನಮ್ಮ ರಾಷ್ಟ್ರಪತಿಯವರಿಗೆ ಪತ್ರ ಬರೆದಿದ್ದಾನೆ. ಅಂದಿನ ಸಮಾಜದಲ್ಲಿ ಆತನೇ ಅತ್ಯಂತ ಹಿರಿಯ ವ್ಯಕ್ತಿಯಂತೆ. ನೀರಿನ ಭಾರೀ ಅಭಾವ ಇದೆ. ಸ್ನಾನ ಮಾಡಲು ನೀರಿಲ್ಲ. ಮಹಿಳೆಯರೂ ಸೇರಿದಂತೆ ಎಲ್ಲರೂ ನುಣ್ಣಗೆ ತಲೆ ಬೋಳಿಸಿಕೊಂಡಿದ್ದಾರೆ. ವಾರಕ್ಕೊಮ್ಮೆ ಖನಿಜ ತೈಲದಿಂದ ಮೈ ಒರೆಸಿಕೊಳ್ಳುತ್ತಾರೆ. ಕಾರ್ಖಾನೆಗಳೆಲ್ಲ ಎಂದೋ ಸ್ಥಗಿತಗೊಂಡಿವೆ. ಸಮುದ್ರದ ಉಪ್ಪು ನೀರನ್ನು ಸಿಹಿಯಾಗಿಸುವ ಕಾರ್ಖಾನೆ ಮಾತ್ರ ನಡೆಯುತ್ತಿದೆ. ಅಲ್ಲಿನ ಕೆಲಸಗಾರರಿಗೆ ನೀರನ್ನೇ ಸಂಬಳ ರೂಪದಲ್ಲಿ ಕೊಡುತ್ತಾರೆ. ಎಲ್ಲೋ ಒಂದು ಸರೋವರದ ಆಳದಲ್ಲಿ ತುಸು ಶುದ್ಧ ನೀರು ಇದೆ. ಅದಕ್ಕೆ ಸಶಸ್ತ್ರ ಪೊಲೀಸರ ಕಾವಲು ಇದೆ.

ಅವನು ಬರೆದ ಪತ್ರದಲ್ಲಿ ಇನ್ನಷ್ಟು ದಾರುಣ ಚಿತ್ರಣಗಳಿವೆ: ನೀರಿನ ಅಭಾವದಿಂದಾಗಿ ಆಗಿನ ಜನರಿಗೆ ಇಪ್ಪತ್ತನೇ ವಯಸ್ಸಿಗೇ ದೇಹವೆಲ್ಲ ನಿರಿಗೆಗಟ್ಟಿ, 40ಕ್ಕೇ ಸಾವು ಬರುತ್ತದೆ. ಯುವಕರಲ್ಲೂ ವೀರ್ಯಾಣುಗಳೆಲ್ಲ ದುರ್ಬಲವಾಗಿ, ಯೋಚನಾಶಕ್ತಿಯೇ ಕುಂಠಿತಗೊಂಡು ವಿಜ್ಞಾನಿಗಳಿಗೂ ಏನೂ ಮಾಡಲು ತೋಚುತ್ತಿಲ್ಲ. ಮಾನವ ಸಂಕುಲವೇ ನಶಿಸುತ್ತಿದೆ. ಕೇವಲ 50 ವರ್ಷಗಳ ಹಿಂದೆ ಈಜಲು, ಕಾರು ತೊಳೆಯಲು ನೀರಿತ್ತು; ಹೂದೋಟಗಳಿದ್ದವು ಎಂದರೆ ಯಾರೂ ನಂಬುತ್ತಿಲ್ಲ. 'ನಾನು ಚಿಕ್ಕವನಿದ್ದಾಗ ನೀರು ಉಳಿಸುವ ಬಗ್ಗೆ ಎಷ್ಟೆಲ್ಲ ಕರಪತ್ರ, ಪುಸ್ತಕ, ವಿಡಿಯೊಗಳಿದ್ದವು. ನಾವೆಲ್ಲ ಕ್ಯಾರೇ ಅನ್ನಲಿಲ್ಲ, ಅದಕ್ಕೇ ಇಂದು ಈ ಪರಿಸ್ಥಿತಿ ಬಂದಿದೆ' ಎಂದು ಆ ಹಿರಿಯ ವಿವರಿಸಿದ್ದಾನೆ.

ಬಲ್ಗೇರಿಯಾದ ಕಥೆಗಾರನೊಬ್ಬ ನಿರೂಪಿಸಿದ ಈ ಕಥಾನಕವನ್ನು ಆಧರಿಸಿ ನಮ್ಮ ಹಿಂದಿನ ರಾಷ್ಟ್ರಪತಿ ಅಬ್ದುಲ್ ಕಲಾಂ ಒಂದು ಪಿಪಿಟಿ ಚಿತ್ರಮಾಲಿಕೆಯನ್ನು ತಯಾರಿಸಿದ್ದಾರೆ. ಎಂಟು ನಿಮಿಷಗಳ ಈ ಪಟಕಥೆಯಲ್ಲಿ 2017ರ ಕಲ್ಪನಾ ಚಿತ್ರಗಳ ಜೊತೆಗೆ ಹೃದಯ ಮೀಟುವ ಸಂಗೀತವೂ ಇದೆ.

ವಿಶೇಷ ಏನೆಂದರೆ, ಈ ಕಥೆಯ ಕೆಲವು ಘಟನೆಗಳು ಈಗಲೇ ನಿಜವಾಗುತ್ತಿವೆ. ಮಹಾರಾಷ್ಟ್ರದ ಲಾತೂರಿಗೆ ಟ್ರೇನ್ ಮೂಲಕ ನೀರಿನ ಪೂರೈಕೆಯಾಗುತ್ತಿದೆ. ಅಲ್ಲಿನ ಮರಾಠವಾಡಾ, ವಿದರ್ಭದ ಕೆಲವು ಪಟ್ಟಣಗಳಲ್ಲಿ ಕಾರ್ಖಾನೆಗಳನ್ನು



ಸ್ಥಗಿತಗೊಳಿಸಲು ಆಜ್ಞೆ ಹೊರಡಿಸಲಾಗಿದೆ. ಅಷ್ಟಿಷ್ಟು ನೀರಿರುವ ಕೆಲವು ಸರೋವರಗಳಲ್ಲಿ ಕಾವಲು ಪಡೆಗಳನ್ನು ನಿಯೋಜಿಸಲಾಗಿದೆ. ಜನರು ವಾರಕ್ಕೊಮ್ಮೆ ಸ್ನಾನ ಮಾಡುತ್ತಾರೆ. ಅಡುಗೆ ಪಾತ್ರೆಗಳನ್ನು ತೊಳೆಯಲು ಸಾಕಷ್ಟು ನೀರಿಲ್ಲ. ಅವನ್ನು ಬಿಸಿಲಲ್ಲಿ ಒಣಗಿಸಿ ಮರಳನ್ನು ಉಜ್ಜಿ ಮತ್ತೆ ಬಳಸಲಾಗುತ್ತಿದೆ.

**ಸಾವಿನಂಚಿನ ನದಿಗಳು :** ಈ ಬಾರಿಯ ಬರ ನಿಜಕ್ಕೂ ಕೆಲವರ ಪಾಲಿಗೆ ದುರ್ಭರವಾಗಿದೆ. ಮುಂಬರುವ ಮುಂಗಾರಿನಲ್ಲಿ ಚೆನ್ನಾಗಿ ಮಳೆ ಬಿದ್ದ ನಂತರ ಪರಿಸ್ಥಿತಿ ಸರಿ ಹೋಗುತ್ತದೆ ಎಂದು ಹೇಳುವಂತಿಲ್ಲ. ಕಳೆದ ಇಪ್ಪತ್ತು ವರ್ಷಗಳಿಂದ ಬರಗಾಲದ ತೀವ್ರತೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಹೋಗುತ್ತಿದೆ. ನಮ್ಮಲ್ಲಷ್ಟೇ ಅಲ್ಲ, ಇಡೀ ಜಗತ್ತೇ ಬಿಸಿ ಪ್ರಳಯದ ದಳ್ಳುರಿಯತ್ತ ಸಾಗುತ್ತಿದೆ. ಇತ್ತೀಚೆಗೆ, ಅಂದರೆ 2016ರ ಫೆಬ್ರುವರಿಯಲ್ಲಿ ಬೊಲಿವಿಯಾ ದೇಶದ ಸಾವಿರ ಚ.ಕಿಮೀ ವಿಸ್ತೀರ್ಣದ ದೊಡ್ಡ ಸರೋವರ ಪೂರ್ತಿ ಒಣಗಿತು. 'ನ್ಯಾಶನಲ್ ಜಿಯಾಗ್ರಫಿಕ್' ಸಂಸ್ಥೆಯ ವರದಿಯ ಪ್ರಕಾರ ಜಗತ್ತಿನ ಎಂಟು ಮಹಾ ನದಿಗಳು ಒಣಗತೊಡಗಿವೆ. ಅಮೆರಿಕದ ಕೊಲರಾಡೊ, ದಕ್ಷಿಣ ಅಮೆರಿಕದ ರಿಯೊ ಗ್ರಾಂಡಿ, ಪಾಕಿಸ್ತಾನದ ಸಿಂಧೂ, ಚೀನಾದ ಯಾಂಗ್‌ತ್ಸೆಗಳೆಲ್ಲ ಸಮುದ್ರ ಸೇರಲು ವಿಫಲವಾಗುತ್ತಿವೆ. ಜೋರ್ಡಾನ್ ನದಿ ಅಲ್ಲಲ್ಲಿ ಒಣಗುತ್ತಿದೆ. ಆಫ್ರಿಕಾದಲ್ಲಿ ಮೂರು ರಾಷ್ಟ್ರಗಳ ನಡುವೆ 25 ಸಾವಿರ ಚದರ ಕಿ.ಮೀ ವಿಸ್ತಾರವಾಗಿದ್ದ ಚಾಡ್ ಸರೋವರ ಕಳೆದ 30 ವರ್ಷಗಳಿಂದ ಕ್ರಮೇಣ ಒಣಗುತ್ತ ಬಂದು ಈಗ ಪುಟ್ಟ ಕೆರೆಯಂತಾಗಿದೆ. ಚಾಡ್‌ಗಿಂತ ದೊಡ್ಡದಾಗಿ 65 ಸಾವಿರ ಚದರ ಕಿ.ಮೀ ವಿಸ್ತಾರದಲ್ಲಿ ಮೈಚಾಚಿಕೊಂಡಿದ್ದ ರಷ್ಯದ ಅರಲ್ ಸಮುದ್ರದ ಬಹುತೇಕ ಭಾಗ ಒಣಗಿದೆ. ಮೀನು ಹಿಡಿಯಲು ಹಾಗೂ ಸಂಚಾರ ಸಾಗಾಟ ನಡೆಸಲು ಬಳಸುತ್ತಿದ್ದ ಬೃಹತ್ ಹಡಗುಗಳು ಒಣ ಮರಳಿನ ಮೇಲೆ ಬಂಡೆಯಂತೆ ತುಕ್ಕು ಹಿಡಿಸಿಕೊಳ್ಳುತ್ತ ನಿಂತಿವೆ. ಅರಲ್ ಸಮುದ್ರಕ್ಕೆ ನೀರನ್ನು





ಪೂರೈಸುತ್ತಿದ್ದ ಅಮು ದರಿಯಾ ಮತ್ತು ಸರ್ ದರಿಯಾ ನದಿಗಳಿಗೆ ಅಡ್ಡಗಟ್ಟೆ ನಿರ್ಮಿಸಿ ಅಲ್ಲಿನ ನೀರನ್ನು ಬೇಸಾಯಕ್ಕೆ ತಿರುಗಿಸಿದ್ದರಿಂದ ಅವೂ ಬತ್ತಿವೆ.

ನಮ್ಮ ದೇಶದಲ್ಲೂ ಅನೇಕ ನದಿಗಳು ಬೇಸಿಗೆಯಲ್ಲಿ ಸಮುದ್ರ ಸೇರಲಾರದೆ ಬಾಯೊಣಗಿಸಿ ನಿಲ್ಲುತ್ತವೆ. 'ನರ್ಮದಾ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು:' ಎಂದು ನಮ್ಮ ಹಿಂದಿನವರು ಶ್ಲೋಕ ಪಠಿಸಿ ತರ್ಪಣ ಕೊಡುತ್ತಿದ್ದರಲ್ಲ, ಆ ಮೂರೂ ನದಿಗಳಿಗೆ ಈ ಸಂಕಷ್ಟ ಬಂದಿದೆ. ತಮಿಳು ನಾಡಿನ ಕಾವೇರಿಯ ಮುಖಜ ಪ್ರದೇಶವೆನ್ನಿಸಿದ ಪೂಂಪುಹಾರ್ ಬಳಿ ಏಪ್ರಿಲ್ ಮೇ ತಿಂಗಳಲ್ಲಿ ಕಣ್ಣು ಚಾಚಿದಷ್ಟು ದೂರದವರೆಗೆ ಮರಳುರಾಶಿಯೇ ಕಾಣುತ್ತದೆ.

**ಭೂಮಿಯೊಳಗಿನ ಬ್ರಹ್ಮರಾಕ್ಷಸ ಮೇಲಕ್ಕೆ :** ಇಂಥ ಕಡುಕಷ್ಟ ಬಂದೀತೆಂದು ವಿಜ್ಞಾನಿಗಳು 1980ರಿಂದಲೂ ಎಚ್ಚರಿಕೆ ನೀಡುತ್ತಲೇ ಬಂದಿದ್ದಾರೆ. ಎಲ್ಲ ದೇಶಗಳಲ್ಲೂ ಅತಿ ದೊಡ್ಡ ಪ್ರಮಾಣದಲ್ಲಿ ಪಳೆಯುಳಿಕೆ ಇಂಧನಗಳನ್ನು (ಅಂದರೆ ಭೂಮಿಯ ಆಳದಿಂದ ಮೇಲೆತ್ತಿದ ಕಲ್ಲಿದ್ದಲು, ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಇತ್ಯಾದಿಗಳನ್ನು) ಬಳಸುತ್ತಿದ್ದಾರೆ. ಎಲ್ಲ ದೇಶಗಳಲ್ಲೂ ಕಾರ್ಖಾನೆಗಳನ್ನು ನಡೆಸಲಿಕ್ಕೆ, ವಾಹನಗಳ ಸಂಚಾರಕ್ಕೆ ಹಾಗೂ ಕೃಷಿಗೆ ಭೂಮಿಯ ಒಡಲಿನಿಂದ ಮೇಲೆತ್ತಿದ ಈ ಇಂಧನಗಳೇ ಬಳಕೆಯಾಗುತ್ತಿವೆ. ಜನಸಂಖ್ಯೆ ಹೆಚ್ಚುತ್ತ ಹೋದ ಹಾಗೆ, ಜನರ ಅಗತ್ಯಗಳು ಹೆಚ್ಚುತ್ತ ಹೋದ ಹಾಗೆಲ್ಲ ಪಳೆಯುಳಿಕೆ ಇಂಧನ ಬಳಕೆಯೂ ಹೆಚ್ಚುತ್ತಿದೆ. ನಮ್ಮ ಸೌಕರ್ಯಗಳು ಹೆಚ್ಚಾದ ಹಾಗೆ ನಿಸರ್ಗದ ಶೋಷಣೆಯ ಪ್ರಮಾಣವೂ ಹೆಚ್ಚುತ್ತ ಹೋಗುತ್ತಿದೆ. ನಮಗೆ ಮೊಸರು, ಬೆಣ್ಣೆ, ತುಪ್ಪ ಭಾರೀ ಪ್ರಮಾಣದಲ್ಲಿ ಬೇಕು. ಅದಕ್ಕೆಂದು ದೊಡ್ಡ ದೊಡ್ಡ ಡೇರಿಗಳು ಬೇಕು. ಅವು ಕೊಳವೆಬಾವಿಗಳಿಂದ ಭಾರೀ ಪ್ರಮಾಣದಲ್ಲಿ ನೀರನ್ನು ಮೇಲಕ್ಕೆತ್ತಬೇಕು. ಹಸುಗಳ ಮೇವು ಬೆಳೆಯಲೆಂದು ಬೋರ್‌ವೆಲ್ ನೀರನ್ನು ಭಾರೀ ಪ್ರಮಾಣದಲ್ಲಿ ಮೇಲಕ್ಕೆ ಎತ್ತಬೇಕು. ಅವುಗಳನ್ನು ಮೇಲಕ್ಕೆ ಎತ್ತಲೆಂದು ಡೀಸೆಲ್ ಅಥವಾ ವಿದ್ಯುತ್ ಉರಿಸಬೇಕು. ಅವುಗಳಿಗೆ ಬಳಕೆಯಾಗುವ ಇಂಧನದಿಂದ ವಿಷಗಾಳಿ ಹೊಮ್ಮಿ ಸೆಕೆ ಹೆಚ್ಚಿದರೆ ಫ್ಯಾನು, ಏರ್ ಕಂಡೀಶನರ್ ಬಳಸಲು ಇನ್ನಷ್ಟು ವಿದ್ಯುತ್ತು ಬೇಕು. ಅದರಿಂದ ವಾತಾವರಣದ ಸೆಕೆಯನ್ನು ಇನ್ನಷ್ಟು ಹೆಚ್ಚಿಸಬೇಕು.

ನಮ್ಮ ದುಂದುಗಾರಿಕೆ ಈ ಪ್ರಕೃತಿಯನ್ನು ಹೇಗೆ ಹಿಂಡುತ್ತಿದೆ ಅನ್ನೋದಕ್ಕೆ ಇನ್ನೊಂದು ಸರಳ ಉದಾಹರಣೆಯನ್ನು ನೋಡೋಣ: ನಮ್ಮಲ್ಲಿ ಬೈಕು, ಕಾರು, ಬುಲ್‌ಡೋಝರ್ ಸಂಖ್ಯೆ ಅಪಾರವಾಗಿ ಹೆಚ್ಚುತ್ತಿದೆ. ಅವುಗಳ ಓಡಾಟಕ್ಕೆಂದು ರಸ್ತೆ, ಸೇತುವೆ, ಸುರಂಗಗಳ ಗಾತ್ರ ಮತ್ತು ವಿಸ್ತೀರ್ಣ ಹೆಚ್ಚುತ್ತ ಹೋಗುತ್ತಿದೆ. ಅವುಗಳಿಗಾಗಿ ಗಿಡಮರಗಳ ನಾಶ, ಮಣ್ಣಿನ ಸವಕಳಿಯ ಜೊತೆಗೆ ಅಪಾರ ಪ್ರಮಾಣದ ಸಿಮೆಂಟ್ ಮತ್ತು ಮರಳೂ ಹೆಚ್ಚು ಹೆಚ್ಚು ಬಳಕೆಯಾಗುತ್ತದೆ. ಮರಳು ತೆಗೆಯಲೆಂದು ನದಿಗಳನ್ನೆಲ್ಲ ನಾವು ಮಗುಚುತ್ತಿದ್ದೇವೆ. ಅಲ್ಲಿ ಸ್ಪಾಂಜಿನಂತೆ ನೀರನ್ನು ಹೀರಿ ಇಟ್ಟುಕೊಳ್ಳುತ್ತಿದ್ದ ಮರಳುಗಳೆಲ್ಲ ರಸ್ತೆ, ಮೇಲ್ಸೇತುವೆ, ಮೆಟ್ರೋಗಳಾಗಿವೆ.

ವಾಹನಗಳು ಇಂಗಾಲದ ಡೈಆಕ್ಸೈಡನ್ನು ವಾತಾವರಣಕ್ಕೆ ಕಳಿಸುತ್ತಿವೆ. ಈ ವಿಷಗಾಳಿಯನ್ನು ಹೀರಿ ತೆಗೆಯಬಲ್ಲ ಸಸ್ಯಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಅದರಿಂದಾಗಿ ಮಳೆಯ ಪ್ರಮಾಣ ಕಡಿಮೆ ಆಗುತ್ತಿದೆ. ಬಿದ್ದ ಅಷ್ಟಿಷ್ಟು ಮಳೆನೀರನ್ನು ಹಿಡಿದಿಡಬಲ್ಲ ಮರಳೂ ಕಣ್ಮರೆಯಾಗುತ್ತಿದೆ. ಸುರಿದ ಮಳೆ ತನ್ನೊಂದಿಗೆ ಅಪಾರ ಹೂಳನ್ನು ಸಾಗಿಸುತ್ತ ಸೀದಾ ಅಣೆಕಟ್ಟೆಗಳ ಕಡೆ ಹೋಗಿ





ಹೂಳನ್ನೆಲ್ಲ ಅಲ್ಲಿ ರಾಶಿ ಹಾಕಿ ತಾನು ಸಮುದ್ರಕ್ಕೆ ಸಾಗಿ ಹೋಗುತ್ತದೆ. ವಾತಾವರಣಕ್ಕೆ ಸೇರಿದ ಇಂಗಾಲದ ಡೈ ಆಕ್ಸೈಡ್ ಅಲ್ಲಿನ ಉಷ್ಣತೆಯನ್ನು ಹೆಚ್ಚಿಸುತ್ತದೆ. ಹಾಗಾಗಿ ಸೆಕೆಗಾಲ ಎಂಬುದು ಉರಿಸೆಕೆಗಾಲವಾಗುತ್ತದೆ.

**ಜಲಚಕ್ರವಲ್ಲ, ವಿಷಚಕ್ರ :**

ಹೀಗಾಗಬಾರದಿತ್ತು ತಾನೆ? ನಿಸರ್ಗದಲ್ಲಿ ಜಲಚಕ್ರ ಸದಾ ಚಲಿಸುತ್ತಲೇ ಇರಬೇಕು ತಾನೆ? ಸಮುದ್ರದಿಂದ ಆವಿಯಾದ ನೀರು ಆಕಾಶಕ್ಕೇರಿ ಮೇಘರಾಶಿಯಾಗಿ ನೆಲದ ಕಡೆ ಸಾಗಿ ಬಂದು ಮಳೆ ಸುರಿಸಿ, ಕೆರೆ ನದಿಗಳನ್ನು ತುಂಬಿಸಬೇಕು. ಹಿಂದೆಲ್ಲ ಈ ಚಕ್ರ ಸರಳವಾಗಿತ್ತು. ನೀರನ್ನು ಆವಿಯಾಗಿಸುವ ಜವಾಬ್ದಾರಿ ಸಮುದ್ರದ್ದಾಗಿತ್ತು. ಆಕಾಶಕ್ಕೆ ಸೇರಿದ ಆವಿಯನ್ನು ತಂಪಾಗಿಸಿ ಮಳೆ ಸುರಿಸುವ ಜವಾಬ್ದಾರಿಯೆಲ್ಲ ಗಿಡಮರಗಳದ್ದಾಗಿತ್ತು. ಸುರಿದ ಮಳೆನೀರನ್ನು ಬೇಸಿಗೆ ಮುಗಿಯುವವರೆಗೂ ಸ್ಪಾಂಜಿನಂತೆ, ಹೀರುಹಾಳೆಗಳಂತೆ ಹಿಡಿದಿಟ್ಟುಕೊಳ್ಳುವ ಜವಾಬ್ದಾರಿ ಕಾಡಿನ ತರಗೆಲೆ, ಮೇಲ್ಮಣ್ಣು ಮತ್ತು ನದಿಗಳ ಮರಳಿನದಾಗಿತ್ತು. ಪ್ರಕೃತಿಯ ಈ ಸರಳ ಲೆಕ್ಕಾಚಾರವನ್ನು ನಾವು ಏರುಪೇರು ಮಾಡಿದ್ದೇವೆ. ನದಿಗಳಿಗೆ ಅಣೆಕಟ್ಟು ಕಟ್ಟಿ, ಬೃಹತ್ ನೀರಾವರಿ ಹೆಸರಿನಲ್ಲಿ ಲಕ್ಷಾಂತರ ಚದರ ಕಿಲೊಮೀಟರ್‌ಗೆ ನೀರಿನ ಹರವನ್ನು ವಿಸ್ತರಿಸಿ ಅವೆಲ್ಲ ಆವಿಯಾಗುವಂತೆ ಮಾಡುತ್ತಿದ್ದೇವೆ; ಸಮುದ್ರದ ಕೆಲಸವನ್ನು ನದಿಗಳಿಗೆ ಹೊಲಗಳಿಗೆ ಒಪ್ಪಿಸಿದ್ದೇವೆ. ಗಿಡಮರಗಳ ಕೆಲಸವನ್ನು, ಅಷ್ಟೇಕೆ ಗಿಡಮರಗಳನ್ನೇ ಬರಖಾಸ್ತು ಮಾಡಿದ್ದೇವೆ. ನದಿಗಳನ್ನು ಅಲ್ಲಲ್ಲಿ ಅಡ್ಡ ತಿರುಗಿಸಿ ಅವುಗಳ ಕೆಲಸವನ್ನು ಸ್ಥಗಿತಗೊಳಿಸಿದ್ದೇವೆ. ಕಾರ್ಖಾನೆಗಳ ಮೂಲಕ ಅಪಾರ ಪ್ರಮಾಣದ ನೀರನ್ನು ಮಲಿನ ಮಾಡಿ ವಾಯುಮಂಡಲದಲ್ಲಿ ವಿಷಚಕ್ರವನ್ನು ಸ್ಥಾಪಿಸಿದ್ದೇವೆ. ನೀರನ್ನು ಹಿಡಿದಿಡಬೇಕಾದ ಮೇಲ್ಮಣ್ಣನ್ನು ಜಲಾಶಯಗಳಿಗೆ ತಳ್ಳಿ, ನದಿಯ ಮರಳನ್ನೆಲ್ಲ ನಗರಗಳಿಗೆ ಸಾಗಿಸಿ ಬಹುಮಹಡಿ ಕಟ್ಟಡಗಳಿಗೆ, ರಸ್ತೆಗಳಿಗೆ, ಮಾಲ್‌ಗಳಿಗೆ, ಕ್ರೀಡಾಂಗಣಗಳಿಗೆ ಸುರಿದಿದ್ದೇವೆ.

ನೆಲದಲ್ಲಿನ ಹೀರುಹಾಳೆಗಳನ್ನು ಚಿಂದಿ ಮಾಡಿ, ಅನಾದಿ ಕಾಲದಿಂದ ನೆಲದಾಳದ ಶಿಲೆಗಳಲ್ಲಿ ಹಿಡಿದಿಟ್ಟಿದ್ದ ಭೂಜಲವನ್ನೆಲ್ಲ ಕೊಳವೆಗಳ ಮೂಲಕ ಮೇಲಕ್ಕೆತ್ತಿ, ಭೂಗತ ಬರಗಾಲವನ್ನು ಸೃಷ್ಟಿ ಮಾಡಿದ್ದೇವೆ.

ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಕಳೆದ ಐವತ್ತು ವರ್ಷಗಳಿಂದ ಗಿಡಮರಗಳ ಸತತ ನಾಶದಿಂದಾಗಿ ನೆಲದ ತೇವಾಂಶ ಕಡಿಮೆಯಾಗುತ್ತ, ವಿಜ್ಞಾನಿಗಳ ಪ್ರಕಾರ ಅಲ್ಲಿ 'ಮರುಭೂಮಿ ಸದೃಶ ಪರಿಸರ' ಸೃಷ್ಟಿಯಾಗುತ್ತಿದೆ. ಎಷ್ಟೆಂದರೆ, ರಾಜಸ್ತಾನವನ್ನು ಬಿಟ್ಟರೆ ಭಾರತದ ಎರಡನೆಯ ಅತಿದೊಡ್ಡ ಮರುಭೂಮಿ ನಮ್ಮ ರಾಜ್ಯದಲ್ಲೇ ರೂಪುಗೊಳ್ಳುತ್ತಿದೆ.


ನೆಲದಾಳದ ಸಮತೋಲ ಹದಗೆಟ್ಟರೆ, ವಾತಾವರಣದ ಸಮತೋಲ ಏರುಪೇರಾದರೆ, ಜಲಚಕ್ರದ ಸಮತೋಲ ಹೇಗೆ ಸುಸ್ಥಿತಿಯಲ್ಲಿರಲು ಸಾಧ್ಯ? ಮಳೆ ಬೀಳಬೇಕಿದ್ದಲ್ಲಿ ಬರಗಾಲ ಬರುತ್ತದೆ, ಚಂಡಮಾರುತಗಳ ಸಂಖ್ಯೆ ಹೆಚ್ಚಾಗುತ್ತದೆ; ಇಡೀ ತಿಂಗಳಲ್ಲಿ ಸುರಿಯಬೇಕಿದ್ದ ಮಳೆ ಎರಡೇ ದಿನಗಳಲ್ಲಿ ಭೋರ್ಗರೆದು ಸುರಿಯುತ್ತದೆ. ಮಳೆ ಮುಗಿದ ಮರುದಿನವೇ ರಣಬಿಸಿಲು ರಾಚುತ್ತದೆ.

**ನೆಲರಾಯನ ಸಾಲ ವಸೂಲಾತಿ**

'ಅಣ್ಣಾ, ನಮ್ಮೂರಲ್ಲಿ ಮಳೆ ಕಮ್ಮಿಯಾಗಿಲ್ಲರೀ... ಆದರೆ ನಮ್ಮೂರಿನ ಹಳ್ಳ ತುಂಬಿ ಹರಿಯೋದೇ ಇಲ್ಲ. ಕೆರೆಗಳೂ ತುಂಬುತ್ತಿಲ್ಲ. ಬಿದ್ದ ಮಳೆ ಎಲ್ಲಿ ಹೋಗ್ತದೊ ಗೊತ್ತೇ ಆಗುತ್ತಿಲ್ಲ' ಎನ್ನುತ್ತಾರೆ, ರಾಮನಗರದ ರೈತ. ನೆಲಕ್ಕೆ ತೀರಾ ಬಾಯಾರಿಕೆ ಆಗಿದ್ದಾಗ, ಭೂಗತ ಶಿಲಾಸ್ತರಗಳೆಲ್ಲ ಒಣಗಿ ನಿಂತಿದ್ದಾಗ, ಮಳೆಯ ನೀರನ್ನೆಲ್ಲ ನೆಲವೇ ಹೀರಿಕೊಳ್ಳುತ್ತದೆ. ಒಂದು ರೀತಿಯಲ್ಲಿ ಅದು 'ಸಾಲ ವಸೂಲಾತಿ'ಗೆ ನಿಲ್ಲುತ್ತದೆ. ಬಹಳಷ್ಟು ರೈತರು ಬೇಕಾಬಿಟ್ಟಿಯಾಗಿ ಬೋರ್‌ವೆಲ್ ಕೊರೆದು ನೀರನ್ನು ಹೀರಿ ತೆಗೆದಿದ್ದಾರೆ. ಪ್ರಕೃತಿಯ ಠೇವಣಿಯಿಂದ ಅಷ್ಟೆಲ್ಲ ಸಾಲ ಎತ್ತಿದ್ದೀರಿ, ಮರುಪಾವತಿ ಮಾಡಿದ್ದೇ ಇಲ್ಲ. ಅದಕ್ಕೇ ನಿಸರ್ಗವೇ ಸಾಲ ವಸೂಲಾತಿ ಮಾಡುತ್ತದೆ.

'ಜೋರ್ಡಾನ್ ನದಿಯ ನೀರು ಎಲ್ಲಿ ಮಾಯವಾಯಿತು ಗೊತ್ತೆ? ಅದು ಹಣ್ಣು, ತರಕಾರಿಗಳಾಗಿ, ಹಾಲುಹೈನಾಗಿ, ಮಾಂಸದ ಮೂಟೆಗಳಾಗಿ ವಿದೇಶಗಳಿಗೆ





ರಫ್ತಾಗಿದೆ' ಎನ್ನುತ್ತಾರೆ, 'ಹೋಮ್' ಎಂಬ ಅದ್ಭುತ ಸಾಕ್ಷ್ಯಚಿತ್ರವನ್ನು ನಿರ್ಮಿಸಿದ ಎನ್ ಆರ್ಥರ್ ಬರ್ಟ್‌ಲ್ಯಾಂಡ್. ನಮ್ಮ ದೇಶದ ಬಹುತೇಕ ಎಲ್ಲ ನದಿಗಳೂ ಹೀಗೆ ಸಕ್ಕರೆ, ತಂಬಾಕು, ಜೋಳ, ಗೋಧಿ, ಅಕ್ಕಿಯಾಗಿ, ಹಾಲು ಮೊಸರು ಬೇಕರಿ ತಿಂಡಿತಿನಿಸುಗಳಾಗಿ ನಮ್ಮನ್ನೆಲ್ಲ ದಢೂತಿ ವ್ಯಕ್ತಿಗಳನ್ನಾಗಿ ಮಾಡಿ ತಾವು ಒಣಗುತ್ತಿವೆ.

ನಮ್ಮ ಗಿಡಮರಗಳೆಲ್ಲ ಎಲ್ಲಿ ಮಾಯವಾದವು ಗೊತ್ತೆ? ಅವು ಕೃಷಿಭೂಮಿಯಾಗಿ, ನೀಲಗಿರಿ ನೆಡುತೋಪುಗಳಾಗಿ, ನೀರನ್ನೆಲ್ಲ ಹೀರಿ ತೆಗೆದು ವಾಯುಮಂಡಲಕ್ಕೆ ಸೇರಿಸಿ, ಮುಂದೆ ದಿಮ್ಮಿಗಳಾಗಿ ಫ್ಯಾಕ್ಟರಿಗೆ ಹೋಗಿ, ನದಿಗಳನ್ನು ಮಲಿನ ಮಾಡಿ ಅಲ್ಲಿಂದ ನಾರಿನ ನೈಲಾನ್ ಬಟ್ಟೆಗಳಾಗಿ, ಪ್ಲಾಸ್ಟಿಕ್ ವಸ್ತುಗಳಾಗಿ, ತಿಪ್ಪೆರಾಶಿ ಸೇರಿ ಬೆಂಕಿಗೆ ಆಹುತಿಯಾಗಿ ಹೊಗೆಯಾಗುತ್ತವೆ. ಒಣಭೂಮಿಯ ಕಿರು ಪೊದೆಗಳು ಮತ್ತು ಕುರುಚಲು ಗಿಡಗಂಟಿಗಳು ಬಡವರ ಅಡುಗೆ ಮನೆಯಲ್ಲಿ ಹೊಗೆಯಾಗಿ ಹಾರಿ ವಾಯುಮಂಡಲಕ್ಕೆ ಸೇರಿವೆ.

ನೂರು ವರ್ಷಗಳ ಹಿಂದೆ ಭೂಮಿ ಇವನ್ನೆಲ್ಲ ಸಹಿಸಿಕೊಳ್ಳುತ್ತಿತ್ತು. ಆದರೆ ಆಗ ಇಡೀ ಭೂಮಿಯ ಜನಸಂಖ್ಯೆ ಬರೀ 120 ಕೋಟಿ ಇತ್ತು. ಅದು ಬೆಳೆಯುತ್ತ, 250, 400, 600 ಕೋಟಿ ದಾಟಿ ಈಗ 720 ಕೋಟಿಗೆ ತಲುಪಿದೆ. ಸಾಲದ್ದಕ್ಕೆ ಈ ಭೂಮಿಯ ಒಬ್ಬೊಬ್ಬ ವ್ಯಕ್ತಿಯ ಅಗತ್ಯಗಳೂ ನೂರು ಪಟ್ಟು ಹೆಚ್ಚಾಗಿವೆ. 'ನೂರು ಪಟ್ಟು? ಅದು ತೀರಾ ಉತ್ಪ್ರೇಕ್ಷೆ!' ಎಂದು ಹುಬ್ಬೇರಿಸಬೇಡಿ. ನಮ್ಮ ಸುತ್ತೆಲ್ಲ ನೋಡಿದರೆ, ಈಗಿನ ಶಾಲಾಮಕ್ಕಳು ಹೊರುವ ಸ್ಕೂಲ್‌ಬ್ಯಾಗ್ ಎಂಬ ಮೂಟೆಗಳನ್ನು ನೋಡಿದರೆ ಮೇಲ್ನೋಟಕ್ಕೇ ನಮಗೆ ಅದು ಗೊತ್ತಾಗುತ್ತದೆ. ಆ ಚೀಲದಲ್ಲಿರುವ ಪ್ರತಿಯೊಂದು ವಸ್ತುವೂ (ಕಾಗದ, ಪೆನ್ನು, ಕಂಪಾಸು, ಕ್ರಿಕೆಟ್ ಚೆಂಡು, ಪ್ಲಾಸ್ಟಿಕ್ ಡಬ್ಬ, ನೀರಿನ ಬಾಟಲಿ ಎಲ್ಲವೂ) ಅಪಾರ ನೀರನ್ನು ಕುಡಿದು ಅಥವಾ ಮಲಿನ ಮಾಡಿ ಅಥವಾ ಆವಿಯಾಗಿಸಿಯೇ ತಯಾರಾಗಿ ಬರುತ್ತದೆ. ಪ್ರತಿಯೊಂದು ನಗರದ ಹೊರಗೆ ಗುಡ್ಡದೋಪಾದಿಯಲ್ಲಿ ದಿನವೂ ರಾಶಿಬೀಳುವ ತಿಪ್ಪೆಯಲ್ಲಿನ ಒಂದೊಂದು ಚಿಂದಿ, ಚಕ್ಕಳ, ಗಾಜು, ಪ್ಲಾಸ್ಟಿಕ್ ವಸ್ತುವಿನ ಚರಿತ್ರೆಯಲ್ಲೂ ನೀರಿನ ಕರಾಳ ಪುಟಗಳು ಅವಿತಿವೆ. ನೂರು ವರ್ಷಗಳ ಹಿಂದೆ ಇವೆಲ್ಲ ಇದ್ದುವೆ?

**ತೋರಿಕೆಯ ಕ್ರಮ, ತೋರಿಕೆಯ ಫಲ:** ಮುಂಬರುವ ದಿನಗಳಲ್ಲಿ ಬರಗಾಲ ಮತ್ತು ಕಡುಬರಗಾಲಗಳನ್ನು ಪದೇ ಪದೇ ಎದುರಿಸುವ ಸಂದರ್ಭ ಬರಲಿದೆ. ಅವುಗಳ ತೀವ್ರತೆಯನ್ನು ಕಡಿಮೆ ಮಾಡಬೇಕೆಂದಿದ್ದರೆ ಅನೇಕ ಉಪಕ್ರಮಗಳನ್ನು ಒಟ್ಟೊಟ್ಟಿಗೇ ಕಟ್ಟುನಿಟ್ಟಾಗಿ ಕೈಗೊಳ್ಳಬೇಕಾಗುತ್ತದೆ. ಶ್ರದ್ಧೆಯಿಂದ ಕೈಗೊಳ್ಳಬೇಕಾಗುತ್ತದೆ. ನೀರನ್ನು ಅತಿಯಾಗಿ ಬೇಡುವ ಬೆಳೆಗಳನ್ನು ಕ್ರಮೇಣ ಕಡಿಮೆ ಮಾಡುತ್ತ ಹೋಗಬೇಕು; ಕೆರೆ ಮತ್ತು ಇತರ ಜಲಮೂಲಗಳಲ್ಲಿ ಶೇಖರವಾಗಿರುವ ಹೂಳನ್ನು ಎತ್ತಬೇಕು. ಮತ್ತೆ ಹೂಳು ಸಂಗ್ರಹ ಆಗದಂತೆ ಕ್ರಮಬದ್ಧವಾಗಿ ಎಲ್ಲ ಜಲಾನಯನ ಕ್ಷೇತ್ರದಲ್ಲೂ ಮಣ್ಣಿನ ಸವಕಳಿಯನ್ನು ತಡೆಗಟ್ಟಬೇಕು. ಮಳೆನೀರು ನೆಲದೊಳಕ್ಕೆ ಇಂಗಲು ಅವಕಾಶ ಮಾಡಿಕೊಡಬೇಕು. ಪ್ರತಿವರ್ಷ ಬೀಳುವ ಮಳೆಯ ಶೇಕಡಾ 80 ಭಾಗವನ್ನು ಮಾತ್ರ ಕೊಳವೆ ಬಾವಿಗಳ ಮೂಲಕ ಮೇಲೆತ್ತ ಬೇಕು. ಅಂದರೆ, ನೀರಾವರಿಯ ಬೋರ್‌ವೆಲ್‌ಗಳಿಗೆ ನಿಯಂತ್ರಣ ಹಾಕಬೇಕು. ನಗರಗಳಲ್ಲಿ ಬಳಸಿ ಬಿಸಾಕುವ ನೀರಿನ ಶೇಕಡಾ 80 ಭಾಗವನ್ನು ಮತ್ತೆ ಮರುಬಳಕೆ ಮಾಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಹಸುರಿನ ಆಚ್ಛಾದನೆಯನ್ನು ಎಲ್ಲಕಡೆ ಹೆಚ್ಚಿಸಬೇಕು. ಈ ಎಲ್ಲ ಕೆಲಸಗಳೂ ನಡೆಯುತ್ತಲೇ ಇವೆಯೆಂದು ಸರಕಾರಿ ಕಡತಗಳಲ್ಲಿ, ಅಂಕಿಸಂಖ್ಯೆಗಳಲ್ಲಿ ಕಾಣುತ್ತವೆ ನಿಜ. ಆದರೆ ಹಾಗೆ ತೋರಿಕೆಯ ಕೆಲಸಗಳೇ ನಡೆಯುತ್ತಿದ್ದರೆ ನಿಸರ್ಗವೂ ನಮಗೆ ತೋರಿಕೆಯ ಮಳೆಗಾಲವನ್ನೇ ಕೊಡುತ್ತದೆ.

ಬರಗಾಲದ ಹೆಚ್ಚಳಕ್ಕೆ, ಭೂತಾಪದ ಹೆಚ್ಚಳಕ್ಕೆ ನಮ್ಮೆಲ್ಲರ ದಾಹವೇ ಮುಖ್ಯ ಕಾರಣ ಎಂಬುದು ಇದೀಗ ಸ್ಪಷ್ಟವಾಗುತ್ತಿದೆ. ವೈಭೋಗದ ದಾಹ, ಪರರನ್ನು ಮೀರಿಸುವ ದಾಹ, ವೇಗದ ದಾಹ ಇವನ್ನೆಲ್ಲ ನಿಯಂತ್ರಿಸುವುದು ಸುಲಭವೇನಲ್ಲ. ನಮ್ಮೆಲ್ಲರ ದಾಹವನ್ನು ಹೆಚ್ಚಿಸಲೆಂದೇ ಜಗತ್ತಿನ ಎಲ್ಲ ಕಾರ್ಪೊರೇಟ್ ಶಕ್ತಿಗಳೂ ಎಲ್ಲ ಜಾಹೀರಾತುಗಳೂ ಬರಗಾಲವನ್ನು ಬರಮಾಡಿಕೊಳ್ಳುವ ಧಾವಂತದಲ್ಲೇ ಕೆಲಸ ಮಾಡುತ್ತಿರುತ್ತವೆ. ಅದಕ್ಕೆಂದು ನೆಲದೊಳಗಿನ ಖನಿಜ ದ್ರವ್ಯಗಳನ್ನು, ಪಳೆಯುಳಿಕೆ ಇಂಧನಗಳನ್ನು ಬಳಸುತ್ತ ಹೋದಷ್ಟೂ ನೆಲದಾಳವೆಲ್ಲ ಬರಡಾಗುತ್ತ ಹೋಗುತ್ತದೆ. ಅದರ ಬದಲು ಸೌರಶಕ್ತಿ, ಗಾಳಿಶಕ್ತಿ ಮತ್ತು ಜೈವಿಕ ಇಂಧನಗಳನ್ನು ಹೆಚ್ಚು ಹೆಚ್ಚು ಬಳಸುತ್ತ ಹೋದರೆ ಅವೇ ಬರಗಾಲವನ್ನು ತಡೆಯುವ ಮಹಾನ್ ಶಕ್ತಿಯಾಗಿ ಕೆಲಸ ಮಾಡುತ್ತವೆ.

ಎಲ್ಲ ದೇಶಗಳೂ ಆ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ಈಚೆಗಷ್ಟೇ ಪ್ಯಾರಿಸ್ ಶೃಂಗಸಭೆಯಲ್ಲಿ ಒಪ್ಪಂದವೊಂದು ಏರ್ಪಟ್ಟಿದೆ. ಆ ಒಪ್ಪಂದ ಕೇವಲ 196 ದೇಶಗಳ ಸರಕಾರಗಳ ನಡುವಣ ಒಪ್ಪಂದವಲ್ಲ, ಜನರ ಒಡಂಬಡಿಕೆ ಎಂಬ ಅರಿವು ನಮಗೆ ಮೂಡಬೇಕಿದೆ. ಸರಕಾರದ್ದೇ ಆದರೆ ಅದು ಸಂಪೂರ್ಣ ಜಾರಿಗೆ ಬರಲು ಇನ್ನೂ ಐವತ್ತು ವರ್ಷಗಳು ಬೇಕು. ನೀರನ್ನು ಮಿತವಾಗಿ ಬಳಸುವ, ಮಳೆನೀರನ್ನು ಸಂಗ್ರಹಿಸುವ, ಗಿಡ ನೆಡುವ ಕೆಲಸಗಳೆಲ್ಲ ನಮ್ಮದೇ ಕೆಲಸ ಎಂಬಂತೆ ನಾವು ತೊಡಗಿಕೊಳ್ಳದಿದ್ದರೆ, ಗೊತ್ತಲ್ಲ– ಐವತ್ತು ವರ್ಷಗಳ ನಂತರದ ಸಮಾಜದಲ್ಲಿ 40 ವರ್ಷಗಳ ವ್ಯಕ್ತಿಯೇ ಅತ್ಯಂತ ಹಿರಿಯವನಾಗಿರುತ್ತಾನೆ. ನಡುಗುವ ಕೈಗಳಿಂದ ತನ್ನ ಪೂರ್ವಿಕರಿಗೆ ಪತ್ರ ಬರೆಯಲು ತೊಡಗುತ್ತಾನೆ. ■






# ಬರಗಾಲದ ಸಂಕಷ್ಟದಲ್ಲಿ

## ಜನರ ಜೊತೆಯಲ್ಲಿ...











ಪ್ರಕೃತಿ ಮಾತೆ ಮುನಿದಿದ್ದಾಳೆ. ಹಿಂದೆಂದೂ ಕಾಣದ ಭೀಕರ ಬರಗಾಲದ ಸಂಕಷ್ಟವನ್ನು ರಾಜ್ಯ ಎದುರಿಸುತ್ತಿದೆ. ರಾಜ್ಯದ 176 ತಾಲ್ಲೂಕುಗಳ ಪೈಕಿ 136 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಬಿಸಿಲಿನಿಂದ ಬಸವಳಿದು ಮುಂದೇನು..? ಎಂದು ಕಂಗೆಟ್ಟ ಜನತೆಗೆ ಸರ್ಕಾರದ ಅಭಯಹಸ್ತ ಒದಗಿಬಂದಿದೆ. ನೊಂದ ಜನತೆಯ ಸಂಕಷ್ಟಗಳ ನಿವಾರಣೆಗೆ ರಾಜ್ಯ ಸರ್ಕಾರ ಸಮರೋಪಾದಿಯಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಂಡಿದೆ. ಬರದ ಬವಣೆಯಿಂದ ತತ್ತರಿಸಿರುವ ಜನತೆಯ ರಕ್ಷಣೆಗೆ ಸರ್ಕಾರದ ಆಡಳಿತ ಯಂತ್ರ ಸಕಲ ರೀತಿಯಲ್ಲೂ ಸ್ಪಂದಿಸುತ್ತಿದೆ.

ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಬರಪೀಡಿತ ಪ್ರದೇಶಗಳ ಅಧ್ಯಯನ ಮತ್ತು ಬರ ನಿರ್ವಹಣೆಗೆ ಕಂದಾಯ ವಿಭಾಗಾವಾರು ಸಮಿತಿಗಳನ್ನು ರಚಿಸಿ, ತಾವೇ ಖುದ್ದಾಗಿ ಬೀದರ್, ಕಲಬುರುಗಿ, ಯಾದಗಿರಿ, ರಾಯಚೂರು, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಕೊಪ್ಪಳ, ಬಳ್ಳಾರಿ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಭೇಟಿ ನೀಡಿದರು. ಬರ ನಿರ್ವಹಣೆಗೆ ಜಿಲ್ಲಾಡಳಿತಗಳು ತೆಗೆದುಕೊಂಡಿರುವ ಕ್ರಮಗಳ ಪ್ರಗತಿ ಪರಿಶೀಲನೆಯನ್ನೂ ನಡೆಸಿದರು.

ಜನರ ಸಂಕಷ್ಟಗಳಿಗೆ ಶೀಘ್ರವಾಗಿ ಸ್ಪಂದಿಸಿದ ಮಾನ್ಯ ಮುಖ್ಯಮಂತ್ರಿಗಳು ಬರ ನಿವಾರಣೆಯತ್ತ ತುರ್ತು ಕ್ರಮಗಳನ್ನು ಕೈಗೊಂಡರು. ಜನರಿಗೆ ಕುಡಿಯುವ ನೀರು ಮತ್ತು ಉದ್ಯೋಗ ಒದಗಿಸುವುದರ ಜತೆಗೆ ಜಾನುವಾರುಗಳಿಗೆ ಗೋಶಾಲೆ, ಮೇವು ಮತ್ತು ಔಷಧಿ ಒದಗಿಸುವಂತೆ ಜಿಲ್ಲಾಡಳಿತಗಳಿಗೆ ಸೂಚನೆ ನೀಡಿ, ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಆದೇಶಿಸಿದರು.

**ಬರ ನಿರ್ವಹಣೆಗೆ ರಾಜ್ಯ ಸರ್ಕಾರದ ಸ್ಪಂದನೆ:**

- 2015 ರ ಮುಂಗಾರು ಹಂಗಾಮಿನಲ್ಲಿ ಒಟ್ಟು 15,635 ಕೋಟಿ ರೂ. ಮೌಲ್ಯದ ಕೃಷಿ ಮತ್ತು ತೋಟಗಾರಿಕಾ ಬೆಳೆ ನಾಶವಾಗಿದೆ. ಇದಕ್ಕಾಗಿ 3,830.84 ಕೋಟಿ ರೂ. ನೆರವು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು.

  ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ರಾಜ್ಯಕ್ಕೆ 1,540.20 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಈ ಅನುದಾನವನ್ನು ಕೂಡಲೇ ಜಿಲ್ಲಾಡಳಿತಗಳಿಗೆ ಹಂಚಿಕೆ ಮಾಡಲಾಗಿದ್ದು, ನೊಂದವರಿಗೆ ಹಣ ವಿತರಿಸಲಾಗಿದೆ.
- ಉತ್ತರ ಕರ್ನಾಟಕದ 12 ಜಿಲ್ಲೆಗಳ 62 ತಾಲ್ಲೂಕುಗಳಲ್ಲಿ ಹಿಂಗಾರು ಮಳೆ ಕೂಡಾ ವಾಡಿಕೆಯ ಶೇಕಡಾ 45 ರಷ್ಟು ಮಾತ್ರ ಆಗಿತ್ತು. ಇದರಿಂದ ಅಂದಾಜು 6733.14 ಕೋಟಿ ರೂ. ಮೌಲ್ಯದ ಬೆಳೆ ಹಾನಿಯಾಗಿದೆ. ಇದರ ಜೊತೆ ಕುಡಿಯುವ ನೀರು ಪೂರೈಕೆ, ಮೇವು ಸರಬರಾಜು ಸೇರಿದಂತೆ ಇತರ ಪರಿಹಾರ ಕಾರ್ಯಕ್ಕಾಗಿ 1,417.14 ಕೋಟಿ ರೂ. ನೆರವು ಕೋರಿ 23.01.2016 ರಂದು ಪ್ರಧಾನ ಮಂತ್ರಿಯವರಿಗೆ ಮನವಿ ಸಲ್ಲಿಸಿದ್ದು, ಕೇಂದ್ರದ ಉನ್ನತಾಧಿಕಾರ ಸಮಿತಿ 723 ಕೋಟಿ ರೂ. ನೆರವು ಒದಗಿಸಲು ಅಂಗೀಕಾರ ನೀಡಿದೆ.
- ಕುಡಿಯುವ ನೀರು ಪೂರೈಕೆ ಮತ್ತು ಮೇವು ಪೂರೈಕೆಗಾಗಿ ರಾಜ್ಯ ಸರ್ಕಾರ 881.37 ಕೋಟಿ ರೂ. ಬಿಡುಗಡೆ ಮಾಡಿದೆ.
- ರಾಜ್ಯದ 1109 ಗ್ರಾಮಗಳಿಗೆ 1598 ಟ್ಯಾಂಕರ್‌ಗಳು ಹಾಗೂ ನಗರಪ್ರದೇಶದ 493 ವಾರ್ಡ್‌ಗಳಿಗೆ 1739 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಜೂನ್ ತಿಂಗಳ ಅಂತ್ಯದ ವರೆಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಲಿರುವ 2071 ಗ್ರಾಮಗಳನ್ನು ಗುರುತಿಸಲಾಗಿದ್ದು ಅವುಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು.
- ರಾಜ್ಯದಲ್ಲಿ 23 ಗೋಶಾಲೆಗಳನ್ನು ಸ್ಥಾಪಿಸಲಾಗಿದ್ದು ಇವುಗಳಲ್ಲಿ 11,539 ಜಾನುವಾರುಗಳು ಆಶ್ರಯ ಪಡೆದಿವೆ. ಇದರ ಜತೆ 104 ಮೇವು ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿದ್ದು ಇವುಗಳಲ್ಲಿ ರೈತರಿಗೆ ಶೇಕಡಾ 50ರ ದರದಲ್ಲಿ ಒಣಮೇವು ನೀಡಲಾಗುತ್ತಿದೆ. ಪ್ರಸ್ತುತ ರಾಜ್ಯದಲ್ಲಿ 84.46 ಲಕ್ಷ ಟನ್ ಮೇವು ಲಭ್ಯವಿದ್ದು ಮುಂದಿನ 18 ವಾರಗಳಿಗೆ ಸಾಕಾಗುತ್ತದೆ.
- ಬರಪೀಡಿತ ಪ್ರದೇಶಗಳಲ್ಲಿ 2015-16ನೇ ಸಾಲಿನಲ್ಲಿ ಆರು ಕೋಟಿ ಮಾನವ ದಿನಗಳಷ್ಟು ಉದ್ಯೋಗ ಕಲ್ಪಿಸಲಾಗಿದೆ. ಮುಂಗಡವಾಗಿ ವೇತನ ನೀಡಲು ರಾಜ್ಯ ಸರ್ಕಾರ 750 ಕೋಟಿ ರೂ. ಬಿಡುಗಡೆ ಮಾಡಿದೆ.
- ಬರಗಾಲದ ಕಾರಣಕ್ಕಾಗಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಪಾವತಿಯನ್ನು ಒಂದು ವರ್ಷ ಮುಂದೂಡಲಾಗಿದೆ. ದಿನಾಂಕ: 30.09.2015 ರವರೆಗೆ ಬಾಕಿ ಇರುವ ಸಹಕಾರಿ ಸಂಘಗಳ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ. ಇದರಿಂದ 2.07 ಲಕ್ಷ ರೈತರಿಗೆ 316.54 ಕೋಟಿ ರೂ. ನೆರವು ಒದಗಿಸಿದಂತಾಗಿದೆ.
- ರಾಜ್ಯದ ಎಲ್ಲಾ 137 ಬರಪೀಡಿತ ತಾಲ್ಲೂಕುಗಳಲ್ಲಿ ಬೇಸಿಗೆಯ ರಜಾ ದಿನಗಳಲ್ಲಿಯೂ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ನೀಡಲಾಗುತ್ತಿದೆ. ಇದಕ್ಕಾಗಿ 90 ಕೋಟಿ ರೂ. ಹೆಚ್ಚುವರಿಯಾಗಿ ಖರ್ಚು ಮಾಡಲಾಗುತ್ತಿದೆ.

ಬರಗಾಲದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಮತ್ತು ಇಲಾಖಾ ಅಧಿಕಾರಿಗಳ ಜೊತೆ ಮಾನ್ಯ ಮುಖ್ಯಮಂತ್ರಿಗಳು ವಿಡಿಯೋ ಸಂವಾದ ಮೂಲಕ ಪ್ರಗತಿ ಪರಿಶೀಲನೆ ನಡೆಸಿದ್ದು, ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿಯು 11 ಬಾರಿ ಸಭೆ ಸೇರಿ ಬರಪರಿಹಾರ ಕಾರ್ಯಗಳ ಪರಿಶೀಲನೆ ನಡೆಸಿದೆ.

ಬರಪೀಡಿತ ಜನರ ನೆರವಿಗಾಗಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ತೆರೆಯಲಾಗಿದೆ. ಬೆಂಗಳೂರು ಸಹಾಯವಾಣಿ ಸಂಖ್ಯೆ – 1070 ಮತು ಇತರ ಜಿಲ್ಲಾ ಕೇಂದ್ರಗಳ ಸಹಾಯವಾಣಿ 1077 ಆಗಿದೆ. ಜನ ತಮ್ಮ ಕಷ್ಟಗಳನ್ನುಈ ದೂರವಾಣಿಯ ಮೂಲಕ ಸರ್ಕಾರದ ಬಳಿ ನಿವೇದಿಸಬಹುದು.











# ಜಾಗತಿಕ ತಾಪಮಾನ: ನಿಮ್ಮ ಕೊಡುಗೆ ಎಷ್ಟು?



**ಅಚಿತರ ರಾಷ್ಟ್ರೀಯ ಮಟ್ಟದಲ್ಲಿ ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಕೇಳಿಬರುತ್ತಿರುವ ಮಾತು 'ಜಾಗತಿಕ ತಾಪಮಾನ' ಏರಿಕೆ. ಖ್ಯಾತ ಪರಿಸರವಾದಿ ಡಾ. ಎ. ಎನ್ ಯಲ್ಲಪ್ಪ ರೆಡ್ಡಿ ಯವರನ್ನು ಜೂನ್ 5ರ ಪರಿಸರ ದಿನಾಚರಣೆ ಹಿನ್ನೆಲೆಯಲ್ಲಿ ಮಾತನಾಡಿಸಿದಾಗ ಪರಿಸರ, ಜಾಗತಿಕ ತಾಪಮಾನ ಏರಿಕೆ ಕುರಿತು ಅವರ ಅನಿಸಿಕೆಗಳು ಅವರ ಮಾತುಗಳಲ್ಲಿ...**

'**ಜಾ**ಗತಿಕ ತಾಪಮಾನ' ಕಳೆದೊಂದು ದಶಕದಿಂದ ಅಂತರರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಪ್ರಮುಖವಾಗಿ ಚರ್ಚೆಯಾಗುತ್ತಿರುವ ವಿಷಯ. ನಮ್ಮಲ್ಲಿಯೂ ಈ ಕುರಿತು ಚರ್ಚೆ, ಸಂವಾದ , ಜಾಗೃತಿ ಅಭಿಯಾನಗಳು ನಡೆಯುತ್ತಿವೆ. ಆದರೆ ಜಾಗತಿಕ ತಾಪಮಾನದಂಥ ಪ್ರಮುಖ ವಿಷಯ ಬಂದಾಗ ಎಷ್ಟರ ಮಟ್ಟಿಗೆ ನಾವು ಇದನ್ನು ತಡೆಯಲು ನಿಜವಾದ, ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ? ಎಂಬುದು ಮುಖ್ಯ.

ಸಮಸ್ಯೆ ನಿವಾರಣೆಯ ಪ್ರಶ್ನೆ ಬಂದಾಗ ಅಮೆರಿಕ, ಚೀನಾದಂಥ ದೇಶಗಳ ಕಡೆ ಬೊಟ್ಟು ಮಾಡಿ ಜಾಗತಿಕ ತಾಪಮಾನ ತಡೆಯಲು ಅಲ್ಲಿ ಪ್ರಯತ್ನಗಳಾಗುತ್ತಿವೆ ಬಿಡಿ.. ಇನ್ನು ನಾವೇನು ಮಾಡೋದು? ಎನ್ನುವ ಮನೋಭಾವವೇ ಹೆಚ್ಚು. ಅಥವಾ ಇದನ್ನು ತಡೆಯುವುದು ವಿಜ್ಞಾನಿಗಳ, ಬುದ್ಧಿಜೀವಿಗಳ ಜವಾಬ್ದಾರಿ; ನಾವ್ಯಾಕೆ ತಲೆ ಕೆಡಿಸಿಕೊಳ್ಳುವುದು ಎನ್ನುವ ಮನೋಭಾವವೂ ಇದೆ. ಈ ರೀತಿಯ ಭಾವನೆ ಇರುವವರೆಗೂ ಸಮಸ್ಯೆಗೆ ಸಕಾರಾತ್ಮಕ ಪರಿಹಾರ ಖಂಡಿತ ದೊರೆಯುವುದಿಲ್ಲ. ಒಂದು ಚರ್ಚೆ, ಒಂದು ವಿಚಾರಗೋಷ್ಠಿ ನಂತರ ಆ ವಿಷಯವನ್ನು ಅಷ್ಟಕ್ಕೇ ಅಲ್ಲಿಗೇ ಬಿಡುವುದು.. ಹೀಗಾದರೆ ಸಮಸ್ಯೆಗೆ ಪರಿಹಾರ ಎಲ್ಲಿ ಹೇಳಿ?

ಪ್ರಸ್ತುತ ಪರಿಸ್ಥಿತಿಯಲ್ಲಿ ಮನುಷ್ಯ ಹೇಗಾಗಿದ್ದಾನೆಂದರೆ ಅವನಿಗೆ ತನ್ನ ಸುತ್ತಮುತ್ತಲ ಎಲ್ಲ ವೈಭೋಗಗಳು ಬೇಕು, ಅಗತ್ಯಕ್ಕಿಂತ ಹೆಚ್ಚಾದರೂ ಪರವಾಗಿಲ್ಲ ಅದು ತನಗೆ ಬೇಕೇ ಬೇಕು.. ಅತ್ಯಾಧುನಿಕ ಮೊಬೈಲ್ ಫೋನ್‌ನಿಂದ ಹಿಡಿದು ಅತ್ಯಾಧುನಿಕ ಕಾರುಗಳವರೆಗೆ.. ಚೆನ್ನ, ಉತ್ಕೃಷ್ಟ ಎನಿಸುವಂತದೆಲ್ಲ ತನಗೆ ಬೇಕೇ ಬೇಕು. ಅನವಶ್ಯಕ ಎನಿಸುವ ವಸ್ತುಗಳ ನಿರಾಕರಣೆಯೇ ಇಲ್ಲ..

ನಮ್ಮ ನಿತ್ಯ ಜೀವನದಲ್ಲಿ ಹಾಸು ಹೊಕ್ಕಿರುವ ಈ ಎಲ್ಲ ವಸ್ತುಗಳು ಪರಿಸರದ ತಾಪಮಾನ ಏರಿಕೆಗೆ ಎಷ್ಟೆಲ್ಲಾ ರೀತಿಗಳಲ್ಲಿ ಕಾರಣವಾಗಿದೆ. ನಾವು ಯೋಚಿಸುವುದಿಲ್ಲ. ಇವುಗಳಿಂದ ನಮ್ಮ ಪರಿಸರಕ್ಕೆ ಆಗುತ್ತಿರುವ ಹಾನಿಯ ಬಗ್ಗೆ ನಾವು ಆಲೋಚಿಸುವುದಿಲ್ಲ, ಪರಿಸರ ಹಾಳುಗೆಡವಿರುವುದರಲ್ಲಿ ನಮ್ಮ ಪಾತ್ರ ಎಷ್ಟಿದೆ ಎನ್ನುವುದನ್ನೂ ಯೋಚಿಸುವುದಿಲ್ಲ.. ಕಣ್ಣಿಗೆ ಕಂಡ ಎಲ್ಲ ಅತ್ಯಾಧುನಿಕ ವಸ್ತುಗಳು ನಮಗೆ ಬೇಕು ಅಷ್ಟೆ.

ಮಾರುಕಟ್ಟೆಗೆ ಒಂದು ಹೊಸ ವಸ್ತು/ಪದಾರ್ಥ ಬಂತು ಎಂದಿಟ್ಟು ಕೊಳ್ಳೋಣ.. ಅದರಿಂದ ನಿಸರ್ಗದ ಮೇಲಾಗುವ, ಪ್ರಾಣಿ ಪಕ್ಷಿಗಳ ಮೇಲಾಗುವ ಪರಿಣಾಮಗಳನ್ನು ನಾವು ಪ್ರಶ್ನಿಸುವುದೇ ಇಲ್ಲ. ಅದನ್ನು ಕೊಳ್ಳುವಂತೆ ಪ್ರೇರೇಪಿಸುವ ಸೆಲೆಬ್ರಿಟಿಗಳು ನಮಗದನ್ನು ಹೇಳುವುದೂ ಇಲ್ಲ. ನಮಗವು ಬೇಕು ಅಷ್ಟೇ. ಬೇಕು ಬೇಕು ಬೇಕುಗಳ ನಡುವೆ ಕಳೆದುಹೋಗಿರುವ ನಾವು ಈಗ ಅದರಿಂದ ಈಚೆ ಬರಲೇಬೇಕಾಗಿದೆ. ನಮ್ಮನ್ನು ನಾವು ಸ್ವಯಂ ವಿಮರ್ಶೆಗೆ ಒಳಪಡಿಸಿಕೊಳ್ಳಬೇಕಿದೆ. ಈ ಆತ್ಮಾವಲೋಕನವನ್ನು ಪ್ರತಿ ಸಾಮಾನ್ಯ ವ್ಯಕ್ತಿಯೂ ತನಗೆ ತಾನು ಮಾಡಿಕೊಳ್ಳುತ್ತಾ, ತನ್ನನ್ನು ತಾನು ಸರಿಪಡಿಸಿಕೊಂಡು, ತನ್ನ ಅಗತ್ಯಗಳನ್ನು ಮಿತಗೊಳಿಸಿಕೊಂಡು ಪರಿಸರಕ್ಕೆ ತನ್ನಿಂದಾಗಬಹುದಾದ ಹಾನಿಯನ್ನು ಸ್ವಲ್ಪ ಮಟ್ಟಿಗಾದರೂ ತಡೆಯುವಲ್ಲಿ ಕೊಡುಗೆ ನೀಡಬಹುದು. ಈ ಕುರಿತು ಮಾಧ್ಯಮಗಳಲ್ಲೂ ಗಂಭೀರ ಚಿಂತನೆಗಳು ನಡೆಯುತ್ತಿಲ್ಲ ಎಂಬುದು ದುರಂತ. ಜನಸಾಮಾನ್ಯರಿಂದ ಹಿಡಿದು, ರಾಜಕೀಯ ಧುರೀಣರೂ, ರೈತರು, ವಿದ್ಯಾರ್ಥಿಗಳು, ಶಾಲಾ–ಕಾಲೇಜು–ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಈ ಕುರಿತು ಗಂಭೀರವಾಗಿ ಯೋಚಿಸುವ ಅಗತ್ಯವಿದೆ. ನಾವು ಕಟ್ಟುನಿಟ್ಟಾಗಿ ನಮ್ಮನ್ನು ನಾವೇ ಸ್ವಯಂ ಮೌಲ್ಯಮಾಪನಕ್ಕೆ ಒಳಪಡಿಸಿಕೊಳ್ಳಬೇಕಿದೆ. ವೈಭೋಗದ ವಸ್ತುಗಳನ್ನು ಕಿತ್ತೆಸೆದು ಸರಳ ಅಗತ್ಯಗಳನ್ನು ಮಾತ್ರ ಪರಿಗಣಿಸಬೇಕಿದೆ.

**1970 ರಲ್ಲಿ ಇದೇ ಬೆಂಗಳೂರು ಸ್ವರ್ಗದಂತಿತ್ತು. ಇಡೀ ವಿಶ್ವದಲ್ಲಿಯೇ ಬೆಂಗಳೂರಿನ ವಾತಾವರಣ ಅಷ್ಟೊಂದು ಹಿತಕರ, ರಮ್ಯ ಎಂದು ಹೆಸರುವಾಸಿಯಾಗಿತ್ತು. ಹಿತಕರ ಉಷ್ಣತೆ, ಹಿತಕರ ಮಳೆ, ಸಮೃದ್ಧ ಮಣ್ಣು.. ರಾಮನಗರದ ಬೆಟ್ಟಗಳು ಅಂತರಗಂಗೆಯ ಬೆಟ್ಟಗಳು, ನಂದಿಬೆಟ್ಟ ಹೀಗೆ ಬೆಂಗಳೂರನ್ನು ಸುತ್ತುವರೆದಿದ್ದ ಬೆಟ್ಟ ಶ್ರೇಣಿ.. ಬೆಂಗಳೂರು ಸಮೀಪದ ಮಂಚನಬೆಲೆ ಅರಣ್ಯ ಪದೇಶದಲ್ಲಿಯೇ 1500ಕ್ಕೂ ಹೆಚ್ಚು ಸಸ್ಯ ಪ್ರಬೇಧಗಳು, 200 ಜಾತಿಯ ಬಗೆ ಬಗೆಯ ತಿನ್ನಬಹುದಾದಂಥ ಹಣ್ಣುಗಳು ಸಿಗುತ್ತಿದ್ದವು. ಅವೆಲ್ಲ ನಿಸರ್ಗದತ್ತ ಜೀವ ನಿಧಿಯ ಪ್ರತೀಕವಾಗಿದ್ದವು.**

ಈಚೆಗೆ ಕಾಣಿಸಿಕೊಂಡಿರುವ ಹೊಸ ಬಗೆಯ ಜ್ವರಗಳು ಹಿಂದೆ ಇದ್ದುವೆ? ಎಚ್1ಎನ್1, ಬರ್ಡ್‌ಫ್ಲೂ, ಸ್ವೈನ್ ಫ್ಲೂ.. ನಮ್ಮ ಪರಿಸರದಲ್ಲಿ ಏನೆಲ್ಲ ಹೊಸ ಬಗೆಯ ರೋಗಗಳು ಕಾಣಿಸಿಕೊಳ್ಳುತ್ತಿವೆ.. ಹೀಗಾಗುತ್ತಿರುವುದಕ್ಕೆ ಕಾರಣಗಳನ್ನೂ ನಾವು ಹುಡುಕಲು ಹೋಗುವುದಿಲ್ಲ..

ಸಾಕಷ್ಟು ವರ್ಷಗಳಿಂದ ಭೂಮಿ ತಾಯಿಗೆ ಸಾಕಷ್ಟು ವಿಷವುಣಿಸಿದ್ದೇವೆ. ಜೈವಿಕ ಸರಪಳಿಯನ್ನು ನಾಶ ಮಾಡಿದ್ದೇವೆ. ಕೊಲೆ ಮಾಡುವುದಕ್ಕೂ ತಾಂತ್ರಿಕತೆಯ ನೆರವು ಪಡೆದಿದ್ದೇವೆ. ಕೀಟನಾಶಕ ಸಿಂಪಡಿಸಿ ಕೀಟಗಳನ್ನು ಕೊಲ್ಲುವುದು ನಮ್ಮನ್ನೂ ಕೊಲ್ಲುತ್ತದೆ ಎಂಬ ಸತ್ಯವನ್ನು ನಾವ್ಯಾರು ಇನ್ನೂ ಅರ್ಥಮಾಡಿಕೊಳ್ಳುತ್ತಿಲ್ಲ. ಮನುಷ್ಯನ ಪ್ರಜ್ಞಾವಂತಿಕೆಯೇ ನಶಿಸಿಹೋಗುತ್ತಿದೆ. ಲಾಭ– ದುರಾಸೆಗಳ ಸುಳಿಯಲ್ಲಿ ಮನುಷ್ಯ ಸಿಲುಕಿಕೊಂಡಿದ್ದಾನೆ. ನಿಸರ್ಗದ ಸಕಲ ಸಂಪನ್ಮೂಲ ಐಶ್ವರ್ಯಗಳು ವಿಶ್ವದ ನೂರಿನ್ನೂರು ಐಶ್ವರ್ಯವಂತರ ಲಾಭಕ್ಕಾಗಿಯೇ ಇದೆ ಎಂದು ಭಾವಿಸಿರುವುದು ದೊಡ್ಡ ದುರಂತ.



1970 ರಲ್ಲಿ ಇದೇ ಬೆಂಗಳೂರು ಸ್ವರ್ಗದಂತಿತ್ತು. ಇಡೀ ವಿಶ್ವದಲ್ಲಿಯೇ ಬೆಂಗಳೂರಿನ ವಾತಾವರಣ ಅಷ್ಟೊಂದು ಹಿತಕರ, ರಮ್ಯ ಎಂದು ಹೆಸರುವಾಸಿಯಾಗಿತ್ತು. ಹಿತಕರ ಉಷ್ಣತೆ, ಹಿತಕರ ಮಳೆ, ಸಮೃದ್ಧ ಮಣ್ಣು.. ರಾಮನಗರದ ಬೆಟ್ಟಗಳು ಅಂತರಗಂಗೆಯ ಬೆಟ್ಟಗಳು, ನಂದಿಬೆಟ್ಟ ಹೀಗೆ ಬೆಂಗಳೂರನ್ನು ಸುತ್ತುವರೆದಿದ್ದ ಬೆಟ್ಟ ಶ್ರೇಣಿ.. ಬೆಂಗಳೂರು ಸಮೀಪದ ಮಂಚನಬೆಲೆ ಅರಣ್ಯ ಪದೇಶದಲ್ಲಿಯೇ 1500ಕ್ಕೂ ಹೆಚ್ಚು ಸಸ್ಯ ಪ್ರಬೇಧಗಳು, 200 ಜಾತಿಯ ಬಗೆ ಬಗೆಯ ತಿನ್ನಬಹುದಾದಂಥ ಹಣ್ಣುಗಳು ಸಿಗುತ್ತಿದ್ದವು. ಅವೆಲ್ಲ ನಿಸರ್ಗದತ್ತ ಜೀವ ನಿಧಿಯ ಪ್ರತೀಕವಾಗಿದ್ದವು.

ಪ್ರತಿ ಗ್ರಾಮಕ್ಕೆ ಒಂದು ಕೆರೆ, ಒಂದು ಗುಂಡು ತೋಪು, ಒಂದು ಅಶ್ವತ್ಥಕಟ್ಟೆ ಇದ್ದೇ ಇರುತ್ತಿದ್ದವು. ಆ ಪರಿಸರದಲ್ಲಿ ಒಂದು ಸರಳ ಸುಂದರ ಆರೋಗ್ಯಕರ ಜೀವನ ನಡೆದುಹೋಗುತ್ತಿತ್ತು. ಒಂದೊಂದು ಗ್ರಾಮವನ್ನೇ ವ್ಯಾಪಿಸಿಕೊಳ್ಳುವಂತಿದ್ದ ಆಲ, ಅರಳಿ, ಗೋಣಿ.. ಬೃಹತ್ ಮರಗಳು ಆಮ್ಲಜನಕದ ಬ್ಯಾಂಕುಗಳಂತಿದ್ದವು. ಟನ್‌ಗಟ್ಟಲೇ ಇಂಗಾಲದ ಡೈ ಆಕ್ಸೈಡ್ ನುಂಗಿ ನಮಗಾಗಿ ಪ್ರಾಣವಾಯುವನ್ನು ನೀಡುತಿದ್ದ ಬೃಹತ್ ಅಶ್ವತ್ಥ ಮರಗಳಿದ್ದವು!

ಮನೆಗೊಂದರಂತೆ ನುಗ್ಗೆ ಮರಗಳಿರುತ್ತಿದ್ದವು. ನಮ್ಮಲ್ಲಿಯೇ ಸುಮಾರು 250 ಜಾತಿಯ ನುಗ್ಗೇ ಮರಗಳಿದ್ದವು. ಅವೆಲ್ಲ ಈಗೆಲ್ಲಿ ಹೋದವು? ನಿಮಗೆ ಗೊತ್ತೆ? ಮಕ್ಕಳ ಅಪೌಷ್ಟಿಕತೆ ನಿವಾರಿಸಲು ಇದಕ್ಕಿಂತ ಬೇರೆ ಮದ್ದಿಲ್ಲ. ಪೌಷ್ಟಿಕಾಂಶದ ಆಗರವಾಗಿರುವ ನುಗ್ಗೆಯನ್ನು ಸಂರಕ್ಷಿಸಿ ಬೆಳೆಸಿದರೆ ಅಪೌಷ್ಟಿಕತೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೂ ನಾವು ಅದನ್ನು ನಿರ್ಲಕ್ಷಿಸಿದ್ದೇವೆ.

ಇನ್ನು ಭೂಮಿಯ ಆಳಕ್ಕೆ ವ್ಯಾಪಿಸಿಕೊಳ್ಳುವ ಮಾಕಳಿ ಬೇರು, ಸೊಗದೆ ಬೇರು ಮರಗಳಿಗೂ ಬರವಿರಲಿಲ್ಲ.. ಭೂಮಿತಾಯ ಒಡಲೊಳಕ್ಕೆ ಇಳಿದು ಜೀವಜಲ ಸಂರಕ್ಷಿಸುವಲ್ಲಿ ಈ ಬೇರುಗಳು ನಿರ್ವಹಿಸಿರುವ ಪ್ರಮುಖ ಪಾತ್ರವನ್ನು ಯೋಚಿಸಿ ಅರ್ಥಮಾಡಿಕೊಳ್ಳುವಷ್ಟು ವ್ಯವಧಾನ ನಮಗಿದೆಯೇ? ಮರದ ಬುಡಕ್ಕೆ ಕೊಡಲಿ ಬೀಸುವಾಗ ನಮಗೆ ಇದೆಲ್ಲ ನೆನಪಾಗುವುದೇ ಇಲ್ಲ. ಅಭಿವೃದ್ಧಿಯ ಮಂತ್ರ ನಮ್ಮನ್ನು ಕಟ್ಟಿ ಹಾಕಿ ಬಿಟ್ಟಿರುತ್ತದೆ. ನಾವು ನಿರ್ದಾಕ್ಷಿಣ್ಯವಾಗಿ ನಿಸರ್ಗದ ನರಗಳಂತಿರುವ ಈ ಬೇರುಗಳನ್ನೇ ಕತ್ತರಿಸುತ್ತಿದ್ದೇವೆ. ಜೈವಿಕ ಸರಪಳಿಗೆ ಧಕ್ಕೆ ತಂದಿದ್ದೇವೆ. ಇಷ್ಟೆಲ್ಲ ಅನಾಹುತಗಳನ್ನು ಮಾಡಿ ಜಾಗತಿಕ ತಾಪಮಾನ ಏರಿಕೆಯಾಗಿದೆಯೆಂದು ಬೊಬ್ಬೆ ಹೊಡೆದರೆ ನಮ್ಮನ್ನು ರಕ್ಷಿಸುವವರು ಯಾರು? ಆದ್ದರಿಂದಲೇ ಈ ಕುರಿತು ಪ್ರತಿಯೊಬ್ಬರೂ ತಮ್ಮನ್ನು ತಾವೇ ಸ್ವಯಂ ಮೌಲ್ಯಮಾಪನಕ್ಕೆ ಒಳಪಡಿಸಿಕೊಂಡು ಪರಿಸರವನ್ನು ಸಂರಕ್ಷಿಸುವತ್ತ ದೃಢ ಹೆಜ್ಜೆಗಳನ್ನು ಇಡಬೇಕಿದೆ.

# ಬರ ಎಂಬ ಶಾಪಕ್ಕೆ ಮರಗಳು ಇಲ್ಲಿ ನೀಡಿವೆ ಮುಕ್ತಿ !

▪ ಡಾ|| ಎಸ್.ವಿ. ಹಿತ್ತಲಮನಿ

**ಒಣ ಬೇಸಾಯದಲ್ಲಿ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ಬೆಳೆಸಿದಾಗ, ಬಹು ಉತ್ತೇಜನ ಕರವಾದ ಆದಾಯ ಕಟ್ಟಿಟ್ಟ ಬುತ್ತಿ ! ಇದರಲ್ಲಿ ಯಾವುದೇ ಅನುಮಾನ/ಸಂಶಯ ಬೇಡ! ಕೋಲಾರ ಜಿಲ್ಲೆಯಲ್ಲಿನ ವಾರ್ಷಿಕ ಮಾವು ಬೆಳೆಯ ಫಸಲಿನ ಮೌಲ್ಯ ಸುಮಾರು ರೂ.800 ಕೋಟಿ ಎಂದರೆ ನೀವು ನಂಬುತ್ತೀರಾ? ಇದನ್ನು ನಾವು ನಂಬಲೇ ಬೇಕು. ಇದೇ ರೀತಿ ಇದೇ ಜಿಲ್ಲೆಯಲ್ಲಿ ಹುಣಸೆಯಿಂದ ಲಭಿಸುವ ಒಟ್ಟಾರೆ ವರಮಾನ ರೂ.270 ಕೋಟಿಗೂ ಹೆಚ್ಚು ಎಂಬ ವಿಷಯ ನಿಮಗೆ ಗೊತ್ತೇ? ಇದೇ ರೀತಿ ಪಕ್ಕದ ಇನ್ನೊಂದು ಬರ ಪೀಡಿತ ಜಿಲ್ಲೆಯಾದ ಚಿಕ್ಕಬಳ್ಳಾಪುರವೂ ಹಿಂದೆ ಬಿದ್ದಿಲ್ಲ. ಇಲ್ಲಿ ವಾರ್ಷಿಕ ಉತ್ಪಾದನೆಯಾಗುತ್ತಿರುವ ಮಾವು, ಹುಣಸೆ ಹಾಗೂ ಗೋಡಂಬಿಗಳ ಮೌಲ್ಯವು ಅನುಕ್ರಮವಾಗಿ ರೂ.120 ಕೋಟಿ,ರೂ.520 ಕೋಟಿ ಹಾಗೂ ರೂ.40 ಕೋಟಿಗಳಷ್ಟು !**



**ನೆಮ್ಮದಿಯ ಕಸಿದ ಬರ:** ಕರ್ನಾಟಕ ರಾಜ್ಯದ ಶೇ.60 ರಷ್ಟು ವಿಸ್ತಾರದ ಪ್ರದೇಶ ಮಳೆ ಆಶ್ರಿತ ಕೃಷಿಗೆ ಒಳಪಟ್ಟ ಪ್ರದೇಶ. ಅದರಲ್ಲೂ ಮುಖ್ಯವಾಗಿ ದಕ್ಷಿಣ–ಪೂರ್ವ, ಮಧ್ಯ, ಮಧ್ಯ–ಪೂರ್ವ ಹಾಗೂ ಉತ್ತರ–ಪೂರ್ವ ಕರ್ನಾಟಕದ ವ್ಯಾಪ್ತಿಗೆ ಒಳಪಟ್ಟ ಸುಮಾರು 10 ಜಿಲ್ಲೆಗಳು ಹಾಗೂ ಈ ಭಾಗಕ್ಕೆ ಹೊಂದಿಕೊಂಡಂತ ಇನ್ನೂ 6–7 ಜಿಲ್ಲೆಗಳ ಭಾಗಶಃ ಪ್ರದೇಶಗಳು ಮಳೆ ನೆರಳಿನ ಪ್ರದೇಶಗಳಾಗಿದ್ದು, ಇಲ್ಲಿ ಬೀಳುವ ಮಳೆಯೂ ಸರಿಯಾಗಿ ಬೀಳದೇ ಈ ಭಾಗಗಳಿಗೆ ಬರದ ಶಾಪವನ್ನೇ ನೀಡಿವೆ ಎಂದರೆ ತಪ್ಪಾಗಲಾರದು. ಮುಖ್ಯವಾಗಿ ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಕೊಪ್ಪಳ, ಬಳ್ಳಾರಿ, ರಾಯಚೂರು, ಕಲಬುರಗಿ, ಬೀದರ್ ಜಿಲ್ಲೆಗಳಲ್ಲಿ ಹಾಗೂ ಇವುಗಳಿಗೆ ಹೊಂದಿಕೊಂಡಂತಹ ಇನ್ನೂ ಹಲವು ಜಿಲ್ಲೆಗಳು ಈ ರೀತಿ ಮಳೆಯ ಅನಿಶ್ಚಿತತೆಗೆ ಸಿಲುಕಿ, ನಲುಗಿಹೋಗಿದ್ದು, ಈ ಭಾಗದ ಮಳೆ ಆಶ್ರಿತ ಪ್ರದೇಶಗಳಲ್ಲಿ ಕೃಷಿ ಬೆಳೆಗಳು ರೈತರ ನೆರವಿಗೆ ಬರುತ್ತಿಲ್ಲ. ಇಲ್ಲಿ ಸಾಮಾನ್ಯವಾಗಿ ಬೆಳೆಸಲ್ಪಡುವ ರಾಗಿ, ಸೇಂಗಾ, ಜೋಳ, ತೊಗರಿ, ಇತರ ದ್ವಿದಳ ಹಾಗೂ ಎಣ್ಣೆಕಾಳು ಬೆಳೆಗಳನ್ನು ನಂಬಿಕೊಂಡ ರೈತನ ಆತ್ಮವಿಶ್ವಾಸವನ್ನೇ ಅಲುಗಾಡಿಸುತ್ತಿವೆ. ಸದಾ ಇಲ್ಲಿ ಕಾಡುತ್ತಿರುವ ಮಳೆ ಕೊರತೆ ಹಾಗೂ ಅದರಿಂದುಂಟಾಗುವ ಬೆಳೆ ವಿಫಲತೆಗಳು. ಈ ಕಾರಣದಿಂದಾಗಿಯೇ ಈ ಭಾಗಗಳಿಂದಲೇ ಅಸಂಖ್ಯ ಕೃಷಿ ಕುಟುಂಬಗಳು ಬೇಸಾಯವನ್ನು ಕೈಬಿಟ್ಟು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿವೆ.

**ಭವಿಷ್ಯವನ್ನೇ ಮಸುಕಾಗಿಸಿದ ಅಂತರ್ಜಲ ಇಳಿಕೆ:** ಅನೇಕ ವರ್ಷಗಳಿಂದ ಈ ಮಳೆನೆರಳಿನ ಪ್ರದೇಶಗಳಲ್ಲಿ ಸಮರ್ಪಕವಾಗಿ ಮಳೆ ಬೀಳದ ಕಾರಣ, ಹಾಗೂ ಬೀಳುವ ಅಲ್ಪ ಮಳೆಯನ್ನು ವೈಜ್ಞಾನಿಕವಾಗಿ ಕೊಯ್ಲು ಮಾಡುವಲ್ಲಿ ಎಡವಿರುವ ಹಿನ್ನಲೆಯಲ್ಲಿ ಅಂತರ್ಜಲದ ಮಟ್ಟ ದಿನೇ ದಿನೇ ಕುಸಿದು ಹೋಗುತ್ತಿರುವುದು ಕಳವಳಕಾರಿಯಾದ ಸಂಗತಿಯಾಗಿದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಗಳು ಬೆಂಗಳೂರಿಗೆ ಸನಿಹದ ಜಿಲ್ಲೆಗಳಾಗಿದ್ದು, ಪರಂಪರಾಗತವಾಗಿ ಈ ಪ್ರದೇಶಗಳು ಬೆಂಗಳೂರಿಗೆ ತರಕಾರಿ–ಹಣ್ಣು–ಹೂಗಳನ್ನು ಪೂರೈಸುತ್ತಿವೆ. ಈ ಬೆಳೆಗಳ ಕೃಷಿ ವರ್ಷವಿಡೀ ನಡೆಯುತ್ತಿದ್ದು, ಸಂಪೂರ್ಣ ಅಂತರ್ಜಲ ಆಧಾರಿತ ಕೊಳವೆಬಾವಿಗಳನ್ನು ಅವಲಂಬಿಸಿರುವುದು ಸರ್ವವಿಧಿತ. ಇಲ್ಲಿಯವರೆಗೆ ಇವುಗಳನ್ನು ಬೆಳೆದ ರೈತರು ಸಾಮಾನ್ಯವಾಗಿ ಚೆನ್ನಾಗಿಯೇ ಸಂಪಾದಿಸಿ ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಎತ್ತರಿಸಿಕೊಂಡಿದ್ದು, ಈ ಭಾಗದ ರೈತರಿಗೆ ಒಂದು ದೊಡ್ಡ ಆಸರೆಯಾಗಿದೆ. ಇಂಥಹ ರೈತರಿಗೆ ವರಪ್ರಸಾದವಾದ ಹಣ್ಣು–ತರಕಾರಿ–ಹೂವು ಬೇಸಾಯವು ಇಂದು ಅಂತರ್ಜಲ ಕುಸಿತದ ಪರಿಣಾಮವಾಗಿ ಡೋಲಾಯಮಾನ ಸ್ಥಿತಿಯಲ್ಲಿದೆ. ಅಲ್ಲದೇ, ಹಾಲು ಉತ್ಪಾದಕ ರೈತರು ಹಾಗೂ ರೇಷ್ಮೆ ಉತ್ಪಾದಕರಿಗೂ ಸಹ ಇಂಥಹುದೇ ಅಭದ್ರತೆ ಕಾಡಲು ಪ್ರಾರಂಭಿಸಿದೆ. ಇದರ ಒಟ್ಟಾರೆ ಪರಿಣಾಮ ಉತ್ಪಾದಕತೆಯ ಮೇಲೆ ಆಗಿದ್ದು, ಹಣ್ಣು–ತರಕಾರಿಗಳ ಉತ್ಪಾದನೆ ಕಡಿಮೆಯಾಗಿ ಮಾರುಕಟ್ಟೆಯಲ್ಲಿ ಇವುಗಳ ಬೆಲೆ ಗಗನಕ್ಕೇರಿ, ಇದರ ಬಿಸಿ ಗ್ರಾಹಕರಿಗೂ ತಟ್ಟಿದೆ. ಹೆಚ್ಚಿದ ಬೆಲೆಗಳಿಂದಾಗಿ ಅನೇಕ ಬಡ–ಮಧ್ಯಮ ವರ್ಗದ ಬಳಕೆದಾರರು ಹಣ್ಣು–ತರಕಾರಿಗಳನ್ನು ಅಗತ್ಯ ಪ್ರಮಾಣದಲ್ಲಿ ಕೊಳ್ಳದಂತಾಗಿದ್ದಾರೆ. ಹಣ್ಣು–ತರಕಾರಿಗಳ ಸೇವನೆ ನಮ್ಮ ದೇಹ ರಕ್ಷಣೆಗೆ ಅತ್ಯಗತ್ಯವಾಗಿದ್ದು, ಇವುಗಳ ಸೇವನೆ ಕಡಿಮೆ ಆದರೆ ಜನರ ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುವುದಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಈ ದಿಸೆಯಲ್ಲೂ ನಾವು ಯೋಚಿಸಬೇಕಾಗುತ್ತದೆ.

**ಬಹುವಾರ್ಷಿಕ ಮರಜಾತಿ ತೋಟಗಾರಿಕೆ ಬೆಳೆಗಳ ಚಮತ್ಕಾರ:** ಬಹು ಕಡಿಮೆ ಮಳೆ ಬೀಳುವ ಸನ್ನಿವೇಶಗಳಲ್ಲೂ ಚೆನ್ನಾಗಿ ಬೆಳೆದು ಲಾಭದಾಯಕ ಇಳುವರಿ ನೀಡಬಲ್ಲಂಥಹ ಹಲವಾರು ಬಹುವಾರ್ಷಿಕ ತೋಟಗಾರಿಕೆ ಬೆಳೆಗಳು ರೈತರಿಗೆ ಆಸರೆಯಾಗುತ್ತಿವೆ. ಇದೇ ಅಂಶವನ್ನು ಆಧಾರವಾಗಿಟ್ಟುಕೊಂಡು 1950–60ರ ದಶಕಗಳಲ್ಲಿ ಹಿಂದೆ ರಾಜ್ಯದ ತೋಟಗಾರಿಕೆ ನಿರ್ದೇಶಕರಾಗಿದ್ದ, ತೋಟಗಾರಿಕೆ ಪಿತಾಮಹ, ಡಾ|| ಎಂ.ಹೆಚ್. ಮರಿಗೌಡರು ರಾಜ್ಯದ ಒಣ ಪ್ರದೇಶಗಳಲ್ಲಿ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ರೈತರು ಬೆಳೆಯುವಂತೆ ಪ್ರೋತ್ಸಾಹಿಸಿದರು. ಮಾವು, ಗೋಡಂಬಿ, ಹುಣಸೆ, ಮುಂತಾದವುಗಳನ್ನು ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಾಮರಾಜನಗರ, ಚಿತ್ರದುರ್ಗ, ಕೊಪ್ಪಳ, ಬಳ್ಳಾರಿ, ರಾಯಚೂರು, ಕಲಬುರಗಿ, ಬೀದರ್ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಈ ಬೆಳೆಗಳನ್ನು ತೋಟಗಾರಿಕೆ ಇಲಾಖೆಯ ಕ್ಷೇತ್ರಗಳಲ್ಲಿ ಪ್ರಾತ್ಯಕ್ಷಿಕೆಗಳ ರೀತಿಯಲ್ಲಿ ನೆಟ್ಟು, ರೈತರಿಗೆ ಮನವರಿಕೆ ಮಾಡಿಕೊಟ್ಟು, ನಂತರ ಅವರೂ ಸಹ ಈ ಬೆಳೆಗಳನ್ನು ತಮ್ಮ ತೋಟಗಳಲ್ಲಿ ಬೆಳೆಸಲು ಪ್ರೇರೇಪಿಸಿದ್ದು ಈಗ ಇತಿಹಾಸವಾಗಿದೆ. ಇದರ ಪರಿಣಾಮವಾಗಿಯೇ ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿನ ವ್ಯಾಪಕ ಮಳೆನೆರಳಿನ ಪ್ರದೇಶದಲ್ಲಿಂದು ಲಕ್ಷಾಂತರ ಎಕರೆಗಳಲ್ಲಿ ಮಾವು, ಗೋಡಂಬಿ ಹಾಗೂ ಹುಣಸೆ ಬೆಳೆಗಳು ರಾರಾಜಿಸುತ್ತಿದ್ದು, ಅವುಗಳನ್ನು ಬೆಳೆದ ರೈತರ ಬಾಳಿಗೆ ಸುಸ್ಥಿರತೆ ಒದಗಿಸಿವೆ. ಚಿಂತೆ ಸೋಕಿದ ಮೊಗಗಳಲ್ಲಿ ಮುಗುಳ್ನಗೆ ಮೂಡಿದೆ, ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಕರಾಗಿ ಮುಂದುವರೆಯಲು ಭರವಸೆ ನೀಡಿವೆ.

**ಕಡಿಮೆ ಖರ್ಚು, ಅಧಿಕ ಆದಾಯ:** ಮಾವು, ಗೋಡಂಬಿ, ಹುಣಸೆ, ಹಲಸು, ನೇರಳೆ, ಇತ್ಯಾದಿ ಬಹುವಾರ್ಷಿಕ ಹಣ್ಣಿನ ಬೆಳೆಗಳು ಬರಪ್ರದೇಶಕ್ಕೆ ವರಪ್ರದವಾಗಿದ್ದು, ಇವುಗಳ ಬೇಸಾಯ ಸುಲಭ. ಪ್ರಾರಂಭದ 2–3 ವರ್ಷಗಳ ವರೆಗೆ ಸ್ವಲ್ಪ ಗಮನಹರಿಸಿದರೆ ಸಾಕು, ನಂತರದ ವರ್ಷಗಳಲ್ಲಿ ತಂತಾನೇ ಬೆಳೆದು ಉತ್ತಮ ಇಳುವರಿ ಕೊಡಲು ತಮ್ಮನ್ನು ತಾವೇ ಸಮರ್ಥವಾಗಿಸಿಕೊಳ್ಳುತ್ತವೆ. ಪ್ರಾರಂಭದಲ್ಲಿ ನಾವು ಅವುಗಳನ್ನು ನೋಡಿಕೊಂಡರೆ ನಂತರ ಅವು ನಮ್ಮನ್ನು ನೋಡಿಕೊಳ್ಳುತ್ತವೆ, ನಮ್ಮ ಕೈಬಿಡುವುದಿಲ್ಲ. ಮಳೆ ಎಷ್ಟೇ ಕಡಿಮೆಯಾಗಲಿ, ಅಥವಾ ಸತತ ಬರ ಪರಿಸ್ಥಿತಿ ಉಂಟಾಗಲಿ ಈ ಬೆಳೆಗಳು ಏಕ ಪ್ರಕಾರವಾಗಿ ಇಳುವರಿ/ಆದಾಯ ನೀಡುತ್ತವೆ. ಕೇವಲ ಒಂದೆರಡು ಹಲಸಿನ ಮರಗಳು ಅಥವಾ ಹುಣಸೆ ಮರುಗಳು 30–40 ಸಾವಿರ ವಾರ್ಷಿಕ ಆದಾಯ ನೀಡಿದ ಅನೇಕ ಉದಾಹರಣೆಗಳನ್ನು ನಾವು ಈ ಭಾಗದಲ್ಲಿ ಕಾಣಬಹುದಾಗಿದೆ. ನೇರಳೆಯೂ ಇತ್ತೀಚಿನ ದಿನಗಳಲ್ಲಿ ಬರಪೀಡಿತ ಪ್ರದೇಶಗಳ ರೈತರ ಮನವನ್ನು ಗೆಲ್ಲುತ್ತಿದೆ, ಇದರ ಬೇಸಾಯವು ಸಹ ಏರುಮುಖವಾಗುತ್ತಿದೆ. ಈ ಎರಡು ಬೆಳೆಗಳಲ್ಲಿ ಸಹ ಈಗೀಗ ಉತ್ತಮ ಜಾತಿಯ ತಳಿಗಳು ಲಭ್ಯವಿದ್ದು, ಇವುಗಳನ್ನು ಬೆಳೆಸಲು ಬರಪೀಡಿತ/ಒಣ ಪ್ರದೇಶಗಳ ರೈತರು ಹೆಚ್ಚಿನ ಒಲವು ತೋರಿಸುತ್ತಿದ್ದಾರೆ. ಹಲಸು, ನೇರಳೆಯ ಸುಧಾರಿತ ತಳಿಗಳ ಕಸಿ ಗಿಡಗಳು ಈಗ ಎಲ್ಲೆಡೆಗೂ ಸಿಗುತ್ತಿದೆ. ಇದರಿಂದಾಗಿ ಇವುಗಳನ್ನು ಬೆಳೆಸಲು ಉತ್ಸುಕರಾಗಿರುವ ರೈತರಿಗೆ ಬಹಳ ಅನುಕೂಲವಾಗಿದ್ದು, ಇದರ ಸದುಪಯೋಗವನ್ನು ಅನೇಕ ಜನ ರೈತರು ಮಾಡಿಕೊಳ್ಳುತ್ತಿರುವುದು ಸಂತೋಷದ ವಿಷಯವಾಗಿದೆ.

**ಮರಗಳಲ್ಲಡಗಿದೆ ಅದೆಂಥಹ ಅಗಾಧ ಆರ್ಥಿಕ ಶಕ್ತಿ :** ಒಣ ಬೇಸಾಯದಲ್ಲಿ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ಬೆಳೆಸಿದಾಗ, ಬಹು ಉತ್ತೇಜನ ಕರವಾದ ಆದಾಯ ಕಟ್ಟಿಟ್ಟ ಬುತ್ತಿ ! ಇದರಲ್ಲಿ ಯಾವುದೇ ಅನುಮಾನ/ಸಂಶಯ ಬೇಡ! ಕೋಲಾರ ಜಿಲ್ಲೆಯಲ್ಲಿನ ವಾರ್ಷಿಕ ಮಾವು ಬೆಳೆಯ ಫಸಲಿನ ಮೌಲ್ಯ ಸುಮಾರು ರೂ.800 ಕೋಟಿ ಎಂದರೆ ನೀವು ನಂಬುತ್ತೀರಾ? ಇದನ್ನು ನಾವು ನಂಬಲೇ ಬೇಕು. ಇದೇ ರೀತಿ ಇದೇ ಜಿಲ್ಲೆಯಲ್ಲಿ ಹುಣಸೆಯಿಂದ ಲಭಿಸುವ ಒಟ್ಟಾರೆ ವರಮಾನ ರೂ.270 ಕೋಟಿಗೂ ಹೆಚ್ಚು ಎಂಬ ವಿಷಯ

**ಇತ್ತೀಚಿನ ದಿನಗಳಲ್ಲಿ ಹೊರತಂದಿರುವ ಹಲವು ಆಶಾದಾಯಕ ತಳಿಗಳು:**

ಬರಪೀಡಿತ ಪ್ರದೇಶಗಳಲ್ಲಿ ಮಳೆಯಾಶ್ರಯದಲ್ಲಿಯೇ ಚೆನ್ನಾಗಿ ಬೆಳೆದು ಅಧಿಕ ಇಳುವರಿ ಹಾಗೂ ಅತಿ ಹೆಚ್ಚಿನ ಆದಾಯ ತಂದುಕೊಡುವ ಹಾಗೂ ಉತ್ಕೃಷ್ಟ ಗುಣಮಟ್ಟದ ಫಸಲನ್ನು ನೀಡಬಲ್ಲಂಥಹ ಅನುಪಮ ತಳಿಗಳನ್ನು ಇತ್ತೀಚಿನ ದಿನಗಳಲ್ಲಿ ಬೇಸಾಯಕ್ಕೆ ಬಿಡುಗಡೆ ಮಾಡಲಾಗಿದೆ. ಇವುಗಳಲ್ಲಿ ಈ ಕೆಳಗಿನವುಗಳು ಗಮನಾರ್ಹವಾದವುಗಳು.

| | | |
|---|---|---|
| ಹಲಸು | : | ಬೈರಚಂದ್ರ, ಲಾಲ್‌ಬಾಗ್ ಮಧುರ, ಸ್ವರ್ಣ, ಜಾಣಗೆರೆ, ತೂಬುಗೆರೆ, ಮಂಕಾಳಿರೆಡ್, ಮಣೇರಿಕರ್–3, ಸದಾನಂದ, ಕೆಂಪು ರುದ್ರಾಕ್ಷಿ, ಇತ್ಯಾದಿ. |
| ನೇರಳೆ | : | ಧೂಪದಾಳ್, ಬಹಾಡೋಲಿ, ಸೀಡ್‌ಲೆಸ್ ಹಾಗೂ ಇತರ ಅನೇಕ ಸೆಲೆಕ್ಷನ್‌ಗಳು. |
| ಹುಣಸೆ | : | ಪಿ.ಕೆ.ಎಂ.–1, ಉರಿಗಂ,DTS–1, 2, ಕೆಂಪು ಹುಣಸೆ, ಸಿಹಿ ಹುಣಸೆ. |
| ಗೋಡಂಬಿ | : | ವಿ–4, ವಿ–7, ಚಿಂತಾಮಣಿ–1, ಉಲ್ಲಾಳ ತಳಿಗಳು, ಭಾಸ್ಕರ್, ಇತ್ಯಾದಿ. |

ಇವಲ್ಲದೇ, ಇನ್ನನೇಕ ತಳಿಗಳನ್ನು ಅಲ್ಲಲ್ಲೇ ರೈತರೇ ಗುರುತಿಸಿಕೊಂಡು ಅವುಗಳನ್ನು ಬೆಳೆಸುತ್ತಿದ್ದಾರೆ. ಈ ಎಲ್ಲಾ ತಳಿಗಳು ಶ್ರೇಷ್ಠ ಗುಣಧರ್ಮಗಳನ್ನು ಹೊಂದಿದ್ದು, ಇವುಗಳನ್ನು ಬೆಳೆಸಲು ರೈತರು ಹೆಚ್ಚಿನ ಆಸಕ್ತಿ ತೋರಿಸುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆ ಎನ್ನಬಹುದು.

ನಿಮಗೆ ಗೊತ್ತೇ? ಇದೇ ರೀತಿ ಪಕ್ಕದ ಇನ್ನೊಂದು ಬಹ ಪೀಡಿತ ಜಿಲ್ಲೆಯಾದ ಚಿಕ್ಕಬಳ್ಳಾಪುರವೂ ಹಿಂದೆ ಬಿದ್ದಿಲ್ಲ. ಇಲ್ಲಿ ವಾರ್ಷಿಕ ಉತ್ಪಾದನೆಯಾಗುತ್ತಿರುವ ಮಾವು, ಹುಣಸೆ ಹಾಗೂ ಗೋಡಂಬಿಗಳ ಮೌಲ್ಯವು ಅನುಕ್ರಮವಾಗಿ ರೂ.120 ಕೋಟಿ, ರೂ. 520 ಕೋಟಿ ಹಾಗೂ ರೂ.40 ಕೋಟಿಗಳಷ್ಟು ಎಂದರೆ ಈ ಬೆಳೆಗಳ ಆರ್ಥಿಕತೆ ಎಂಥಹುದು ಎಂಬುದರ ಬಗೆಗೆ ಸ್ಪಷ್ಟ ಕಲ್ಪನೆ ಸಿಗುತ್ತದೆ. ಈ ಎರಡು ಜಿಲ್ಲೆಗಳಲ್ಲಿಯೇ ಈ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಿಂದ ಒಟ್ಟು ರೂ.1800 ಕೋಟಿಗಳ ಆದಾಯವು ಲಭಿಸುತ್ತಿದೆ ಎಂಬುದು ಅಚ್ಚರಿ ಹುಟ್ಟಿಸುತ್ತದೆ. ಇದರಿಂದ ಈ ಬೆಳೆಗಳು ಹೇಗೆ ಬರಪೀಡಿತ ಪ್ರದೇಶಗಳ ರೈತರ ಆರ್ಥಿಕ ಚೈತನ್ಯ ವರ್ಧನೆಗೆ ಸಹಾಯ ಮಾಡುತ್ತವೆ ಎಂಬುದರ ಬಗೆಗೆ ಅರಿವುಂಟಾಗುತ್ತದೆ. 1950 ರಿಂದೀಚೆಗೆ ತೋಟಗಾರಿಕೆ ಇಲಾಖೆಯ ಮಾರ್ಗದರ್ಶನದಲ್ಲಿ ಇಂಥಹುದೊಂದು ಕ್ರಾಂತಿ ಬರಪೀಡಿತ ಪ್ರದೇಶಗಳಲ್ಲಿ ನಡೆದಿದೆ ಎಂಬುದು ಹೆಮ್ಮೆಯ ವಿಚಾರ. ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ, ವ್ಯಾಪಕ ಪ್ರದೇಶದಲ್ಲಿ ವಿಸ್ತರಿಸಿದ್ದೇ ಆದರೆ ಬರದ ಹಾವಳಿಯನ್ನು ತಡೆಗಟ್ಟುವಲ್ಲಿ ನಾವು ಸಫಲರಾಗುತ್ತೇವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

**ಹಲವು ಯಶೋಗಾಥೆಗಳು:** ಒಣ ಬೇಸಾಯದಲ್ಲಿ ಆಕರ್ಷಕ ಆದಾಯವಿಲ್ಲವೆಂಬುದು ಬಹುಜನರ ತಪ್ಪುನಂಬಿಕೆ. ಇದನ್ನು ಸುಳ್ಳು ಮಾಡಲು ನಾಡಿನಾದ್ಯಂತ ಅನೇಕ ದೃಷ್ಟಾಂತಗಳನ್ನು ಕಾಣಬಹುದಾಗಿದೆ. ಬರಪೀಡಿತ ಪ್ರದೇಶಗಳಲ್ಲೂ ಕೇವಲ ಅರ್ಧ ಅಥವಾ ಒಂದೆರಡು ಎಕರೆ ಚಿಕ್ಕ ಪ್ರದೇಶಗಳಲ್ಲಿ ಇಂಥಹ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ಬೆಳೆದು ಸಿರಿತನವನ್ನು ಕಂಡುಕೊಂಡಂಥಹ ರೈತರನ್ನು ನೋಡದರೆ ಎಂಥವರಿಗೂ ಕಣ್ತುಂಬಿ ಬರುತ್ತದೆ, ನಾವೂ ಸಹ ಬರ ನಿರೋಧಿಸಿ ಬದುಕಬಲ್ಲೆವು ಎಂಬ ಆತ್ಮವಿಶ್ವಾಸ ಮೂಡುತ್ತದೆ. ಕತ್ತಲೆಯಲ್ಲೊಂದು ಆಶಾಕಿರಣ ಗೋಚರಿಸುತ್ತದೆ. ಇಂಥವರ ಹಲವು ಯಶೋಗಾಥೆಗಳು ಇಲ್ಲಿವೆ;

### ಕ್ವಿಂಟಲ್ ಇಳುವರಿ ನೀಡುವ ಚಿಕ್ಕದಾಸರಹಳ್ಳಿಯ ಗೋಡಂಬಿ ಮರ:

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ತೋಟಗಾರಿಕೆ ಇಲಾಖೆಗೆ ಸೇರಿದ ಚಿಕ್ಕದಾಸರಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ಒಣ ಬೇಸಾಯದ ಪದ್ಧತಿಯಲ್ಲಿ ಗೋಡಂಬಿ ತೋಟವನ್ನು ನಿರ್ಮಿಸಲಾಗಿದೆ. ಸಂಪೂರ್ಣ ಮಳೆಯಾಶ್ರಿತವಾಗಿರುವ ಈ ತೋಟದಲ್ಲಿ ಹಲವಾರು ಗೋಡಂಬಿ ಮರಗಳು ವಿಶಾಲವಾಗಿ ಹರಡಿಕೊಂಡು ನಳನಳಿಸುತ್ತಿವೆ. ಇಲ್ಲಿರುವ ಒಂದು ಮರ ಪ್ರತಿವರ್ಷ ಒಂದು ಕ್ವಿಂಟಾಲ್‌ನಷ್ಟು ಇಳುವರಿ ನೀಡುತ್ತಿದ್ದು, ಗಿಡದ ಆದಾಯ ಈಗಿನ ಮಾರುಕಟ್ಟೆ ದರದಲ್ಲಿ ಏನಿಲ್ಲವೆಂದರೂ ರೂ.50 - 60 ಸಾವಿರ!. ಅತ್ಯಂತ ಕಡಿಮೆ ಖರ್ಚು ಹಾಗೂ ಕನಿಷ್ಠ ನಿರ್ವಹಣೆಯಲ್ಲಿಯೂ ಸಹ ಇಷ್ಟು ಆದಾಯ ಬರುತ್ತದೆಂದರೆ ನಮ್ಮ ಬರಪೀಡಿತ ಒಣ ಪ್ರದೇಶಗಳಲ್ಲಿ ಇಂಥಹ ಬೆಳೆಗಳನ್ನು ಬೆಳೆದು ಪವಾಡವನ್ನೇ ಸೃಷ್ಟಿಸಬಹುದಲ್ಲವೇ!

### ಒಂದು ಹಲಸಿನ ಮರದಿಂದ ೬೦ ಸಾವಿರ ಆದಾಯ ಪಡೆಯುತ್ತಿರುವ ಜಾಣಗೆರೆಯ ಭೀಮಣ್ಣನವರು!

ಜಾಣಗೆರೆ ಎಂಬ ಗ್ರಾಮ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿದೆ. ನೆಲಮಂಗಲದಿಂದ ಕುಣಿಗಲ್‌ಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯ ಸನಿಹದಲ್ಲಿದೆ. (ಕುಣಿಗಲ್‌ನಿಂದ ಸುಮಾರು 13 ಕಿ.ಮೀ.). ಇಲ್ಲಿರುವ ಭೀಮಣ್ಣನವರ ಒಂದು ಹಲಸಿನ ಮರ ಸುಮಾರು 200 ವರ್ಷಗಳಷ್ಟು ಹಳೆಯದಾಗಿದ್ದು, ವರ್ಷಪ್ರತಿ ಸುಮಾರು 300–500 ಹಲಸಿನ ಹಣ್ಣುಗಳು ಲಭಿಸುತ್ತಿವೆ. ಇವರ ವಾರ್ಷಿಕ ಆದಾಯ ಈ ಒಂದು ಮರದಿಂದ ಸುಮಾರು ರೂ.60,000/– ಗಳಷ್ಟು ಹಿಂದೆ ಮೈಸೂರು ಮಹಾರಾಜರ ಅರಮನೆಗೂ ಈ ಮರದ ಹಣ್ಣುಗಳು ಹೋಗುತ್ತಿದ್ದವೆಂದು ಗ್ರಾಮದ ಹಿರಿಯರು ಈಗಲೂ ನೆನಪಿಸಿಕೊಳ್ಳುತ್ತಾರೆ. ಒಂದು ಗಿಡ ಎಷ್ಟು ಅಗಾಧವಾದ ಇಳುವರಿ ಹಾಗೂ ಆದಾಯ ನೀಡಬಲ್ಲದೆಂಬುದಕ್ಕೆ ಈ ಹಲಸಿನ ಮರ ಜ್ವಲಂತ ನಿದರ್ಶನ.

### ಬನ್ನಿ ಬರವನ್ನು ಮಟ್ಟ ಹಾಕೋಣ!

ಬರ ನಮ್ಮ ನಾಡಿನ ವಿಸ್ತಾರವಾದ ಪ್ರದೇಶಕ್ಕೆ ತಗುಲಿದ ಶಾಶ್ವತ ಶಾಪ. ಸಾವಿರಾರು ವರ್ಷಗಳಿಂದ ಈ ಬರಪೀಡಿತ ಪ್ರದೇಶಗಳಲ್ಲಿನ ರೈತರು ನಿಸರ್ಗದೊಡನೆ ನಿರಂತರ ಹೋರಾಟದಲ್ಲಿ ಸಿಲುಕಿ ನಲುಗಿ ಹೋಗಿದ್ದಾರೆ. ಬರವು ನರಕಸದೃಶ ಸ್ಥಿತಿಯನ್ನು ಸೃಷ್ಟಿಸಿರಬಹುದು, ಆದರೆ ನಾವು ಆಧುನಿಕ ಚಿಂತನೆಯೊಂದಿಗೆ ಈ ಶಾಪವನ್ನು ನಿವಾರಿಸಿ, ಈ ಭಾಗದ ರೈತರಿಗೆ ಹೊಸ ಬಾಳನ್ನು ನೀಡಲು ಸಾಧ್ಯವಿದೆ. ಈ ದಿಸೆಯಲ್ಲಿ, ಬಹುವಾರ್ಷಿಕ ತೋಟಗಾರಿಕೆ ಬೆಳೆಗಳು ರೈತರ ನೆರವಿಗೆ ಬರುತ್ತವೆ. ಬರವನ್ನು ಮೆಟ್ಟಿ ನಿಲ್ಲಲು ರೈತರಿಗೆ ಆಸರೆಯಾಗುತ್ತಿದೆ. ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತವೆ. ಬರಕ್ಕೆ ಕಂಗೆಡದೇ ಬರವನ್ನೇ ಹಿಮ್ಮೆಟ್ಟಿಸುವ ಸಾಮರ್ಥ್ಯವನ್ನು ನಾವು ನಮ್ಮ ರೈತರಲ್ಲಿ ತುಂಬೋಣ. ಬರವೆಂಬ ಮರೀಚಿಕೆಯನ್ನು ತೊಲಗಿಸೋಣ. ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ಬೆಳೆದು ಬರವನ್ನು ಗೆದ್ದು, ರೈತರು ಗ್ರಾಮೀಣ ಪ್ರದೇಶಗಳಲ್ಲೇ ಉಳಿದು, ನಗರ ಪ್ರದೇಶಗಳಿಗೆ ವಲಸೆ ಹೋಗದಂತೆ ತಡೆಯುವ ಶಕ್ತಿ ಈ ಮರಗಳಲ್ಲುಂಟು. ಈ ಬಗ್ಗೆ ರೈತರಿಗೆ ನಾವು ತಿಳುವಳಿಕೆ ನೀಡೋಣ, ಅವರನ್ನು ಪ್ರೋತ್ಸಾಹಿಸೋಣ, ಅವರ ಮುಂದಿನ ಉಜ್ವಲ ಬದುಕಿಗೆ ನಾಂದಿಹಾಡೋಣ!



ಎನ್.ಸಿ. ಪಟೇಲ್ ಅವರೊಡನೆ ಲೇಖಕರು

### ಒಂದು ಸೆಂದೂರ ಮಾವಿನ ಮರದಿಂದ ರೂ.10,000/- ಆದಾಯ!

ಚೆನ್ನಪಟ್ಟಣ ತಾಲ್ಲೂಕು ವಿರೂಪಾಕ್ಷಪುರ ಹೋಬಳಿಯ ಯಲಿಯೂರು ಗ್ರಾಮದ ಜಗನ್ನಾಥ್ ಎಂಬ ರೈತರ ತೋಟದಲ್ಲಿರುವ ಸಂಪೂರ್ಣ ಮಳೆ ಆಶ್ರಿತವಾಗಿರುವ ಒಂದು ಸೆಂದೂರ ಮಾವಿನ ಮರದಿಂದ ಆ ರೈತರು ಪ್ರತಿ ವರ್ಷ ಸರಾಸರಿ ರೂ.10,000/– ಗಳ ವರಮಾನ ಪಡೆಯುತ್ತಿದ್ದಾರೆ. ಈ ಭಾಗದ ಸಾಮಾನ್ಯ ಕೃಷಿಕರು ಒಂದು ಎಕರೆಯಿಂದ ಮಳೆಯಾಶ್ರಿತದಲ್ಲಿ ರಾಗಿ ಬೆಳೆದಾಗ ಸಹ ಇಷ್ಟು ಮೊತ್ತದ ಲಾಭಾಂಶ ಕಷ್ಟಸಾಧ್ಯವೆಂಬ ಸತ್ಯದ ಹಿನ್ನಲೆಯಲ್ಲಿ ಮಳೆಯಾಶ್ರಯದಲ್ಲಿ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಯಾವರೀತಿ ರೈತರ ಬಾಳಿನಲ್ಲಿ ಸಂತೋಷ ಸಮೃದ್ಧಿಯನ್ನು ತರಬಲ್ಲವೆಂಬುದಕ್ಕೆ ಇಂಥಹ ಉದಾಹರಣೆಗಳು ಮಾರ್ಗದರ್ಶಿಯಾಗುತ್ತವೆ.

### ಒಣ ಬೇಸಾಯಕ್ಕೆ ಒಲಿದ ಎನ್.ಸಿ. ಪಟೇಲರು:

ಕರ್ನಾಟಕ ರಾಜ್ಯದಲ್ಲಿ ಒಣತೋಟಗಾರಿಕೆ ಮಾಡಿವರಲ್ಲಿ ಎನ್. ಸಿ. ಪಟೇಲರದು ದೊಡ್ಡ ಹೆಸರು! ಬೆಂಗಳೂರು ಉತ್ತರ ತಾಲ್ಲೂಕಿನ ನಾಗದಾಸನಹಳ್ಳಿ ಗ್ರಾಮಾದ ರೈತರಾದ ಇವರು ಮೂಲತಃ ತೋಟಗಾರಿಕೆ ಕೃಷಿಕರು. ಅನೇಕ ತೋಟಗಾರಿಕೆ ಬೆಳೆಗಳನ್ನು ಬೆಳೆದು ಹಣ – ಹೆಸರು ಮಾಡಿ, ನಂತರ ನೀರಿನ ಅಭಾವಕ್ಕೆ ಸಿಲುಕಿ ಒಣ (ಮಳೆ ಆಶ್ರಿತ) ಬೇಸಾಯಕ್ಕೆ ಕೈಯಿಟ್ಟವರು. ಪ್ರಸಕ್ತ ಮಾವು ಬೇಸಾಯವನ್ನು 100 ಎಕರೆಗೂ ಅಧಿಕ ವಿಸ್ತಾರದಲ್ಲಿ ಕೈಗೊಂಡಿದ್ದು, ಕಳೆದ 3 ದಶಕಗಳಲ್ಲಿ ಅಪಾರ ಪರಿಶ್ರಮಪಟ್ಟು ಯಶಸ್ವಿ ಮಾವು ಬೆಳೆಗಾರರೆಂದು ಗುರುತಿಸಲ್ಪಟ್ಟಿದ್ದಾರೆ. ಇವರ ಮಾವಿನ ತೋಟಗಳಲ್ಲಿ ಅನೇಕ ವೈಜ್ಞಾನಿಕ ಅವಿಷ್ಕಾರಗಳು ಇಡೀ ರಾಜ್ಯ–ದೇಶದಲ್ಲಿ ಮೊಟ್ಟ ಮೊದಲಾಗಿ ಅಳವಡಿಕೆಗೊಂಡವು. ಉದಾಹರಣೆಗೆ: ಇನ್‌ಸಿಟು ಗ್ರಾಫ್ಟಿಂಗ್ ಪದ್ಧತಿಯಲ್ಲಿ ತೋಟ ನಿರ್ಮಾಣ, ಅನುಪಯುಕ್ತ ತಳಿಗಳ ಬದಲಾವಣೆ (ಟಾಪ್ ವರ್ಕಿಂಗ್ ವಿಧಾನದ ಮೂಲಕ), ಪ್ರೂನಿಂಗ್ ವಿಧಾನ ಅಳವಡಿಕೆ, ವೈಜ್ಞಾನಿಕವಾಗಿ ಕೃತಕ ಹಣ್ಣು ಮಾಗಿಸುವಿಕೆ, ಡಬ್ಬಗಳಲ್ಲಿ ಪ್ಯಾಕ್ ಮಾಡಿ, ಸ್ವಯಂ ಮಾರಾಟ, ಇತ್ಯಾದಿಗಳಲ್ಲಿ ನಾಡಿಗೇ ಮಾದರಿಯಾಗಿರುತ್ತಾರೆ. ಇತರ ಬರನಿರೋಧಕ ಬಹುವಾರ್ಷಿಕ ಹಣ್ಣು ಬೆಳೆಗಳಾದ ಹಲಸು, ನೇರಳೆಗಳಲ್ಲೂ ಗಣನೀಯ ಯಶಸ್ಸು ಸಾಧಿಸಿದ್ದಾರೆ. ಇವರ ನೇರಳೆ ತೋಟವು ಇನ್‌ಸಿಟು ಪದ್ಧತಿಯಲ್ಲಿ ಕಸಿ ಮಾಡಲ್ಪಟ್ಟ ತೋಟವಾಗಿದ್ದು, ಅತ್ಯುತ್ತಮ ತಳಿಗಳ ನೇರಳೆ ಹಣ್ಣುಗಳು ಕಣ್ಮನ ತಣಿಸುತ್ತವೆ. ಕೇವಲ 4–5 ವರ್ಷ 30 ನೇರಳೆ ಗಿಡಗಳಿಂದ ಒಂದೂವರೆ ಲಕ್ಷ ಪಡೆದಿರುತ್ತಾರೆ. ಪ್ರಸಕ್ತ ವರ್ಷ ಆರು ಲಕ್ಷಕ್ಕೂ ಮಿಕ್ಕಿದ ಆದಾಯದ ನಿರೀಕ್ಷೆಯಲ್ಲಿದ್ದಾರೆ. ಮಾವಿನಿಂದ ವರ್ಷಕ್ಕೆ 50–60 ಲಕ್ಷ ಆದಾಯ ಪಡೆಯುತ್ತಿದ್ದಾರೆ. ಇವರ ಮಗ ಬಾಬು ಸಹ ತಂದೆಯ ಸಾಧನೆಗೆ ಸಾಥ್ ನೀಡುತ್ತಿದ್ದು, ಭವಿಷ್ಯತ್ತಿನಲ್ಲಿ ಇವರೂ ತಂದೆಯ ಸಾಧನೆಗಳನ್ನು ಮೀರಿಸುವ ಗುರಿಉಳ್ಳವರಾಗಿದ್ದಾರೆ ಎಂದು ನನ್ನ ಭಾವನೆ.



ಯಶವಂತಪುರದಲ್ಲಿರುವ ಕರ್ನಾಟಕ ಸಾಬೂನು ಕಾರ್ಖಾನೆ

# ಮೈಸೂರು ಗಂಧದ ಸಾಬೂನು ತಯಾರಿಕೆಗೆ ನೂರು ವರ್ಷ







▪ ನೇಸರ

**ಶ್ರೀಗಂಧದ ಪರಿಮಳವನ್ನು ಜಗತ್ತಿನಾದ್ಯಂತ ಪಸರಿಸಿದ ಮೈಸೂರು ಸಾಬೂನು ಕಾರ್ಖಾನೆಗೆ ಈಗ ನೂರು ವರ್ಷ.**

ಗಂಧದಬೀಡು ಎನ್ನಿಸಿಕೊಂಡ ಕನ್ನಡನಾಡು 19 ಹಾಗೂ 20ನೇ ಶತಮಾನದಲ್ಲಿ ಅಪರಿಮಿತ ಶ್ರೀಗಂಧದ ವೃಕ್ಷಗಳನ್ನು ತನ್ನಲ್ಲಿಟ್ಟುಕೊಂಡಿತ್ತು. ಯುರೋಪ್ ವಿಶೇಷವಾಗಿ ಇಂಗ್ಲೆಂಡಿಗೆ ಗಂಧದ ಮರಗಳನ್ನು ರಫ್ತು ಮಾಡುವಲ್ಲಿಯೂ ಮುಂದಿತ್ತು ನಮ್ಮ ನಾಡು.




**ಉದಾರೀಕರಣದ ನಂತರ ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿಯನ್ನು ಎದುರಿಸಬೇಕಾಗಿ ಬಂದ ಕೆ.ಎಸ್.ಡಿ.ಎಲ್. ನಿರ್ವಹಣೆಯಲ್ಲಿನ ಏರುಪೇರುಗಳಿಂದ ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿಬಿದ್ದರೂ ಮೈಸೂರು ಸ್ಯಾಂಡಲ್ ಸಾಬೂನಿಗೆ ಮಾರುಕಟ್ಟೆ ಯಥಾಸ್ಥಿತಿಯಲ್ಲಿತ್ತು. ವ್ಯಾವಹಾರಿಕ ಏಳುಬೀಳುಗಳ ನಡುವೆ ನವನವೀನ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದ ಕಾರ್ಖಾನೆ ಶ್ರೀಗಂಧದ ಸಾಬೂನುಗಳಲ್ಲಿಯೂ ಅನೇಕ ಮಾರ್ಪಾಡುಗಳನ್ನು ತರುವುದರ ಮೂಲಕ ದೇಶ–ವಿದೇಶಗಳಲ್ಲೂ ಗ್ರಾಹಕರ ಮೆಚ್ಚುಗೆ ಪಡೆಯಲು ಸಾಧ್ಯವಾಯಿತು.**

ಮೊದಲ ಜಾಗತಿಕ ಯುದ್ಧದ ಸಂದರ್ಭದಲ್ಲಿ ಶ್ರೀಗಂಧವನ್ನು ಹೊರದೇಶಗಳಿಗೆ ಕಳಿಸಲು ಸಾಧ್ಯವಾಗಿರಲಿಲ್ಲ. ಅದನ್ನೆಲ್ಲಾ ಇಲ್ಲಿಯೇ ದಾಸ್ತಾನು ಮಾಡುವ ಅನಿವಾರ್ಯವಿತ್ತು. ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಅರಣ್ಯ ಇಲಾಖೆಯ ಗೋದಾಮಿನಲ್ಲಿ ಆಗಿನ ಮೈಸೂರು ಅರಸು ನಾಲ್ವಡಿ ಕೃಷ್ಣರಾಜ ಅರಸರ ಕಣ್ಣಿಗೆ ಶ್ರೀಗಂಧದ ದಾಸ್ತಾನು ಬಿತ್ತು. ಕಲೆ, ಸಂಸ್ಕೃತಿ, ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವಲ್ಲಿ ಮುಂದಿದ್ದ ನಾಲ್ವಡಿಗಳ ದೂರದೃಷ್ಟಿ ಕೆಲಸ ಮಾಡಿತು. ನಾವೇ ಗಂಧದ ಮರದಿಂದ ಎಣ್ಣೆ ತೆಗೆದರೆ ಹೇಗೆಂಬ ಆಲೋಚನೆ ಅವರದು.

ನಾಲ್ವಡಿಗಳ ಕಲ್ಪನೆಗಳನ್ನು ಅನುಷ್ಠಾನಗೊಳಿಸಲು ದಿವಾನರಾಗಿದ್ದ ಎಂ. ವಿಶ್ವೇಶ್ವರಯ್ಯನವರು ಯಾವಾಗಲೂ ತಡಮಾಡುತ್ತಿರಲಿಲ್ಲ. ಶ್ರೀಗಂಧದ ವಿಷಯದಲ್ಲೂ ಹೀಗೆ ಆಯಿತು. ಆಗಷ್ಟೇ ವಿಜ್ಞಾನ – ಸಂಶೋಧನಾ ಕ್ಷೇತ್ರದಲ್ಲಿ ಹೆಸರು ಮಾಡುತ್ತಿದ್ದ ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿಗಳು ಗಂಧದ ಮರ ಹಿಂಡಿ ಸುಗಂಧದ ಎಣ್ಣೆ ತಯಾರಿಸುವ ಪ್ರಯೋಗದಲ್ಲಿ ಯಶಸ್ವಿಯಾದರು. ಬೆಂಗಳೂರಿನಲ್ಲಿದ್ದ ಶ್ರೀಗಂಧದ ಎಣ್ಣೆ ಕಾರ್ಖಾನೆ ಪ್ರವರ್ಧಮಾನಕ್ಕೆ ಬರುತ್ತಿದ್ದಂತೆ ಅದನ್ನು ಮೈಸೂರಿಗೆ ವರ್ಗಾಯಿಸಲಾಯಿತು. ಶ್ರೀಗಂಧದ ಕೊರಡುಗಳಿಂದ ಸುವಾಸನೆಯ ಎಣ್ಣೆ ತಯಾರಿಸುವುದು ಲಾಭದಾಯಕ ಉದ್ಯಮವಾಗಿದ್ದ ಸಮಯದಲ್ಲಿಯೇ ವಿದೇಶಿ ಗಣ್ಯರೊಬ್ಬರು ನಾಲ್ವಡಿಗಳಿಗೆ ಶ್ರೀಗಂಧದ ಎಣ್ಣೆಯಿಂದ ತಯಾರಿಸಿದ ಸೋಪಿನ ಬಿಲ್ಲೆಗಳನ್ನು ಕೊಡುಗೆಯಾಗಿ ಕೊಟ್ಟರು.

ನಮ್ಮ ಶ್ರೀಗಂಧ ಕೊಂಡು ಆಮದು ಮಾಡಿಕೊಂಡು ಅದರಿಂದ ತೆಗೆದ ಎಣ್ಣೆಯನ್ನು ಉಪಯೋಗಿಸಿ ಸಾಬೂನು ತಯಾರಿಸುವ ವಿದೇಶಿಗಳ ಕರಾಮತ್ತು ಕಂಡ ಕೃಷ್ಣರಾಜ ಒಡೆಯರ್ ಮೈಸೂರು ಪ್ರಾಂತ್ಯದಲ್ಲಿಯೇ ಸಾಬೂನು ತಯಾರಿಸುವ ಯೋಚನೆ ಮಾಡಿದರು.



ರಸಾಯನ ಶಾಸ್ತ್ರ ಅಭ್ಯಾಸ ಮಾಡಿದ್ದ ಎಸ್.ಜಿ. ಶಾಸ್ತ್ರೀ ಎಂಬುವವರನ್ನು ಸಾಬೂನು ತಯಾರಿಕೆಯ ವಿಧಾನಗಳನ್ನು ತಿಳಿದುಬರಲು ರಾಜರು ಇಂಗ್ಲೆಂಡಿಗೆ ಕಳುಹಿಸಿದರು. ಸಾಬೂನು ಸಿದ್ಧಮಾಡುವ ಗುಟ್ಟುಗಳನ್ನು ವಿದೇಶಿಯರು ಅಷ್ಟು ಸುಲಭವಾಗಿ ಬಿಟ್ಟುಕೊಡಲಿಲ್ಲ. ಇದನ್ನು ತಿಳಿಯಲು ಶಾಸ್ತ್ರಿಗಳು ಪ್ರಯತ್ನವನ್ನು ನಿಲ್ಲಿಸಲಿಲ್ಲ. ಕಷ್ಟಪಟ್ಟು ತಯಾರಿಕಾ ವಿಧಾನಗಳನ್ನು ಅರಿತುಬಂದ ಶಾಸ್ತ್ರೀಗಳಿಗೆ ಕಬ್ಬನ್‌ಪಾರ್ಕ್ ಅಂಚಿನ ಸ್ಥಳವೊಂದನ್ನು ತಯಾರಿಕಾ ಘಟಕ ಸ್ಥಾಪನೆಗೆ ಕೊಡಲಾಯಿತು.

ಇಂದಿನ ಎಂ.ಎಸ್. ಬಿಲ್ಡಿಂಗ್ ಸ್ಥಳದ ಆಸುಪಾಸಿನಲ್ಲಿದ್ದ ಘಟಕದಲ್ಲಿ ಶಾಸ್ತ್ರೀಗಳು ಗಂಧದ ಎಣ್ಣೆಯಿಂದ ಸಾಬೂನು ತಯಾರಿಸುವ ಕೆಲಸಕ್ಕೆ ಕೈಹಾಕಿದರು. ಅದರಲ್ಲಿ ಯಶಸ್ಸು ಸಾಧಿಸಲು ಅವರಿಗೆ ಹೆಚ್ಚಿನ ಸಮಯವೇನೂ ಬೇಕಾಗಲಿಲ್ಲ. ನೂರು ವರ್ಷಗಳಿಂದಲೂ ಸುವಾಸನೆಯನ್ನು ಹರಡುತ್ತ ಇಂದಿಗೂ ಬೇಡಿಕೆ ಉಳಿಸಿಕೊಂಡಿರುವ 'ಮೈಸೂರು ಸ್ಯಾಂಡಲ್' ತಯಾರಿಕೆಗೆ ಗಂಧದ ಎಣ್ಣೆ ಇತ್ತು. ಉಳಿದ ಕಚ್ಚಾ ಪದಾರ್ಥಗಳು ಇಲ್ಲಿರಲಿಲ್ಲ. ಅದು ಲಭ್ಯವಿದ್ದ ದೇಶಗಳಿಂದ ತರಿಸಲಾಯಿತು. ಸಿದ್ಧವಾದ ಸಾಬೂನು ಸುತ್ತಲೂ ಕಾಗದದ ಹೊದಿಕೆ ಕೂಡ ಜರ್ಮನಿಯಿಂದ ಬಂತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕನಸನ್ನು ಸಾಕಾರ ಮಾಡಿದ ಎಸ್.ಜಿ. ಶಾಸ್ತ್ರೀಗಳು ಮೈಸೂರು ಸ್ಯಾಂಡಲ್ ಅನ್ನು ಪ್ರಚುರಗೊಳಿಸಲು ಸಾಕಷ್ಟು ಕ್ರಮಗಳನ್ನು ಕೈಗೊಂಡರು.






ಮೈಸೂರಿನ ಸ್ಯಾಂಡಲ್‌ನ ಹಳೆಯ ಜಾಹಿರಾತು

ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟರು. ವಿದೇಶಗಳಲ್ಲಿ ಸಾಬೂನು ಪ್ರದರ್ಶನಗಳನ್ನು ವ್ಯವಸ್ಥೆ ಮಾಡಿದರು. ವಿದೇಶಿ ಗಣ್ಯರಿಗೆ ಕಾಣಿಕೆಗಳನ್ನು ಕೊಟ್ಟರು. ಬಹುಬೇಗ ಮೈಸೂರು ಸ್ಯಾಂಡಲ್ ಪ್ರಪಂಚ ಪ್ರಖ್ಯಾತಿ ಪಡೆಯಿತು. ದ್ರವರೂಪದಲ್ಲಿದ್ದ ಸುಗಂಧ ಸಾಬೂನಿನ ರೂಪದಲ್ಲಿ ಎಲ್ಲರನ್ನೂ ಸೆಳೆಯಿತು. ಇದು ಇಂಗ್ಲೆಂಡಿನ ರಾಜಮನೆತನವನ್ನೂ ಬಿಡಲಿಲ್ಲ. ವಿಕ್ಟೋರಿಯಾ ರಾಣಿ ಕೂಡ ಮೈಸೂರು ಸ್ಯಾಂಡಲ್ ಅನ್ನು ಇಷ್ಟಪಡುವಂತಾಯಿತು.

ಸರ್ಕಾರಿ ಸ್ವಾಮ್ಯದ ಏಕೈಕ ಸಾಬೂನು ಕಾರ್ಖಾನೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಮೈಸೂರು ಸ್ಯಾಂಡಲ್ ತಯಾರಿಕಾ ಸಂಸ್ಥೆ ಮುಂದಿನ ವರ್ಷಗಳಲ್ಲಿ ಮೈಸಾಬೂನು ಜೊತೆಗೆ ಇನ್ನೂ ಹಲವು ಬಗೆಯ ಸಾಬೂನುಗಳನ್ನು ತಯಾರಿಸಿತು. ಬಟ್ಟೆ ಒಗೆಯುವ ಸಾಬೂನೂ ಮಾರುಕಟ್ಟೆಗೆ ಬಂತು. ಮೈಸೂರು ಸ್ಯಾಂಡಲ್ ವಿದೇಶಗಳಲ್ಲಿ ಭಾರತದಲ್ಲಿ ಮನೆಮಾತಾಗಿ ಹೋಯಿತು.

ಬೆಂಗಳೂರಿನಲ್ಲಿ 1916ರಲ್ಲಿ ಶುರುವಾಗಿ ಮೈಸೂರಿಗೆ ಸ್ಥಳಾಂತರವಾಗಿದ್ದ ಶ್ರೀಗಂಧದ ಎಣ್ಣೆ ಕಾರ್ಖಾನೆಯು ಇನ್ನೊಂದು ಶಿವಮೊಗ್ಗದಲ್ಲಿ ತಲೆ ಎತ್ತಿತ್ತು. ಬೆಂಗಳೂರು ಎಂ.ಎಸ್. ಬಿಲ್ಡಿಂಗ್ ಬದಿಯಲ್ಲಿದ್ದ ಸಾಬೂನು ತಯಾರಿಕಾ ಘಟಕ ಸ್ವಾತಂತ್ರ್ಯ ನಂತರ (1955) ರಾಜಾಜಿನಗರದ ವಿಶಾಲ ಪ್ರದೇಶಕ್ಕೆ ವರ್ಗಾವಣೆಯಾಯಿತು. ಅತ್ಯಾಧುನಿಕ ಯಂತ್ರಗಳು ಕಾರ್ಖಾನೆಗೆ ಸೇರ್ಪಡೆಗೊಂಡವು. ಅದೊಂದು ಸುಸಜ್ಜಿತ ಸಾಬೂನು ಕಾರ್ಖಾನೆಯಾಗಿ ನೆಲೆ ನಿಂತಿತು. ದೇಶದುದ್ದಕ್ಕೂ ಹಲವು ಖಾಸಗಿ ಕಾರ್ಖಾನೆಗಳು ಪೈಪೋಟಿ ಕೊಟ್ಟರೂ ಶುದ್ಧಗಂಧ ಎಣ್ಣೆಯಿಂದ ತಯಾರಾಗುವ ಏಕೈಕ ಸಾಬೂನು ಮೈಸೂರು ಸ್ಯಾಂಡಲ್ ಜನಪ್ರಿಯತೆ ತಗ್ಗಲಿಲ್ಲ.

ಸರ್ಕಾರಿ ಸಾಬೂನು ಕಾರ್ಖಾನೆ ಎಂಬ ಹೆಸರಿನಲ್ಲಿ ವ್ಯವಹಾರ ನಡೆಸುತ್ತಿದ್ದ ಈ ಕಾರ್ಖಾನೆಗೆ 1980ರಲ್ಲಿ ಸರ್ಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಹಾಗೂ ಮಾರ್ಜಕ ಕಾರ್ಖಾನೆ ಎಂಬ ಹೊಸ ಹೆಸರಿಡಲಾಯಿತು.

ಬಟ್ಟೆ ಸಾಬೂನು, ಬಟ್ಟೆ ಸಾಬೂನು ಪುಡಿ, ಅಗರಬತ್ತಿ, ವಿಲ್ಲ ಸಾಬೂನು ಇತ್ಯಾದಿ 30ಕ್ಕೂ ಹೆಚ್ಚು ಹೊಸ ಉತ್ಪನ್ನಗಳನ್ನೂ ತಯಾರಿಸುತ್ತಿದ್ದ ಕೆ.ಎಸ್.ಡಿ.ಎಲ್.ಗೆ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಮಾರುಕಟ್ಟೆ ವಹಿವಾಟು ನೋಡಿಕೊಳ್ಳುತ್ತಿತ್ತು.

ಉದಾರೀಕರಣದ ನಂತರ ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿಯನ್ನು ಎದುರಿಸಬೇಕಾಗಿ ಬಂದ ಕೆ.ಎಸ್.ಡಿ.ಎಲ್. ನಿರ್ವಹಣೆಯಲ್ಲಿನ ಏರುಪೇರುಗಳಿಂದ ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿಬಿದ್ದರೂ ಮೈಸೂರು ಸ್ಯಾಂಡಲ್ ಸಾಬೂನಿಗೆ ಮಾರುಕಟ್ಟೆ ಯಥಾಸ್ಥಿತಿಯಲ್ಲಿತ್ತು. ವ್ಯಾವಹಾರಿಕ ಏಳುಬೀಳುಗಳ ನಡುವೆ ನವನವೀನ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದ ಕಾರ್ಖಾನೆ ಶ್ರೀಗಂಧದ ಸಾಬೂನುಗಳಲ್ಲಿಯೂ ಅನೇಕ ಮಾರ್ಪಾಡುಗಳನ್ನು ತರುವುದರ ಮೂಲಕ ದೇಶ–ವಿದೇಶಗಳಲ್ಲೂ ಗ್ರಾಹಕರ ಮೆಚ್ಚುಗೆ ಪಡೆಯಲು ಸಾಧ್ಯವಾಯಿತು.

ಮೈಸೂರು ಸ್ಯಾಂಡಲ್ ಸೋಪ್ ಜಿ.ಐ. ಮಾನ್ಯತೆ ಪಡೆದುಕೊಂಡಿದೆ. ಘಮಘಮ ಸುವಾಸನೆ ಬೀರುವ ಗಂಧದ ಸಾಬೂನು ನೂರು ವರ್ಷಗಳ ಹಿಂದೆ ಜನ್ಮ ತಳೆದು ಪ್ರಸಿದ್ಧವಾಗಿ ಸುಗಂಧದ ರಾಯಭಾರಿ ಎನ್ನಿಸಿಕೊಂಡಿತಲ್ಲದೆ ಈಗಲೂ ಬೇಡಿಕೆ ಹೊಂದಿರುವುದು ಮೈಸೂರು ಸ್ಯಾಂಡಲ್ ವೈಶಿಷ್ಟ್ಯ.





# ಬರಡು ಭೂಮಿಯಲ್ಲೂ ಬಂಗಾರ ಬೆಳೆದ ದಿಟ್ಟ ಮಹಿಳೆ

▪ ಸೋಮಲಿಂಗಪ್ಪ ಬೆಣ್ಣೆ ಗುಳದಳ್ಳಿ

**ಕೃಷಿಯಲ್ಲಿ ಕಷ್ಟಪಟ್ಟು ದುಡಿದು ಏನನ್ನಾದರೂ ಸಾಧಿಸಬೇಕೆಂಬ ಛಲ, ಆತ್ಮವಿಶ್ವಾಸ ಇದ್ದರೆ ಬಂಜರುಭೂಮಿ, ಬರಗಾಲಗಳೂ ಕೂಡ ಅಡ್ಡ ಬರುವುದಿಲ್ಲ. ಬರ, ಬಂಜರು ಎನ್ನುವುದು ಕೇವಲ ಮನಸಿಗೆ ಮಾತ್ರ ಸಂಬಂಧಿಸಿದ್ದು, ವಾಸ್ತವದಲ್ಲಲ್ಲ ಎಂಬುದನ್ನು ಒಬ್ಬ ಅನಕ್ಷರಸ್ಥ ಮಹಿಳೆ ಸಾಬೀತು ಮಾಡಿ ತೋರಿಸಿದ್ದು ಎಲ್ಲ ರೈತರಿಗೆ ಆದರ್ಶವಾಗಿದೆ.**

ಫಲವತ್ತಾದ ಭೂಮಿ ಇದ್ದರೂ ನೀರು, ಗೊಬ್ಬರ, ವಿದ್ಯುತ್ ಕೊರತೆಯಂತಹ ನೂರಾರು ಕಾರಣ ಹೇಳಿ ಕೃಷಿ ಕ್ಷೇತ್ರ ನಿಷ್ಪ್ರಯೋಜಕವೆನ್ನುವಂತಹ ಪರಿಕಲ್ಪನೆ ಹೊಂದಿದ ಅದೆಷ್ಟೋ ಜನರು ನಮ್ಮ ನಡುವೆ ಇದ್ದಾರೆ. ವಿವಿಧ ಕಾರಣಗಳಿಗಾಗಿ ಸಾಲ ಮಾಡಿ ನಂತರ ಶ್ರಮವಹಿಸಿ ದುಡಿಯದೇ ಆತ್ಮಹತ್ಯೆಗೆ ಶರಣಾಗುವವರಿಗೇನೂ ಕೊರತೆಯಿಲ್ಲ. ಆದರೆ, ಒಬ್ಬ ಅನಕ್ಷರಸ್ಥ ಮಹಿಳೆ ತನ್ನ ಪಾಲಿಗೆ ಬಂದಿದ್ದ ಕಲ್ಲು ಬಂಡೆಯಂತಹ ಬರಡು ಭೂಮಿಯನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಶ್ರಮವಹಿಸಿ ಅದನ್ನು ಫಲವತ್ತು ಭೂಮಿಯನ್ನಾಗಿಸಿಕೊಂಡು ವಿವಿಧ ರೀತಿಯ ಆಧುನಿಕ ಕೃಷಿಯನ್ನು ಮಾಡುತ್ತ ಲಕ್ಷಾಂತರ ರೂಪಾಯಿಯನ್ನು ಸಂಪಾದಿಸುವ ಮೂಲಕ ಹಲವು ರೈತರಿಗೆ ಮಾದರಿಯಾಗಿ ಎಲ್ಲರ ಹುಬ್ಬೇರುವಂತೆ ಮಾಡಿದ್ದಾಳೆ.

ಸದಾ ಬರಗಾಲ, ಬಿಸಿಲಿನ ಬವಣೆಯ ಕರಾಳ ಬದುಕಿಗೆ ಹೆಸರಾದ ಉತ್ತರ ಕರ್ನಾಟಕದ ಕೊಪ್ಪಳ ಜಿಲ್ಲೆಯ ಕಲ್ಲತಾವರಗೆರೆ ಗ್ರಾಮದ ಶೇಖಮ್ಮ ಹುಚ್ಚಪ್ಪ ವಾಣಿ ಎಂಬ ಒಬ್ಬ ಅನಕ್ಷರಸ್ಥ ಮಹಿಳೆಯೇ ಇಂತಹ ವಿನೂತನ ಪ್ರಯತ್ನದ ಮೂಲಕ ಬರಡು ಭೂಮಿಯನ್ನೂ ಬಂಗಾರ ಮಾಡಿ ಯಶಸ್ವಿಯಾದವರು ಎಂಬುದು ವಿಶೇಷ.

**ಕಲ್ಲು ಬಂಡೆಯನ್ನು ಫಲವತ್ತಾದ ಭೂಮಿಯನ್ನಾಗಿ ಮಾಡಿದ್ದು**

ಶೇಖಮ್ಮ ಅವರ ಪಾಲಿಗೆ ಬಂದದ್ದು ಸುಮಾರು 12 ಎಕರೆ ಭೂಮಿ. ಅದರಲ್ಲಿ ಶೇ.75 ರಷ್ಟು ನೆಲ ಬಂಡೆಕಲ್ಲಿನಿಂದ ಕೂಡಿದ್ದು, ಕೆಲಭಾಗ ಮಾತ್ರ ಉಳುಮೆಗೆ ಯೋಗ್ಯವಾಗಿತ್ತು. ಇಂತಹ ನಿಷ್ಪ್ರಯೋಜಕ ಭೂಮಿಯಿಂದ ಏನು ಮಾಡಲು ಸಾಧ್ಯ ಎಂಬುದು ತೋಚದಂತಾದಾಗ ಏನಾದರೂ ಮಾಡಿ ಇಡೀ ಭೂಮಿಯನ್ನೂ ಉಳುಮೆಗೆ ಬಳಕೆಯಾಗುವಂತೆ ಮಾಡಬೇಕೆಂದು ಯೋಚಿಸಿ ಒಂದು

ನಮ್ಮೆಜಮಾನ್ರು ತಮ್ಮ ಅಣ್ಣತಮ್ಮಂದಿರಿಂದ ಬ್ಯಾರೆ ಆದ್ಮೇಲೆ ನಮಗ ಬರೀ ಕಲ್ಲುಬಂಡಿ ಇರೋ ಭೂಮಿ ಬಂದಿತ್ರಿ. ಅದರ ಮ್ಯಾಗ ಕಷ್ಟಪಟ್ಟು ಮಣ್ಣು ಹಾಕ್ಸಿ ಕೆಲ ಹಣ್ಣಿನ ಗಿಡಗಳನ್ನ ತಂದು ಬೆಳಸಕತ್ತೀವ್ರಿ. ಮೊದ್ಲು ನಾಲ್ಕೈದು ವರ್ಸ ಏನು ಲಾಭ ಸಿಕ್ಕಿಲ್ರಿ ಬಾಳ ಕಷ್ಟಪಟ್ಟು ಬೆಳೆಸಿದ್ವಿ ಈಗ ಲಕ್ಷಾನುಗಟ್ಟಲೆ ಲಾಭ ಸಿಗಾಕತ್ತೈತ್ರಿ. ಇನ್ನೂ ಹಣ್ಣು ಬಿಡಾಕೂ ಮುಂಚೆನೆ ವ್ಯಾಪಾರ ಆಗತಾವು ದಿನಾಲೂ ನಿಂಬೆಹಣ್ಣು, ಹೂಗಳನ್ನ ಬಾಳ ಜನ ತಗೊಂಡು ಹೋಗುತಾರ ಅದರಿಂದ ನಮಗ ಯಾವ್ದೂ ರೊಕ್ಕದ ಸಮಸ್ಯೆನೆ ಬರೋದಿಲ್ರಿ,

**ಶೇಖಮ್ಮ ವಾಣಿ**
ರೈತ ಮಹಿಳೆ.

ವಿಭಿನ್ನ ಸಾಹಸಕ್ಕೆ ಮುಂದಾದರು. ಗಂಡ ಮತ್ತು ಮಕ್ಕಳ ಸಹಕಾರದೊಂದಿಗೆ ಬಂಡೆಯ ಮೇಲೆ ಸುಮಾರು 3–4 ಅಡಿ ಎತ್ತರವಾಗಿ ಫಲವತ್ತಾದ ಮಣ್ಣನ್ನು ಹಾಕಿಸಿ ಸಮತಟ್ಟನ್ನಾಗಿ ಮಾಡಿ ಇಡೀ ಭೂಮಿಯನ್ನು ಕೃಷಿಯೋಗ್ಯ ನೆಲವನ್ನಾಗಿ ಮಾಡಿ ಉಳುಮೆಗೆ ಮುಂದಾದರು. ಈ ನೆಲದಲ್ಲಿ ಆಧುನಿಕ ತಳಿಯ ಮಾವು, ನಿಂಬೆ, ಪೇರಲ ಹಣ್ಣು ಸೇರಿದಂತೆ ವಿವಿಧ ಹಣ್ಣಿನ ಮರಗಳನ್ನು ಉತ್ತಮವಾಗಿ ಬೆಳೆಸಿ ಈಗಿನ ಬರದ ದಿನಗಳಲ್ಲಿಯೂ ವರ್ಷಕ್ಕೆ ಲಕ್ಷಾಂತರ ರೂಪಾಯಿ ಲಾಭ ಪಡೆಯುವ ಮೂಲಕ ಪರಿಶ್ರಮ ಹಾಗೂ ಇಚ್ಛಾಶಕ್ತಿಯಿಂದ ದುಡಿದರೆ ಏನನ್ನಾದರೂ ಸಾಧಿಸಬಹುದು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಶೇಖಮ್ಮ ಅವರು ಅನಕ್ಷರಸ್ಥರಾಗಿದ್ದರೂ ಸಂಪೂರ್ಣ ಆಧುನಿಕ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡಿದ್ದಾರೆ. ಸಂಬಂಧಪಟ್ಟ ಇಲಾಖೆಯಿಂದ ಬರುವ ಎಲ್ಲ ರೀತಿಯ ಸಲಹೆ, ಸಹಕಾರಗಳನ್ನು ಸದುಪಯೋಗಪಡಿಸಿಕೊಳ್ಳುತ್ತಾರೆ. ಅವರ ಕುಟುಂಬ ಸುಮಾರು ಹತ್ತು ವರ್ಷಗಳಿಂದ ಈ ಪ್ರಕ್ರಿಯೆಯಲ್ಲಿ ತೊಡಗಿದ್ದು, ವರ್ಷದಿಂದ ವರ್ಷಕ್ಕೆ ಅಧಿಕ ಲಾಭವನ್ನು ಪಡೆಯುತ್ತ ಬಂದಿದ್ದಾರೆ.


ಮಾವು ಮತ್ತು ನಿಂಬೆ ಕಾಯಿಗಳಿಗೆ ಸದಾಕಾಲ ಬೇಡಿಕೆ ಬರುತ್ತಿದ್ದು, ಇನ್ನೂ ಕಾಯಿ ಇರುವಾಗಲೇ ಮುಂಗಡವಾಗಿ ಖರೀದಿ ಮಾಡುತ್ತಾರೆ. ಸ್ಥಳೀಯ ಮಾರುಕಟ್ಟೆಯಲ್ಲದೇ ಹುಬ್ಬಳ್ಳಿ–ಧಾರವಾಡದ ಮಾರುಕಟ್ಟೆಯಿಂದಲೂ ಇವರ ತೋಟದ ಕಾಯಿಗಳಿಗೆ ಬೇಡಿಕೆ ಹೆಚ್ಚಾಗಿದೆ. ಇದರಿಂದಾಗಿ ಕಾಯಿಗಳ ಬೆಲೆ ಕೂಡ ಸಹಜವಾಗಿ ಏರಿಕೆಯಾಗಿ ಅಧಿಕ ಲಾಭಕ್ಕೆ ಕಾರಣವಾಗುತ್ತದೆ. ಸತತ ನಿರ್ವಹಣೆಯಿಂದಾಗಿ ಮಾವಿನ ಹಣ್ಣುಗಳು ಸರಿಸುಮಾರು ಒಂದು ಕೆ.ಜಿ ತೂಕವುಳ್ಳವಾಗಿರುತ್ತವೆ.

**ಸಾವಯವ ಕೃಷಿ**

ಕಡಿಮೆ ಅವಧಿಯಲ್ಲೇ ಅಧಿಕ ಲಾಭ ಪಡೆಯುವ ನಿಟ್ಟಿನಲ್ಲಿ ಇಂದಿನ ಅದೆಷ್ಟೋ ರೈತರು ರಾಸಾಯನಿಕ ಗೊಬ್ಬರಗಳ







ಬರಗಾಲ ಇದ್ರೇನು ಬಿಟ್ರೇನು ಕಷ್ಟಪಟ್ಟು ದುಡಿದ್ರ ಸುಖ ಸಿಕ್ಕ ಸಿಗತೈತ್ರಿ. ಮಳೆ ಇಲ್ಲ, ಹೊಲದಾಗ ಏನೂ ಲಾಭ ಇಲ್ಲ ಅಂತ ಕುಂತ್ಗೋಂಡ್ರ ಆತ್ಮಹತ್ಯೆ ಮಾಡ್ಕೋಬೇಕು ಅನ್ಸುತ್ರಿ. ಆದ್ರ ನಮ್ಮ ಮನಸಿನ್ಯಾಗ ದುಡಿಬೇಕು ಅನ್ನೋ ಛಲ ಇದ್ರ ಯಾವ್ದೂ ಕಷ್ಟ ಇರಂಗಿಲ್ರಿ.

**–ಹುಚ್ಚಪ್ಪ ವಾಣಿ,** ಶೇಖಮ್ಮಳ ಗಂಡ

ಮೊರೆ ಹೋಗಿದ್ದಾರೆ. ಇದರಿಂದಾಗಿ ಭೂಮಿಯ ಸಾರ ಕಾಲ ಕ್ರಮೇಣ ನಾಶವಾಗುತ್ತ ಹೋಗುತ್ತದೆ. ಆದರೆ, ಇದಕ್ಕೆ ಅಪವಾದ ಎಂಬಂತೆ ಶೇಖಮ್ಮ ತಮ್ಮ ಹೊಲದಲ್ಲಿಯೇ ಸಾವಯವ ಗೊಬ್ಬರವನ್ನು ತಯಾರಿಸಿ ತನ್ನ ತೋಟಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ರಸಾಯನಿಕ ಗೊಬ್ಬರದ ಬಳಕೆಯನ್ನು ಸಂಪೂರ್ಣ ತ್ಯಜಿಸಿ ಕೃಷಿ ಇಲಾಖೆಯ ಸಲಹೆಯನ್ನು ಪಡೆದು ಪರಿಸರ ಸ್ನೇಹಿ ಸಾವಯವ ಗೊಬ್ಬರ ತಯಾರಿಸುವ ಮೂಲಕ ಭೂ ಸಾರವನ್ನು ಉಳಿಸುವ ಪ್ರಯತ್ನ ಮಾಡಿದ್ದಾರೆ. ಇವರ ಈ ಬಹುಮುಖ ಪ್ರಯತ್ನ ಮತ್ತು ಇವರ ನಿರಂತರ ಪ್ರಯತ್ನ ಹಾಗೂ ಇವರ ಯಶಸ್ಸು ಸುತ್ತಲಿನ ಅದೆಷ್ಟೋ ರೈತರಿಗೆ ಮಾದರಿಯಾಗಿದೆ. ಇವರ ಆಧುನಿಕ ಕೃಷಿಯ ಕುರಿತು ಮಾಹಿತಿ ಪಡೆಯಲು ದಿನನಿತ್ಯ ಹಲವು ರೈತರು, ಮಾಧ್ಯಮದವರು, ಇಲಾಖೆಯ ಅಧಿಕಾರಿಗಳು ಭೇಟಿ ನೀಡುತ್ತಾರೆ. ಎಲ್ಲರಿಗೂ ತಮ್ಮ ಈ ಪ್ರಯತ್ನ ಹಾಗೂ ಯಶೋಗಾಥೆ ಕುರಿತು ವಿವರಿಸುತ್ತಾರೆ ಶೇಖಮ್ಮ.

**ಸಾಧನೆಗೆ ಸಂದಿವೆ ಹಲವು ಪ್ರಶಸ್ತಿಗಳು**

ಆಧುನಿಕ ಕೃಷಿಯ ಬಗ್ಗೆ ಗಾಳಿ ಗಂಧವೂ ಗೊತ್ತಿರದೇ ಇನ್ನೂ ಕೂಡ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನೇ ಜೀವಂತವಾಗಿರಿಕೊಂಡು ಬಂದಿರುವ ಹಲವು ರೈತರೇ ಇರುವ ಕುಗ್ರಾಮವೊಂದರಲ್ಲಿ ಕಲ್ಲುಬಂಡೆಯನ್ನೂ ಉತ್ತಮ ಕೃಷಿಯೋಗ್ಯ ನೆಲವನ್ನಾಗಿ ಮಾಡಿ ಹಲವು ರೈತರಿಗೆ ಮಾದರಿಯಾದ ಈ ಕುಟುಂಬದ ಸಾಧನೆಯನ್ನು ಗುರುತಿಸಿ ಶೇಖಮ್ಮ ಅವರಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ 'ಶ್ರೇಷ್ಠ ಕೃಷಿ ಮಹಿಳೆ ಬಿರುದು', ಕಿರ್ಲೋಸ್ಕರ್ ವತಿಯಿಂದ 'ವಸುಂಧರ ಮಿತ್ರ ಪ್ರಶಸ್ತಿ, ಶ್ರೀ ರವಿಶಂಕರ ಆಶ್ರಮದಿಂದ ನೀಡುವ 'ಕೃಷಿ–ಋಷಿ ಪ್ರಶಸ್ತಿ', ರಾಯಚೂರು ಕೃಷಿ ವಿಶ್ವವಿದ್ಯಾಲಯದಿಂದ 'ಹಸಿರೇ ಉಸಿರು ಪ್ರಶಸ್ತಿ', 'ಸಿರಿಗಂಧ ಪ್ರಶಸ್ತಿ', 'ಕೃಷಿಪಂಡಿತ ಪ್ರಶಸ್ತಿ', 'ಶ್ರೇಷ್ಠ ಕೃಷಿಕ ಪ್ರಶಸ್ತಿ', 'ಅತ್ಯುತ್ತಮ ತೋಟಗಾರಿಕೆ ರೈತ ಪ್ರಶಸ್ತಿ', ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳು ಹಲವು ಪ್ರಶಸ್ತಿಗಳನ್ನು ನೀಡಿ ಪುರಸ್ಕರಿಸಿವೆ.

ಒಟ್ಟಿನಲ್ಲಿ ಕೃಷಿಯಲ್ಲಿ ಕಷ್ಟಪಟ್ಟು ದುಡಿದು ಏನನ್ನಾದರೂ ಸಾಧಿಸಬೇಕೆಂಬ ಛಲ, ಆತ್ಮವಿಶ್ವಾಸ ಇದ್ದರೆ ಬಂಜರುಭೂಮಿ, ಬರಗಾಲಗಳೂ ಕೂಡ ಅಡ್ಡ ಬರುವುದಿಲ್ಲ. ಬರ, ಬಂಜರು ಎನ್ನುವುದು ಕೇವಲ ಮನಸಿಗೆ ಮಾತ್ರ ಸಂಬಂಧಿಸಿದ್ದು, ವಾಸ್ತವದಲ್ಲಲ್ಲ ಎಂಬುದನ್ನು ಒಬ್ಬ ಅನಕ್ಷರಸ್ಥ ಮಹಿಳೆ ಸಾಬೀತು ಮಾಡಿ ತೋರಿಸಿದ್ದು ಎಲ್ಲ ರೈತರಿಗೆ ಆದರ್ಶವಾಗಿದೆ.

# ಅಗಸಬಾಳದಲ್ಲಿ ಬಾರೀ ಬೆಳ್ಳುಳ್ಳಿ ಬೆಳೆಗಾರ: ಮೂರು ತಿಂಗಳಲ್ಲಿ 14 ಲಕ್ಷ ರೂ ಲಾಭ

▪ *ಗುರುರಾಜ. ಬಿ. ಕನ್ನೂರ.*





ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಹೂವಿನಹಿಪ್ಪರಗಿ ಹೋಬಳಿ ಕೇಂದ್ರದಿಂದ 2 ಕಿಮೀ ಅಂತರದಲ್ಲಿರುವ ಅಗಸಬಾಳ ಎಂಬ ಪುಟ್ಟ ಗ್ರಾಮದ ನಿವಾಸಿ 8 ಎಕರೆ ಭೂಮಿಯಲ್ಲಿ ಬಳ್ಳೊಳ್ಳಿ ಬೆಳೆದು ನಿವ್ವಳ 14 ಲಕ್ಷ ರೂಗಳ ಲಾಭ ಪಡೆದಿದ್ದಾರೆ.

ಸುಮಾರು 60 ವರ್ಷ ವಯಸ್ಸಿನ ಮೋಹನಗೌಡ ಭೀಮನಗೌಡ ಪಾಟೀಲರು ಬರೊಬ್ಬರಿ 1992ರಿಂದ ನಿರಂತರವಾಗಿ 24 ವರ್ಷಗಳಿಂದ ವಾಣಿಜ್ಯ ಬೆಳೆ ಜುವಾರಿ ಬಳ್ಳೊಳ್ಳಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ತಮ್ಮ 50 ಎಕರೆ ಭೂಮಿಯಲ್ಲಿ 8 ಎಕರೆಯಲ್ಲಿ ಬಳ್ಳೊಳ್ಳಿ ಹಾಗೂ ಉಳಿದ 42 ಎಕರೆಯಲ್ಲಿ ಸೂರ್ಯಪಾನ, ದ್ರಾಕ್ಷಿ, ಜೋಳ ಹಾಗೂ ತೊಗರಿ ಬೆಳೆಯುತ್ತಾರೆ.

ಪ್ರಮುಖವಾಗಿ ಬಳ್ಳೊಳ್ಳಿ ಬೆಳೆ ಬೆಳಗಾವ, ಗದಗ, ಬಾಗಲಕೋಟೆ, ಧಾರವಾಡ ಜಿಲ್ಲೆಗಳಲ್ಲಿ ಜಾಸ್ತಿ ಬೆಳೆಯುತ್ತಿದ್ದು. ಅದರಲ್ಲಿ ವಿಜಯಪುರ ಜಿಲ್ಲೆಯಲ್ಲಿ ಅದರಲ್ಲೂ ಹೆಚ್ಚಾಗಿ ಬಸವನಬಾಗೇವಾಡಿ ತಾಲೂಕಿನ ಅಗಸಬಾಳ, ಕಣಕಾಲ, ಕಾನ್ಯಾಳ, ನರಸಲಗಿ ಹಾಗೂ ಇವಣಗಿ ಗ್ರಾಮಗಳ ನೀರಾವರಿ ಭೂಮಿಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದಾರೆ.





ಮೋಹನಗೌಡರ ಮೂವರು ಮಕ್ಕಳು ಪೂರ್ಣವಾಗಿ ಕೃಷಿಯಲ್ಲಿಯೇ ತೊಡಗಿಸಿಕೊಂಡಿರುವುದರಿಂದ, ಅವರ ಕೃಷಿಯಲ್ಲಿ ಯಶಸ್ವಿಯಾಗಲು ಸಾಧ್ಯವಾಗಿದೆ ಎನ್ನುತ್ತಾರೆ.

"ಪ್ರತಿ ಸೆಪ್ಟೆಂಬರ್ ತಿಂಗಳಲ್ಲಿ ಭೂಮಿಯನ್ನು ಹದ ಮಾಡಿ ನಂತರ ಕುರಿಗಳನ್ನು ತಡೆದು ಗೊಬ್ಬರ ಸಂಗ್ರಹಿಸುವೆ. ಇಲ್ಲವೇ 1 ಎಕರೆಗೆ 3 ಟ್ರಾಕ್ಟರ್ ಸಗಣಿ ಗೊಬ್ಬರವನ್ನು ಹಾಕಿ, ಧಾರವಾಡದಿಂದ ತಂದ ಹೊಸ ಬಳ್ಳೊಳ್ಳಿ ಬೀಜವನ್ನು ಒಂದು ಎಕರೆಗೆ 2 ಕ್ವಿಂಟಾಲ್‌ನಂತೆ 8 ಇಂಚ್ ಪ್ಲಾಸ್ಟಿಕ್ ಕೂರಿಗೆಯಿಂದ ಬಿತ್ತನೆ ಮಾಡುವೆ. ನಾಟಿ ಬಂದ ನಂತರ ಎರಡು ಸಲ ಕಳೆ ತೆಗೆದು 1 ಎಕರೆಗೆ 1 ಕ್ವಿಂಟಾಲ್ ನಂತೆ ಯೂರಿಯಾ ಗೊಬ್ಬರ ಹಾಕಿರುವೆ.



ಒಂದು ತಿಂಗಳ ನಂತರ 15 ದಿನಗಳಿಗೊಮ್ಮೆ ಅಗತ್ಯಕ್ಕೆ ತಕ್ಕಂತೆ ಔಷಧಿಯನ್ನು ಸಿಂಪಡಿಸಿದರೆ ಸಾಕು. ಇದಕ್ಕೆ ಸೀರ ರೋಗವೊಂದನ್ನು ಬಿಟ್ಟರೆ ಮತ್ಯಾವ ರೋಗವೂ ಬರುವುದಿಲ್ಲ" ಎನ್ನುತ್ತಾರೆ.

ಮುಂದೆ 90 ದಿನಗಳ ನಂತರ ಫಸಲು ಕಿತ್ತಿ ಸೂಡು ಕಟ್ಟಿ ಸೋಸಿ ಚೀಲ ತುಂಬಿ ನೇರವಾಗಿ ಮಾರುಕಟ್ಟೆಗೆ ಮಾಲನ್ನು ಕಳುಹಿಸುತ್ತಾರೆ.

ಬೋರ್‌ವೆಲ್ ನೀರಿದೆ. ಕಾರಂಜಿ ಪದ್ಧತಿಯಲ್ಲಿ 8 ದಿವಸಕ್ಕೊಮ್ಮೆ ನೀರು ಹಾಯಿಸುವೆ. ನಾಟಿ ಮಾಡಿದ 1 ತಿಂಗಳಲ್ಲಿ ನೀರನ್ನು ಕಡಿಮೆ ಹರಿಸಿ ನಂತರ ಮುಂದಿನ ಎರಡು ತಿಂಗಳು ಜಾಸ್ತಿ ನೀರು ಹರಿಸುವುದು ಅವಶ್ಯವಾಗಿದೆ.. 1992ರಲ್ಲಿ ಆರಂಭ ಮಾಡಿದ ಬಳ್ಳೊಳ್ಳಿ ಕೃಷಿ ಫಸಲು ಆರಂಭದಲ್ಲಿಯೇ 1 ಎಕರೆಗೆ 3 ರಿಂದ 4 ಲಕ್ಷ ಆದಾಯ ತಂದರೆ, ಕಳೆದ ಎರಡು ವರ್ಷಗಳಿಂದ 1 ಎಕರೆಗೆ 20 ರಿಂದ 25 ಕ್ವಿಂಟಾಲ್ ಆಗಿ ಒಟ್ಟು 200 ಕ್ವಿಂಟಾಲ್, 8ಎಕರೆ ಫಸಲಿಗೆ 14 ಲಕ್ಷ ರೂ ಬಂದಿದೆ. 8000 ಸಾವಿರ ರೂ ಗೆ 1 ಕೆಜಿಗೆ ಮಾರಾಟ ಮಾಡಿರುವೆ. ಎಕರೆಗೆ 1,75,000 ರೂಗಳಂತೆ ಖರ್ಚು ತೆಗೆದು 14 ಲಕ್ಷರೂಗಳ ಆದಾಯ ಸಿಕ್ಕಿದೆ. ಮಾರಾಟದ ವಿಚಾರಕ್ಕೆ ಬಂದರೆ, ಗದಗ, ಬೆಳಗಾವ, ದಾವಣಗೆರೆ, ಬಾಗಲಕೋಟೆ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲಾಗುತ್ತದೆ.

ನಿಷ್ಠೆಯಿಂದ ಬಳ್ಳೊಳ್ಳಿ ಕೃಷಿ ಮಾಡುತ್ತಾ ಮೂರು ತಿಂಗಳಲ್ಲಿ 14 ಲಕ್ಷರೂಗಳ ಆದಾಯವನ್ನು ತೆಗೆಯುತ್ತಿರುವ ಮೋಹನಗೌಡರು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಎಕರೆ ಬಳ್ಳೊಳ್ಳಿ ಬೆಳೆಯುವುದರಲ್ಲಿ ಖುಷಿ ಇದೆ ಎನ್ನುತ್ತಾರೆ. ■



### ವಿದ್ಯಾನಗರಿಗೆ ಮತ್ತೊಂದು ಮುಕುಟ ;

# ಐಎಎಸ್, ಕೆಎಎಸ್ ತರಬೇತಿ ಕೇಂದ್ರ

▪ ಮಂಜುನಾಥ ಡಿ.ಡೊಳ್ಳಿನ
ಹಿರಿಯ ಸಹಾಯಕ ನಿರ್ದೇಶಕರು, ಧಾರವಾಡ

ಸಿಹಿಯಾದ ಪೇಡೆ ಹಾಗೂ ವಿದ್ಯೆಗೆ ಹೆಸರುವಾಸಿಯಾಗಿರುವ ಧಾರವಾಡದ ಮುಕುಟಕ್ಕೆ ಕಳೆದ ಏಪ್ರಿಲ್ 14, ಡಾ.ಬಾಬಾಸಾಹೇಬ ಅಂಬೇಡ್ಕರರ 125 ನೇ ಜಯಂತಿಯ ದಿನದಂದು ಮತ್ತೊಂದು ಹೆಮ್ಮೆಯ ಗರಿ ಸೇರ್ಪಡೆಯಾಯಿತು. ಸಮಾಜ ಕಲ್ಯಾಣ ಇಲಾಖೆ, ಧಾರವಾಡ ಜಿಲ್ಲಾ ಆಡಳಿತ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಹಾಗೂ ವೈಶುದೀಪ ಫೌಂಡೇಷನ್ನಿನ ಸಹಯೋಗದಲ್ಲಿ ತಲೆ ಎತ್ತಿರುವ ಐಎಎಸ್, ಕೆಎಎಸ್ ತರಬೇತಿ ಕೇಂದ್ರ , ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಡಿಜಿಟಲ್ ಗ್ರಂಥಾಲಯ ಹಾಗೂ ವಿದ್ಯಾಸ್ನೇಹಿ ಉಚಿತ ಸಹಾಯವಾಣಿ – 18004255540 ಕೇಂದ್ರಗಳು ಉತ್ತರ ಕರ್ನಾಟಕದ ಸ್ಪರ್ಧಾತ್ಮಕ ಪರೀಕ್ಷಾ ಆಕಾಂಕ್ಷಿಗಳಿಗೆ ಮುಂಬರುವ ದಿನಗಳಲ್ಲಿ ವರದಾನವಾಗಲಿವೆ.

ಧಾರವಾಡದ ಸನ್ಮತಿ ಮಾರ್ಗದಲ್ಲಿ ಸುಂದರವಾಗಿ ನಿರ್ಮಾಣಗೊಂಡಿರುವ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಸುಸಜ್ಜಿತ, ಅತ್ಯಾಧುನಿಕ ಸೌಕರ್ಯಗಳಿಂದ ಕೂಡಿದ ಕಟ್ಟಡದಲ್ಲಿ, ಈ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಸ್ಥಾಪನೆಯಾಗಿದೆ.

ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳೂ ಆಗಿರುವ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ವಿನಯ ಕುಲಕರ್ಣಿ ಹಾಗೂ ಧಾರವಾಡ ಜಿಲ್ಲಾಧಿಕಾರಿಗಳಾದ ಶ್ರೀ ಪಿ.ರಾಜೇಂದ್ರ ಚೋಳನ್ ಅವರ ಇಚ್ಛಾಶಕ್ತಿಯ ಫಲವಾಗಿ ಕರ್ನಾಟಕದ ಮೊದಲ ಐಎಎಸ್, ಕೆಎಎಸ್ ತರಬೇತಿ ಕೇಂದ್ರ ನಿರ್ಮಾಣವಾಗಿದೆ. ಕರ್ನಾಟಕ ಸರಕಾರದ ಸಮಾಜ ಕಲ್ಯಾಣ ಇಲಾಖೆಯು ಈ ಕೇಂದ್ರಕ್ಕೆ 60 ಲಕ್ಷ ರೂಪಾಯಿಗಳ ಅನುದಾನ ನೀಡಿದೆ.

ಪ್ರತಿ ಆರು ತಿಂಗಳ ಅವಧಿಯ ತರಬೇತಿಗೆ 50 ಐಎಎಸ್ ಹಾಗೂ 50 ಕೆಎಎಸ್ ಪರೀಕ್ಷಾ ಅಭ್ಯರ್ಥಿಗಳಿಗೆ ಈ ಕೇಂದ್ರದಲ್ಲಿ ಪ್ರವೇಶ ನೀಡಲಾಗುವದು. ಅರ್ಹ ಪದವೀಧರರಿಂದ ಅರ್ಜಿ ಆಹ್ವಾನಿಸಿ ಪ್ರವೇಶ ಪರೀಕ್ಷೆ ನಡೆಸಿ ಅಂಕಗಳ ಅರ್ಹತೆಯ ಆಧಾರದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಕರ್ನಾಟಕದ ಎಲ್ಲ ಜಿಲ್ಲೆಗಳ ಅಭ್ಯರ್ಥಿಗಳಿಗೂ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಇದರಲ್ಲಿ ಶೇಕಡಾ 75 ರಷ್ಟು ಸ್ಥಾನಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಹಾಗೂ ಉಳಿದ ಶೇಕಡಾ 25 ರಷ್ಟು ಸ್ಥಾನಗಳನ್ನು ಉಳಿದ ಎಲ್ಲ ವರ್ಗಗಳ ಅಭ್ಯರ್ಥಿಗಳಿಗೆ ನೀಡಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ 2 ಸಾವಿರ ರೂಪಾಯಿಗಳ ಪ್ರೋತ್ಸಾಹ ಧನದ ಸೌಲಭ್ಯವೂ ಸಹ ಇರುತ್ತದೆ.

ಈ ತರಬೇತಿ ಕೇಂದ್ರದಲ್ಲಿ ಕೇಂದ್ರ ಹಾಗೂ ರಾಜ್ಯ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಸಂದರ್ಶನ ಎದುರಿಸಿದ ಅಭ್ಯರ್ಥಿಗಳು . ಹುಬ್ಬಳ್ಳಿ–ಧಾರವಾಡ ಶಹರಗಳ ವಿವಿಧ ಕಚೇರಿಗಳಲ್ಲಿರುವ ಸುಮಾರು 13 ಕ್ಕೂ ಹೆಚ್ಚು ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳು ನಿಯಮಿತವಾಗಿ ಬೋಧನೆ ಮಾಡುವರು. ವಿದ್ಯಾರ್ಥಿಗಳ ಕೌಶಲ ಅಭಿವೃದ್ಧಿಗೂ ಗಮನ ಕೊಡಲಾಗುವುದು. ತರಬೇತಿ ಪಡೆದ ವಿದ್ಯಾರ್ಥಿಗಳ ಪ್ರಗತಿಯನ್ನೂ ಸಹ ಮೌಲ್ಯಮಾಪನಮಾಡುವ ವ್ಯವಸ್ಥೆ ಇಲ್ಲಿದೆ.

ವಿದ್ಯಾಸ್ನೇಹಿ ಉಚಿತ ಸಹಾಯವಾಣಿ ಸಂಖ್ಯೆ 18004255540 ಮೂಲಕ ಜಿಲ್ಲೆಯ ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವ ವಿನೂತನ ಕಾರ್ಯವೂ ಕೂಡ ಇದೇ ಕೇಂದ್ರದ ಒಂದು ಭಾಗದಲ್ಲಿದೆ. ಸರಕಾರದ ವಿವಿಧ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆ, ಏಕಗವಾಕ್ಷಿ ಯೋಜನೆಯಡಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ಸೌಲಭ್ಯವನ್ನು ಒದಗಿಸುವದು. ವಿದ್ಯಾರ್ಥಿ ವೇತನ , ವಿದ್ಯಾರ್ಥಿ ನಿಲಯಗಳ ಸಮಸ್ಯೆಯನ್ನು 24 ಗಂಟೆಗಳಲ್ಲಿ ಪರಿಹರಿಸುವುದು . ಉಚಿತ ಸಹಾಯವಾಣಿ ಕೇಂದ್ರದ ಕರೆಗಳ ವಿಷಯವನ್ನು ದಾಖಲಿಸಿಕೊಂಡು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು , ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸಮನ್ವಯದೊಂದಿಗೆ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯ ಈಗಾಗಲೇ ಆರಂಭವಾಗಿದೆ.

ಧಾರವಾಡ ಶಹರ ಶಾಸಕರಾದ ಶ್ರೀ ಅರವಿಂದ ಬೆಲ್ಲದ ತಮ್ಮ ಅನುದಾನದಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಒದಗಿಸಿ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಡಿಜಿಟಲ್ ಗ್ರಂಥಾಲಯ ಸ್ಥಾಪನೆಗೆ ನೆರವಾಗಿದ್ದಾರೆ.

ವಿದ್ಯಾನಗರಿ, ಸಾಂಸ್ಕೃತಿಕ ಕೇಂದ್ರ ಎಂಬ ಹಿರಿಮೆ ಹೊಂದಿರುವ ಧಾರವಾಡದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆರಂಭವಾಗಿರುವ ಐಎಎಸ್, ಕೆಎಎಸ್ ತರಬೇತಿ ಕೇಂದ್ರ, ಡಿಜಿಟಲ್ ಗ್ರಂಥಾಲಯ ಹಾಗೂ ವಿದ್ಯಾಸ್ನೇಹಿ ಉಚಿತ ಸಹಾಯವಾಣಿ ಸಂಪರ್ಕ ಕೇಂದ್ರವು ಸಮಸ್ತ ಉತ್ತರ ಕರ್ನಾಟಕದ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸುವ ಮಾದರಿ ಸಂಸ್ಥೆ ಎನಿಸಿಕೊಳ್ಳಲಿದೆ.



ಧಾರವಾಡದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸ್ಥಾಪನೆಯಾಗಿರುವ ಐಎಎಸ್ , ಕೆಎಎಸ್ ತರಬೇತಿ ಕೇಂದ್ರ, ಡಿಜಿಟಲ್ ಗ್ರಂಥಾಲಯ ಕುರಿತ ಮಾಹಿತಿಗಾಗಿ–www.petcdharwad.in

ಉದ್ಯೋಗ, ಶೈಕ್ಷಣಿಕ ಸಾಲ ಮತ್ತಿತರ ಮಾಹಿತಿಗೆ –www.vidyasnehi.org ವೆಬ್‌ಸೈಟ್ ಗಳನ್ನು ಹಾಗೂ ವಿದ್ಯಾಸ್ನೇಹಿ ಉಚಿತ ಸಹಾಯವಾಣಿ ಸಂಖ್ಯೆ – 18004255540 ಸಂಪರ್ಕಿಸಬಹುದು





# ಆಡು ಕುರಿ ಸಾಕಾಣಿಕೆದಾರರ ಸಹಕಾರ ಮಹಾಮಂಡಲ

## ಒಂದು ದೂರದೃಷ್ಟಿಯ ಕಾರ್ಯಕ್ರಮ




▪ ಡಾ॥ ರಘುಪತಿ ಸಿ. ಎಸ್.

**ಕೃ**ಷಿಗೆ ಕೈ ಹಚ್ಚಿದವ ಆತ್ಮಹತ್ಯೆಗೆ ಶರಣಾಗುತ್ತಿರುವ ಈ ಹೊತ್ತಿನಲ್ಲಿ ವ್ಯವಸಾಯದ ಅವಿಭಾಜ್ಯ ಅಂಗವಾಗಿರುವ ಆಡು-ಕುರಿ ಸಾಕಾಣಿಕೆ ಬಗ್ಗೆ ಗಮನ ಸೆಳೆಯುವ ಸ್ಥಿತಿ ಬಂದಿರುವುದು ವಿಪರ್ಯಾಸ.

ನೀವು ನೋಡಿರಬಹುದು. ಆಡು ಕುರಿಗಳು ಬರಗಾಲದ ಬೆಂಗಾಡುಗಳಲ್ಲಿ, ಗುಡ್ಡ, ಬೆಟ್ಟ, ದಿಣ್ಣೆಗಳ ಬಂಜರು ಭೂಮಿಯಲ್ಲಿ ಮೇಯ್ದುಕೊಂಡು ಪ್ರಕೃತಿಯ ಕನಿಷ್ಠ ಬಳಕೆಯಿಂದ, ಸರ್ಕಾರದ ಯಾವ ಸೌಲಭ್ಯಗಳ ನಿರೀಕ್ಷೆಯೂ ಇಲ್ಲದೆ ಮಾನವನ ನಾಗರೀಕತೆಯ ಉಗಮದೊಂದಿಗೆ ಬೆಳೆದುಬಂದ ಸಾಕುಪ್ರಾಣಿಗಳು. ನೀರಾವರಿ, ರಾಸಾಯನಿಕ ಗೊಬ್ಬರ, ಔಷಧಿ, ಸಬ್ಸಿಡಿ- ಯಾವುದೊಂದು ಬೇಡದ ಆಡು-ಕುರಿಗಳು ತಳ ಸಮುದಾಯಗಳ ಆರ್ಥಿಕ ಶಕ್ತಿಯಾಗಿ ರೂಪುಗೊಂಡಿವೆ. ತೊಂಬತ್ತಾರು ಲಕ್ಷ ಕುರಿಗಳು, ನಲವತ್ತೆಂಟು ಲಕ್ಷ ಆಡುಗಳು ಇಂದು ಕರ್ನಾಟಕದಲ್ಲಿ ಓಡಾಡಿಕೊಂಡು ಮೇಯುತ್ತಿವೆ. ರಾಜ್ಯದ 747 ಹೋಬಳಿಗಳಲ್ಲಿ 101 ಹೋಬಳಿಗಳನ್ನು ಬಿಟ್ಟರೆ 646 ಹೋಬಳಿಗಳಲ್ಲಿ ಕನಿಷ್ಟ 15,000 ಕ್ಕಿಂತ ಹೆಚ್ಚು ಆಡು-ಕುರಿಗಳಿವೆ. ಒಟ್ಟು 146 ಕುರಿ ಸಂತೆಗಳು ಕರ್ನಾಟಕದ 23 ಜಿಲ್ಲೆಗಳಲ್ಲಿ ವಾರಕ್ಕೊಮ್ಮೆ ಕೂಡುತ್ತಿವೆ. ಆ ವಾರದ ಸಂತೆಗಳಲ್ಲಿ ಸರಿಸುಮಾರು 2 ಲಕ್ಷ ಕುರಿ ಮೇಕೆಗಳು ಕೈ ಬದಲಾಗುತ್ತಿವೆ.

ಇಂಥ ಆಗಾಧ ಆರ್ಥಿಕಶಕ್ತಿ ಸಂಪನ್ಮೂಲಗಳನ್ನು ಕಂಡ ಪರಿಸರ ತಜ್ಞ ಯಲ್ಲಪ್ಪರೆಡ್ಡಿ ಗಣಿಗಾರಿಕೆ ವಿರೋಧಿ ಆಂದೋಲನದಲ್ಲಿ ಹೇಳಿದ ಮಾತು ಇಲ್ಲಿ ಮುಖ್ಯ: "ಒಂದು ವರ್ಷಕ್ಕೆ ಒಂದು ಆಡು ಅಥವಾ ಕುರಿ ಕರ್ನಾಟಕದ ಆರ್ಥಿಕತೆಗೆ 16,000/- ರೂಗಳನ್ನು ಅವುಗಳ ಮಾಂಸ, ಚರ್ಮ. ಉಣ್ಣೆ, ಹಾಲು, ಗೊಬ್ಬರ, ಮರಿಗಳ ರೂಪದಲ್ಲಿ ನೀಡುತ್ತಾ ಬಂದಿವೆ. ಪರಿಸರಪರ, ಪರ್ಯಾಯ ಅಭಿವೃದ್ಧಿ ಮಾದರಿಯನ್ನು ಆಡು-ಕುರಿ ಸಾಕಾಣಿಕೆಯಲ್ಲಿ ನಾವು ಕಂಡುಕೊಳ್ಳಬಹುದು" ಎಂದಿದ್ದರು.

ಆದರೆ ಇತ್ತೀಚಿನ ಅಭಿವೃದ್ಧಿ ಮಾದರಿಗಳು ಈ ಕಡೆ ನೋಡದೆ ಕುರಿ-ಆಡು ವಲಯವನ್ನು ದಿವ್ಯ ನಿರ್ಲಕ್ಷ್ಯಕ್ಕೆ ಈಡುಮಾಡಿವೆ. ಕಾಡು-ಮೇಡು, ಕೆರೆ-ಕುಂಟೆ, ಗೋಮಾಳ ಎಲ್ಲವೂ ಬಲಿಷ್ಟರಿಗೆ ಬಲಿಯಾಗಿವೆ. ಚಳ್ಳಕೆರೆ ಸುತ್ತಮುತ್ತಲಿನ ಆಡು-ಕುರಿಗಳಿಗೆ ಸೀಮಿತವಾಗಿದ್ದ ಸಾವಿರಾರು ಎಕರೆಗಳ ಹುಲ್ಲುಗಾವಲು, ಆಧುನಿಕ ಅಭಿವೃದ್ಧಿ ಮಾಂತ್ರಿಕರಿಂದ 'ವೇಸ್ಟ್ ಲ್ಯಾಂಡ್' ಎನ್ನಿಸಿಕೊಂಡು ರಕ್ಷಣಾ ತಂತ್ರಜ್ಞಾನ ಸಂಶೋಧನಾ ಸಂಸ್ಥೆಗಳ ಪಾಲಾಗಿದೆ. ಮತ್ತೆ ಆಡು-ಕುರಿ ಕಾಯುವವನು ಮಧ್ಯವರ್ತಿ ಕೈಯಲ್ಲಿ ಸಿಕ್ಕು ಎಲ್ಲರಂತೆ ನರಳುತ್ತಿದ್ದಾನೆ. ಇಡೀ ಕರ್ನಾಟಕದಲ್ಲಿ ಒಂದೇ ಒಂದು ಚರ್ಮ ಸಂಸ್ಕರಣಾ ಘಟಕ ಇಲ್ಲದೆ ಚರ್ಮ ಬಿಸಾಕಿದ ರೇಟಿಗೆ ಮಾರಾಟವಾಗುತ್ತಿದೆ. ವೈಜ್ಞಾನಿಕ ನೆಲೆಯಲ್ಲಿ ಆಡು-ಕುರಿಗಳ ಮಾರಾಟ ವ್ಯವಸ್ಥೆಯಿಲ್ಲ. ಆರೋಗ್ಯಕರ ಮಾಂಸ ಟೌನ್, ಸಿಟಿಗಳ ಗ್ರಾಹಕರಿಗೂ ಸಿಗುತ್ತಿಲ್ಲ. ಉಣ್ಣೆ ಕೇಳುವವರೇ ಇಲ್ಲ. ತುಪ್ಪಟ ಕತ್ತರಿಸುವುದಕ್ಕೂ ದುಡ್ಡು ತೆರಬೇಕಾಗಿದೆ. ಇನ್ನು ಆರೋಗ್ಯ ಸೇವೆ, ರೋಗ ನಿಯಂತ್ರಣ ಕ್ರಮಗಳು, ಆಡು-ಕುರಿಗಳನ್ನು ಉಳಿಸುವ ಕೆಲಸದಲ್ಲಿ ಸಾಕಷ್ಟು ಒದಗಿಬರುತ್ತಿಲ್ಲ.

ಇಲ್ಲಿಯವರೆಗೆ ಪಶುವೈದ್ಯ ಜ್ಞಾನ ಕುರಿ ಆಡು ಸಾಕಾಣಿಕೆಯತ್ತ ಅದರಲ್ಲೂ ಆರೋಗ್ಯ ಸೇವೆ, ರೋಗನಿಯಂತ್ರಣ ಕ್ರಮಗಳ ಸುತ್ತ ಗಿರಕಿ ಹೊಡೆಯುತ್ತಿದೆ. ಆಡು-ಕುರಿಗಳ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಬಗ್ಗೆ ಪಶುಪಾಲನಾ ಜ್ಞಾನ ಶಾಖೆಗಳು ಗಂಭೀರವಾಗಿ ಪರಿಗಣಿಸಿಲ್ಲ.

ಈ ಎಲ್ಲಾ ಹಿನ್ನೆಲೆಯಲ್ಲಿ ಈಗ ಅಸ್ತಿತ್ವದಲ್ಲಿದ್ದು ಕಾರ್ಯನಿರ್ವಹಿಸುತ್ತಿರುವ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಸರ್ಕಾರಿ ವ್ಯವಸ್ಥೆಯ ಅಡಿಯಲ್ಲಿರುವ ಕಾರಣಕ್ಕೆ ಈ ಎಲ್ಲಾ ಸಮಸ್ಯೆಗಳನ್ನು ಸಮಗ್ರವಾಗಿ ನೋಡಲು, ಗ್ರಹಿಸಲು, ಪರಿಹರಿಸಲು ಸಾಧ್ಯವಾಗುತ್ತಿಲ್ಲ. ಆಡು-ಕುರಿಗಾರರ ನಾಯಕತ್ವದ ಸಹಕಾರ ವ್ಯವಸ್ಥೆ ಮಾತ್ರ ಇದಕ್ಕೆ ಪರಿಹಾರ. ಈ ದಿಕ್ಕಿನಲ್ಲಿ ನಮಗೆ ಹೊಳೆಯುತ್ತಿರುವ ಉದಾಹರಣೆ ಒಂದೇ. ಅದು ಕರ್ನಾಟಕ ಹಾಲು ಒಕ್ಕೂಟ. ಯಾಕೆಂದರೆ ಇಂದು ಈ ಸಂಸ್ಥೆ ಏಳು ಸಾವಿರ ಕೋಟಿ ವಾರ್ಷಿಕ ವಹಿವಾಟು ನಡೆಸುತ್ತಿದ್ದು ಜಾಗತೀಕರಣದ ಈ ಕಾಲದಲ್ಲಿ ಗ್ರಾಮೀಣ ಕರ್ನಾಟಕದಲ್ಲಿ ಭರವಸೆಯ ಬೆಳಕಾಗಿದೆ. ಹಾಲು ಒಕ್ಕೂಟಕ್ಕೆ ಹೋಲಿಸಿ ನೋಡಿದರೆ ಕುರಿ-ಆಡು ವಲಯದ ಅಪಾರ ಶಕ್ತಿ ಅರ್ಥವಾಗುತ್ತದೆ. ಸರಿಸುಮಾರು ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಆರ್ಥಿಕತೆಯ ಶಕ್ತಿ ಕುರಿ ಆಡು ವಲಯಕ್ಕಿದೆ ಎಂಬುದು ತಜ್ಞರ ಅಭಿಪ್ರಾಯ. ಹಾಲು ಎಂಬ ಒಂದೇ ಉತ್ಪನ್ನವನ್ನು ಸಂಘಟಿಸಿದೆ ಕೆಎಂಎಫ್. ಇಲ್ಲಿ ಹಾಲು, ಮಾಂಸ, ಚರ್ಮ, ಉಣ್ಣೆ, ಗೊಬ್ಬರ ಎಂಬ ಐದು ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ಮಾರಾಟದ ಸಾಧ್ಯತೆಗಳು ಆಗಾಧವಾಗಿವೆ.

ಹದಿನೈದು ಸಾವಿರ ಆಡು-ಕುರಿಗಳಿಗೆ ಒಂದು ಪ್ರಾಥಮಿಕ ಸಹಕಾರ ಸಂಘ ಸ್ಥಾಪಿಸಿ ಅದು ಈ ಸಹಕಾರಿ ಆಂದೋಲನದ ಮೂಲ ಘಟಕವಾಗಬೇಕು. ತಜ್ಞರ ಪ್ರಕಾರ ಹದಿನೈದು ಸಾವಿರ ಆಡು ಕುರಿಗಳ ಉತ್ಪನ್ನಗಳ ಮಾರಾಟದಿಂದಲೇ ಸಂಘ ಸ್ವಾವಲಂಬನೆ ಸಾಧಿಸುತ್ತದೆ. ಈಗಿರುವ ಬೇರೆ ಸಹಕಾರ ಸಂಘಗಳ ರೀತಿ ಯಾವಾಗಲೂ ಸರ್ಕಾರದ ಕಡೆಗೆ ಮುಖಮಾಡಿ ನಿಂತಿರುವುದಿಲ್ಲ. ಯಾವಾಗ ಮೂಲ ಸಹಕಾರ ಸಂಘ ಸ್ವಾವಲಂಬನೆ ಸಾಧಿಸುತ್ತದೋ ಆಗ ಸರ್ಕಾರದ ಹಸ್ತಕ್ಷೇಪ ಹೆಚ್ಚಿನ ಮಟ್ಟದಲ್ಲಿ ಇರುವುದಿಲ್ಲ. ಹಾಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವಾರು ಸಂಸ್ಥೆಗಳು "ಸಹಕಾರಕ್ಕೆ" ಧಾವಿಸಿ ಬರುತ್ತವೆ.

ನಂತರ ಜಿಲ್ಲಾ ಮಟ್ಟದಲ್ಲಿ ಆಡು ಕುರಿ ವಲಯದ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ಮಾರಾಟ ಸಂಬಂಧಿತ





10 ರಿಂದ 12 ಕೇಂದ್ರಗಳನ್ನು ಸ್ಥಾಪಿಸಬೇಕು. ಅಲ್ಲಿ ಆಧುನಿಕ ಕಾಲಕ್ಕೆ ತಕ್ಕಂತೆ ಮೇವು, ಮೇವಿನ ಮರಗಳ ಕುರಿತಾದ ಸಂಶೋಧನೆ, ಅಭಿವೃದ್ಧಿ, ವಿಸ್ತರಣಾ ಘಟಕಗಳು ಮುಖ್ಯವಾಗಿ ಇರಬೇಕು. ಮತ್ತೆ ಅಲ್ಲಿ ಅಂದರೆ ಜಿಲ್ಲಾ ಮಟ್ಟದಲ್ಲಿ ಈ ಕೇಂದ್ರಗಳ ಜೊತೆ ಮನೆ ಬಾಗಿಲಿಗೆ ಆರೋಗ್ಯ ಸೇವೆ ನೀಡಬಹುದಾದ ಪಶುಚಿಕಿತ್ಸಾ ಮೊಬೈಲ್ ಘಟಕ ಮುಖ್ಯವಾದುದು. ಅಲ್ಲದೇ ತರಬೇತಿ, ವಿಸ್ತರಣೆ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳ ವಿವಿಧ ಕೇಂದ್ರಗಳು ಜಿಲ್ಲಾ ಆಡು-ಕುರಿ ಸಂಕೀರ್ಣದಲ್ಲಿ ತಲೆ ಎತ್ತಿ ನಿಲ್ಲಲಿವೆ.

ನಂತರ ರಾಜ್ಯಮಟ್ಟದಲ್ಲಿ ಈ ಎಲ್ಲಾ ಪ್ರತಿನಿಧಿಗಳನ್ನೊಳಗೊಂಡ ಆಡು-ಕುರಿ ಸಾಕಾಣಿಕೆದಾರರ ಸಹಕಾರಿ ಮಹಾಮಂಡಳ ಸರ್ಕಾರಕ್ಕೆ ಪರ್ಯಾಯವಾಗಿದ್ದುಕೊಂಡು ಕೆಲಸ ನಿರ್ವಹಿಸುತ್ತಾ ಹೋಗಬೇಕು. ಇಲ್ಲಿ ಆಡು-ಕುರಿ ವಲಯದ ಅಭಿವೃದ್ಧಿಗೆ ಬೇಕಾದ ನೀತಿ ನಿರೂಪಣೆಗಳನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುತ್ತದೆ. ಅಲ್ಲದೆ ಕುರಿ-ಆಡು ವಲಯದ ಉತ್ಪನ್ನಗಳಿಗೆ ತನ್ನದೇ ಆದ ಬ್ರಾಂಡ್ ನಿರ್ಮಿಸಿ ಬೇರೆ ರಾಜ್ಯ, ದೇಶಗಳ ಜೊತೆ ವಾಣಿಜ್ಯ ನೀತಿಯನ್ನು ರೂಪಿಸಲಿದೆ. ಇಲ್ಲಿ ಆಧುನಿಕ ಕಾಲಕ್ಕೆ ತಕ್ಕಂತೆ ವೃತ್ತಿಪರತೆ ಮೆರೆಯಲು ವಿಷಯ ತಜ್ಞರ ಸೇವೆಯನ್ನು ಬಳಸಿಕೊಳ್ಳಲು ಚಿಂತಿಸಲಾಗಿದೆ. ಅಂದಾಗ ಮಾತ್ರ ಈ ಕುರಿ-ಆಡು ವಲಯ ಸರ್ಕಾರದ ಅಧಿಕಾರಿಶಾಹಿ ಬಿಗಿಹಿಡಿತದಿಂದ ಹೊರಬಂದು ನೇರವಾಗಿ ಆಡು-ಕುರಿ ಕಾಯುವವರ ನೇತೃತ್ವದಲ್ಲಿ ತನ್ನ ಅಭಿವೃದ್ಧಿ ದಿಕ್ಕನ್ನು ಕಂಡುಕೊಳ್ಳಲು, ತಾನೇ ನಿರ್ವಹಿಸಿದ ತನ್ನ ವಿಕಾಸದ ಹೆಜ್ಜೆಗಳ ಮೇಲೆ ನಡೆಯುತ್ತಾ ಹೋಗಲು ಸಹಕಾರಿಯಾಗುತ್ತದೆ.


ತಮ್ಮಲ್ಲಿರುವ ಬಹುಬೆಳೆಗಳು, ಸಿರಿಧಾನ್ಯಗಳು, ನಾಟಿತಳಿಯ ದನ-ಕರುಗಳು, ಆಡು-ಕುರಿ ಸಾಕುವ ಸಮುದಾಯಗಳನ್ನು ಆಧುನಿಕ ಕೃಷಿಯ  ಕೆಟ್ಟಹೊಡೆತಗಳಿಗೆ ಸಿಲುಕಲು ಬಿಟ್ಟಿಲ್ಲ. ಈ ದೇಸಿ ಸಾವಯವ ಪರಂಪರೆಯನ್ನು ಗರ್ಭೀಕರಿಸಿಕೊಂಡ ಅಭಿವೃದ್ಧಿ ಮಾದರಿ ಆಡು-ಕುರಿ ಸಹಕಾರ ಚಳುವಳಿಯಲ್ಲಿ ಕಾಲಿಡಲು ಆರಂಭಿಸುತ್ತದೆ.

ಕುರಿ-ಆಡು ಸಾಕಾಣಿಕೆಯಲ್ಲಿ ಜೀವಪರ ಸಂಸ್ಕೃತಿ, ಅನನ್ಯ ಜ್ಞಾನವಂತಿಕೆ, ಅಪಾರ ಆರ್ಥಿಕಶಕ್ತಿ ಅಡಗಿದೆ. ಆದ್ದರಿಂದ ಈ ಸರ್ಕಾರ ಆಡು-ಕುರಿ ಸಾಕಾಣಿಕೆದಾರರ ಸಹಕಾರಿ 'ಫೆಡರೇಶನ್' ಅನ್ನು ಸ್ಥಾಪಿಸುವ  ನೀತಿಯನ್ನು ಈ ಸಾಲಿನ ಬಜೆಟಿನಲ್ಲಿ ಘೋಷಿಸಿರುವುದು ತಳಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಹೆಬ್ಬಾಗಿಲು ತೆರೆದಂತಾಗಿದೆ.

ಆದರೆ ಈ ಸುದ್ದಿ ನಮ್ಮ ಮಾಧ್ಯಮಗಳಲ್ಲಿ ಪರಿಣಾಮಕಾರಿಯಾಗಿ ವರದಿಯಾಗಿಲ್ಲ; ಮತ್ತೆ ಚರ್ಚೆಗೆ ಒಳಪಡುತ್ತಿಲ್ಲ. ಇದಕ್ಕೆ ಹಲವಾರು ಕಾರಣಗಳಿದೆ. ಮೊದಲಿನಿಂದಲೂ ಪಶುಪಾಲನಾ ಕ್ಷೇತ್ರ ವಿಶೇಷವಾಗಿ ಆಡು-ಕುರಿ ಕೃಷಿವಲಯ ಬಹುಪಾಲು ಧ್ವನಿ ಇಲ್ಲದ ಸಮುದಾಯಗಳ ಆರ್ಥಿಕ ಚಟುವಟಿಕೆಯಾಗಿರುವುದು ಮುಖ್ಯ ಕಾರಣ.

ಈ ದೀರ್ಘಕಾಲಿನ ಯೋಜನೆ ತಳಸಮುದಾಯಗಳ ಅಭಿವೃದ್ಧಿ ಚರಿತ್ರೆಯಲ್ಲಿ ಮಹತ್ವ ಪಡೆದುಕೊಂಡಿದೆ. ಹೇಗೆಂದರೆ;

- ಇದನ್ನು ಸಾಮಾಜಿಕ ನ್ಯಾಯವನ್ನು ಬಿತ್ತಿಬೆಳೆದ ದೇವರಾಜ್ ಅರಸುರವರ ಉಳುವವನೆ ನೆಲದೊಡೆಯ, ಹಿಂದುಳಿದ ವರ್ಗಗಳಿಗೆ ಮೀಸಲಾತಿಯಂಥ ಸಾಮಾಜಿಕ ನ್ಯಾಯದ ಕಾರ್ಯಕ್ರಮಗಳ ಸಾಲಿನಲ್ಲಿ ಇದು ಇಂದಿನ ಹೆಜ್ಜೆ.
- ಸಮಗ್ರ ಅಭಿವೃದ್ಧಿ ದೃಷ್ಟಿಕೋನವುಳ್ಳ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಹಕಾರ ಮಹಾಮಂಡಳದ ಸ್ಥಾಪನೆಯ ಪ್ರಯತ್ನ ದೇಶದಲ್ಲಿಯೇ ಮೊದಲ ಕಾರ್ಯಕ್ರಮ ಎಂದು ಹೇಳಲು ಹೆಮ್ಮೆಯೆನಿಸುತ್ತಿದೆ.
- ಜಾಗತೀಕರಣದ ಸ್ಪರ್ಧಾಯುಗದಲ್ಲಿ ಆಡು ಕುರಿ ಕೃಷಿವಲಯವನ್ನು ಸಹಕಾರ ವ್ಯವಸ್ಥೆಯಡಿಯಲ್ಲಿ ಸಂಘಟಿಸುವ ಈ ಪ್ರಯತ್ನ ಕುರಿಯನ್ ಜಾರಿಗೊಳಿಸಿದ ಹಾಲಿನ ಕ್ರಾಂತಿಗೆ ಸರಿಸಮನಾಗಿ ನಿಲ್ಲುವ ಯೋಜನೆ, ಯೋಚನೆ ಈ ಕಾರ್ಯಕ್ರಮದಲ್ಲಿ ಅಡಗಿದೆ.
- ಜನರ ನಾಯಕತ್ವಕ್ಕೆ  ಅಂದರೆ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಆಡಳಿತಕ್ಕೆ ನಿರ್ಲಕ್ಷಿತ ಆಡು ಕುರಿ ಕೃಷಿವಲಯವನ್ನು ಬಿಟ್ಟುಕೊಡುವ ಮೂಲಕ ಸಹಕಾರ ಆಂದೋಲನಕ್ಕೆ ಮತ್ತು ಅದರ ಮೂಲಕ ಪ್ರಜಾಪ್ರಭುತ್ವಕ್ಕೆ ಕೊಟ್ಟ ಕೊಡುಗೆಯಾಗಿದೆ.
- ಇತ್ತೀಚಿನ ದಿನಗಳಲ್ಲಿ ಮತ್ತೆ ಮತ್ತೆ ಚರ್ಚೆಗೆ ಒಳಪಡುತ್ತಿರುವ ಸಾವಯವ ಕೃಷಿ, ಸ್ವಾವಲಂಬನೆಯ ಕೃಷಿ, ಸುಸ್ಥಿರ ಕೃಷಿಗಳ ಬೀಜಮಂತ್ರ ಈ ಕಾರ್ಯಕ್ರಮದಲ್ಲಿ ಅಡಗಿದೆ.
- ಇದೊಂದು ಕರ್ನಾಟಕದ ಅತ್ಯಂತ ನಿರ್ಲಕ್ಷಿತ ಕೃಷಿವಲಯವನ್ನು ಮುಖ್ಯಧಾರೆಗೆ ತರುವ, ಆ ಮೂಲಕ ಇಡೀ ಕರ್ನಾಟಕವನ್ನು ಪುನರ್‌ಕಟ್ಟುವ ದಿಟ್ಟ, ಶಾಶ್ವತ, ದೂರದೃಷ್ಟಿಯ ಕ್ರಾಂತಿಕಾರಿ ಕ್ರಮವಾಗಿದೆ.
- ಅಲ್ಲದೆ ಭವಿಷ್ಯದಲ್ಲಿ ಈ ಸಹಕಾರ ಮಂಡಲ ಹಲವು ಆಯಾಮಗಳಲ್ಲಿ ಚಾಚಿಕೊಳ್ಳುವ ಮೂಲಕ ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ನಾಂದಿಯಾಡಲಿವೆ.



- ಈಗಿರುವಂತೆ ಕುರಿ ಮತ್ತು ಮೇಕೆ ಸಾಕಾಣಿಕೆಯನ್ನಷ್ಟೆ ಅಲ್ಲದೇ ಇನ್ನು ಮುಂದೆ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರಾಟಕ್ಕೆ ಆದ್ಯತೆ ನೀಡುವ ಆಯಾಮ ಹೊಂದಿದೆ.
- ಕರ್ನಾಟಕ ರಾಜ್ಯದ 76 ಲಕ್ಷ ಗ್ರಾಮೀಣ ಕುಟುಂಬಗಳಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆಯಲ್ಲಿ ತೊಡಗಿರುವ 15 ಲಕ್ಷ ಕುಟುಂಬಗಳ ಅಭ್ಯುದಯ ಇದರಲ್ಲಿ ಅಡಗಿದೆ.
- ಕುರಿ-ಆಡು ಸಾಕಾಣಿಕೆದಾರರಲ್ಲದೇ ಹಾಲು, ಮಾಂಸ, ಚರ್ಮ, ಉಣ್ಣೆ ಸಂಬಂಧಿತ ಕುಶಲಕರ್ಮಿಗಳನ್ನು ಸಹಕಾರ ಮಹಾಮಂಡಳದ ಸದಸ್ಯರಾಗಿ ತಮ್ಮ ಅಭಿವೃದ್ಧಿ ನೀತಿಯನ್ನು ಇಲ್ಲಿ ಮಂಡಿಸಲಿದ್ದಾರೆ.
- ಅಲ್ಲದೆ ನಗರ ಪಟ್ಟಣದ ಗ್ರಾಹಕರಿಗೆ ಆರೋಗ್ಯಪೂರ್ಣ ಉತ್ಪನ್ನಗಳನ್ನು ಒದಗಿಸುವ ಮೂಲಕ ಅವರನ್ನು ಈ ಸಂಘಟನೆಯ ತೆಕ್ಕೆಗೆ ತರುವ ಕಾರ್ಯಕ್ರಮ ಇದಾಗಿದೆ.
- ಕುರಿ ಮತ್ತು ಮೇಕೆ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರಾಟ ಜಾಲದಲ್ಲಿ ಕನಿಷ್ಠ ಇನ್ನೂ ಹದಿನೈದು ಲಕ್ಷ ಕುಟುಂಬಗಳಿಗೆ ಉದ್ಯೋಗ ಸೃಷ್ಟಿಸುವ ಅವಕಾಶವಿದೆ.
- ಕರ್ನಾಟಕ ಹಾಲು ಒಕ್ಕೂಟ ಗ್ರಾಮೀಣ ಕರ್ನಾಟಕದಲ್ಲಿ ಹಣದ ಹರಿವು ಹೆಚ್ಚಿಸಿದಂತೆ ಈ ಸಹಕಾರ ಮಂಡಳದ ಮೂಲಕ ಕುರಿ ಮತ್ತು ಮೇಕೆ ಉತ್ಪನ್ನಗಳು ಹಳ್ಳಿಗಳಲ್ಲಿ ಸಣ್ಣ ಅತಿಸಣ್ಣ ರೈತರ, ಭೂಹೀನ ಕಾರ್ಮಿಕರ ಪಾಲಿಗೆ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿವೆ.
- ಈ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಹಕಾರಿ ಆಂದೋಲನದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ, ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಜ್ಞಾನವನ್ನು ನಮ್ಮ ನಿರುದ್ಯೋಗಿ ಯುವಕ ಯುವತಿಯರಿಗೆ ತಲುಪಿಸಿ ಅವರನ್ನು ಈ ಯೋಜನೆಯೊಳಗೆ ಉದ್ಯೋಗ ನೀಡುವ ಮೂಲಕ ಒಳಗೊಳ್ಳಲು ಹಲವಾರು ಸರ್ಟಿಫಿಕೇಟ್ ಕೋರ್ಸ್‌ಗಳು, ಡಿಪ್ಲಮೋ ಕೋರ್ಸ್‌ಗಳನ್ನು ಈ ಮಹಾಮಂಡಳದಲ್ಲಿ ಆರಂಭಿಸಲು ಯೋಜಿಸಲಾಗಿದೆ.
- ಅಲ್ಲದೆ ಈ ಸಹಕಾರಿ ಆಂದೋಲನದಲ್ಲಿ ದೇಶಿಯ ತಳಿಗಳು, ನೆಲಮೂಲದ ಸಾಕಾಣಿಕೆ ಜ್ಞಾನಪರಂಪರೆ ಮತ್ತು ತಳಸಮುದಾಯಗಳ ಕೌಶಲ್ಯಗಳಿಗೆ ಆದ್ಯತೆಕೊಟ್ಟು, ಮುನ್ನಡೆಸುವ ಆಕಾಂಕ್ಷೆಯನ್ನು ಈ ಕಾರ್ಯಕ್ರಮ ಹೊಂದಿದೆ.
- ಬಂಜರುಭೂಮಿ, ಗೋಮಾಳ ಮತ್ತು ಅರಣ್ಯಗಳಲ್ಲಿ ಹುಲ್ಲು, ಮೇವಿನ ಮರಗಳ ಕೃಷಿ ಅರಣ್ಯವನ್ನು ಸೃಷ್ಟಿಸುವ ಒಂದು ಜನಾಂದೋಲನವನ್ನು ಸಂಘಟಿಸುವ ಮೂಲಕ ಪರಿಸರಕ್ಕೆ ದೊಡ್ಡ ಕೊಡುಗೆಯನ್ನು ಕೊಡುವ ಪ್ರಯತ್ನವನ್ನು ಇಲ್ಲಿ ಗಂಭೀರವಾಗಿ ಪರಿಗಣಿಸಲಾಗಿದೆ

ಈ ಎಲ್ಲಾ ಸಶಕ್ತ ಕಾರಣಗಳಿಂದಾಗಿ ಹಲವು ದಶಕಗಳ ನಂತರ ಕರ್ನಾಟಕ ಕಂಡ ದೀರ್ಘಕಾಲೀನ ದೂರದೃಷ್ಟಿಯ, ವಿಷನರಿ ಯೋಜನೆ ಇದಾಗಿದೆ. ■



# ಶಾಲ್ಮಲಾ ಶಿಲ್ಪವನ

## ಪ್ರವಾಸೋದ್ಯಮಕ್ಕೆ ಹೊಸ ಕೊಡುಗೆ...

ಚಿತ್ರ ಲೇಖನ :

▪ ನಾಗರಾಜ್ ಹರಪನಹಳ್ಳಿ

**ದ**ಟ್ಟಕಾಡು.... ಮುಗಿಲನ್ನು ಚುಂಬಿಸುವ ಮರಗಳು. ಸೂರ್ಯನ ಕಿರಣ ನೆಲವನ್ನು ಚುಂಬಿಸದಂತೆ ತಡೆದ ನೆರಳ ಹಾದಿ. ಶಾಲ್ಮಲೆ ನದಿಯ ಮೇಲೆ ಬೀಸುವ ತಂಗಾಳಿಯಂತೆ ನುಸುಳುವ ತಂಪಾದ ಗಾಳಿ. ದಟ್ಟ ಕಾಡಿನ ಮಧ್ಯೆಯೂ ತೆರೆದುಕೊಂಡ ಹಾದಿ. ಹಾಗೆ ಹೆಜ್ಜೆ ಸವೆಸಿದರೆ ಕಾಣುವ ಕಾಡಿನ ಜನರು. ಕಣ್ಣು ಹೊರಳಿಸಿದ ಕಡೆ ಕಾಣುವ ವನ್ಯಜೀವಿಗಳು. ಮೊದಲ ನೋಟಕ್ಕೆ ಪ್ರಾಣಿಸಂಗ್ರಹಾಲಯವನ್ನು ಹೊಕ್ಕ ಅನುಭವ. ಮುಕ್ತ ವಾತಾವರಣದಲ್ಲಿ ತಮ್ಮ ಆಹಾರದ ಹುಡುಕಾಟದಲ್ಲಿರುವ ಪ್ರಾಣಿಗಳ ದರ್ಶನ. ಯಾಣದ ಗುಹೆಯಲ್ಲಿ ಹೊಕ್ಕು ನಾಲ್ಕು ಹೆಜ್ಜೆ ಹಾಕಿದೊಡನೆ ಆನೆಯ ನಡಿಗೆ, ಸಿಂಗಳೀಕ ಸಂಸಾರ. ಇದು ಶಾಲ್ಮಲಾ ಶಿಲ್ಪವನದಲ್ಲಿ ಮೊದಲ ಸ್ವಾಗತ. ಹಾಗೆ ಸಾಗುತ್ತಿದ್ದರೆ ಪಕ್ಕದಲ್ಲಿ ಹರಿವ ಹಾವು ಮತ್ತು ನವಿಲುಗಳು ಪ್ರವಾಸಿಗರನ್ನು ಚಕಿತಗೊಳಿಸುತ್ತವೆ.

ಇದೆಲ್ಲಾ ಕಾಣಸಿಗುವುದು ಶಿರಸಿಯಿಂದ ಹುಬ್ಬಳ್ಳಿ ಕಡೆಗೆ ಸಾಗುವ ದಾರಿಯಲ್ಲಿ. ಚಿಪಗಿ ಎಂಬ ಪುಟ್ಟ ಗ್ರಾಮದ ಪಕ್ಕ.



ಜಿಲ್ಲೆಯಲ್ಲಿ ದಾಂಡೇಲಿಯ ವನ್ಯಜೀವಿ ಅರಣ್ಯಧಾಮ, ಕುಳಗಿ ಹಾರ್ನಬಿಲ್ ಪಕ್ಷಿಧಾಮ, ಅಣಶಿ ಕುಳಗಿ ಮಧ್ಯೆ ಕಾಣಸಿಗುವ ಜಿಂಕೆಗಳ ಹಿಂಡು, ಕಾಳಿಂಗ ಸರ್ಪದ ಸಹಜ ಓಟ, ಕಾಡುಕೋಣಗಳ ಗಾಂಭಿರ್ಯ ರಾಜ್ಯದ ಪ್ರವಾಸಿಗರನ್ನು , ಹೊರರಾಜ್ಯದ ಪ್ರವಾಸಿಗರನ್ನು ಸೆಳೆಯುತ್ತಿದೆ. ಪರಿಸರ ಪ್ರವಾಸೋದ್ಯಮಕ್ಕೆ ಹೆಸರಾಗಿರುವ ದಾಂಡೇಲಿ, ಕ್ಯಾಸಲ್‌ರಾಕ್ ಜೊತೆಗೆ ಇದೀಗ ಶಿರಸಿಯ ಚಿಪಗಿ ಶಾಲ್ಮಲಾ ಶಿಲ್ಪವನ ಸೇರ್ಪಡೆಯಾಗಿದೆ. ಪ್ರವಾಸೋದ್ಯಮ ಇಲಾಖೆಯ ಕನಸಿಗೆ ಸಹಕಾರ ನೀಡಿರುವ ಅರಣ್ಯ ಇಲಾಖೆ ಇದೀಗ ಇಕೋ ಟೂರಿಸಂ ಪರಿಚಯದ ಜೊತೆಗೆ ಪರಿಸರ ಮತ್ತು ವನ್ಯಜೀವಿಗಳ ಬದುಕನ್ನು ಅರುಹಲು ಯತ್ನಿಸುತ್ತಿದೆ. ಹಾಗೆಯೇ ಬುಡಕಟ್ಟು ಜನರ ಸರಳ ಮತ್ತು ಸಾಂಪ್ರದಾಯಿಕ ಜೀವನದ ಪಾಠಗಳನ್ನು ಪ್ರವಾಸಿಗರಿಗೆ ಹಂಚುತ್ತಿದೆ.



ರಾಜ್ಯ ಹೆದ್ದಾರಿಯ ಮಗ್ಗಲಲ್ಲೇ ಇರುವ 'ಶಾಲ್ಮಲಾ ಶಿಲ್ಪವನ' ರಾಜ್ಯ ಪ್ರವಾಸೋದ್ಯಮ ಇಲಾಖೆಯ ಹೊಸ ಕೊಡುಗೆ.

ಶಿರಸಿಯಿಂದ ಹತ್ತು ನಿಮಿಷದ ಹಾದಿ. ಅರಣ್ಯ ಇಲಾಖೆಯ 57 ಎಕರೆ ಕಾಡಿನ ಪ್ರದೇಶದ ಒಳ ಭಾಗವನ್ನೇ ಪರಿಸರ ಪೂರಕವಾಗಿ ಬಳಸಿಕೊಂಡು ಶಿಲ್ಪವನ ರೂಪಿಸಲಾಗಿದೆ. 2015ರಲ್ಲಿ ಪ್ರಾರಂಭವಾದ 1.44 ಕೋಟಿ ರೂ. ಯೋಜನೆಯಲ್ಲಿ 1.32 ಕೋಟಿ ರೂ. ಬಳಸಿ ನೈಜತೆಗೆ ತೀರಾ ಹತ್ತಿರವಾಗಿರುವಂತೆ ಶಿಲ್ಪದಲ್ಲಿ ಅರಣ್ಯದ ಜೀವಿಗಳು ಮತ್ತು ಬುಡಕಟ್ಟು ಜನರ ಬದುಕನ್ನು ಕಟ್ಟಿಕೊಡಲಾಗಿದೆ. ಕಲಾವಿದ ಸೊಲಬಕ್ಕನವರ ಮತ್ತು





ಅವರ ಶಿಷ್ಯರು ರೂಪಿಸಿರುವ ಶಿಲ್ಪವನ ರಾಜ್ಯದಲ್ಲೇ ಅಪರೂಪದ್ದು. ರಾಜ್ಯದ ಬೀದರ್, ಹಾವೇರಿ ಬಳಿಯ ಶಿಗ್ಗಾಂವ್ ಗೋಟಗೋಡಿ ಜಾನಪದ ಜೀವನದ ಶಿಲ್ಪವನಕ್ಕಿಂತ ವಿಭಿನ್ನವಾದ ಸಂಸ್ಕೃತಿ ಮತ್ತು ಪರಂಪರೆಯನ್ನು ಇಲ್ಲಿ ಸೃಷ್ಟಿಸಲಾಗಿದೆ.

ಉತ್ತರ ಕನ್ನಡ ವೈವಿಧ್ಯಮಯ ಜನಸಂಸ್ಕೃತಿಯನ್ನು, ವಿಭಿನ್ನ ಪರಿಸರ ಪ್ರದೇಶಗಳನ್ನು, ಪಶ್ಚಿಮಘಟ್ಟದ ಜೀವವೈವಿಧ್ಯವನ್ನು ಹೊಂದಿರುವ ಜಿಲ್ಲೆ. ಇಲ್ಲಿನ ಹಾಲಕ್ಕಿ,ಕರೆ ಒಕ್ಕಲಿಗ, ಸಿದ್ಧಿ, ಕುಣಬಿ,ಗೌಳಿ ಬುಡಕಟ್ಟು ಜನಾಂಗಗಳ ಜೀವನ ಶೈಲಿ, ಅವರ ಬದುಕಿನ ನೃತ್ಯ ಮತ್ತು ಸಂಗೀತ, ಅಡುಗೆ ಮನೆ ಹಾಗೂ ಅಡುಗೆ ಮನೆಯ ಹೊರಗಿನ ಸಂಸ್ಕೃತಿಗಳನ್ನು ಶಿಲ್ಪದಲ್ಲಿ ಅರಳಿಸಲಾಗಿದೆ. ಅಲ್ಲದೇ ಅವರ ಬದುಕಿನ ಅಂಗವಾದ ಕೃಷಿ ಮತ್ತು ದನ ಎಮ್ಮೆ ಸಾಕಾಣಿಕೆ ಹಾಗು ಹೈನುಗಾರಿಕೆಯನ್ನು ಸಹ ಶಿಲ್ಪದಲ್ಲಿ ಅರಳಿಸಲಾಗಿದೆ. ಬುಡಕಟ್ಟುಗಳ ಜೊತೆ ಬದುಕುವ ಸಾಕು ಪ್ರಾಣಿಗಳಾದ ನಾಯಿ, ಕೋಳಿ ಮರಿ ಮುಂತಾದ ಜೀವನ ಶೈಲಿಯನ್ನು ಶಿಲ್ಪಗಳಲ್ಲಿ ಸಹಜವಾಗಿ ಅರಳಿಸಲಾಗಿದೆ. ಮೀನುಗಾರರ ಬದುಕಿನ ಚಿತ್ರಣವನ್ನು ಸಹ ಈ ವೃಕ್ಷೋದ್ಯಾನದಲ್ಲಿ ಮೂಡಿಬಂದಿವೆ. ಹತ್ತಾರು ಕಲಾವಿದರು , ಆರು ತಿಂಗಳು ಕಾಲ ಶ್ರಮವಹಿಸಿ ಶಿಲ್ಪವನ ಕಟ್ಟಿರುವುದು ಶ್ರಮ ಮತ್ತು ಪ್ರತಿಭೆಯ ದ್ಯೋತಕವಾಗಿದೆ.

ವನ್ಯಜೀವಿ ವೈವಿಧ್ಯ: ಪಶ್ಚಿಮ ಘಟ್ಟದಲ್ಲಿ, ಅದರಲ್ಲೂ ಉತ್ತರ ಕನ್ನಡದ ಕಾಡಿನಲ್ಲಿ ಕಾಣ ಸಿಗುವ ಆನೆ, ಕಾಳಿಂಗ ಸರ್ಪ,ಸಿಂಗಳೀಕ, ಹಾರ್ನಬಿಲ್, ನವಿಲು, ಬೇಟೆ ನಾಯಿ,ಜಿಂಕೆ,ಮೊಸಳೆಗಳು,ಕಪ್ಪು ಚಿರತೆ, ಕಿರುಚುವ ಕರಡಿ, ಕಾಡುಕೋಣ, ಚಿರತೆ, ಕಾಡು ಪ್ರಾಣಿಗಳ ಆಹಾರದ ಕ್ರಮ ಮತ್ತು ಬೇಟೆಯ ಚಿತ್ರಣದ ಶಿಲ್ಪಗಳು ತಾಜಾ ತಾಜ ಎನಿಸುವಷ್ಟು ಸೊಗಸಾಗಿ ಮೂಡಿ ಬಂದಿವೆ.

ಶಿಲ್ಪವನ ಪ್ರವೇಶಿಸಿದರೆ ಸಂತಸ: ಶಿಲ್ಪವನ ಪ್ರವೇಶಿಸಿದರೆ ಮಕ್ಕಳಿಗೆ ಸಂತಸದ ಬುಗ್ಗೆ ಚಿಮ್ಮುವಂತೆ ಆಟಕ್ಕೆ ಪ್ರತ್ಯೇಕ ವ್ಯವಸ್ಥೆ ಅಳವಡಿಸಲಾಗಿದೆ. ಪ್ರವಾಸಿಗರಿಗೆ ದಣಿವಾರಿಸಿಕೊಳ್ಳಲು ಅಲ್ಲಲ್ಲಿ ಆಸನಗಳ ವ್ಯವಸ್ಥೆಯೂ ಇದೆ.

**ಸಜ್ಜಾಗುತ್ತಿದೆ ಕಾಡುಪ್ರಾಣಿಗಳ ಧ್ವನಿಮಾದರಿ :** ಶಾಲ್ಮಲಾ ಶಿಲ್ಪವನದಲ್ಲಿ ಅತ್ಯಾಧುನಿಕ ಮಾಹಿತಿ ಮತ್ತು ಧ್ವನಿ ವಿವರಣಾ ಕೇಂದ್ರ ಪ್ರಾರಂಭಿಸಲು ಯೋಜಿಸಲಾಗಿದೆ. ಅದರ ಸಿದ್ಧತಾ ಕಾರ್ಯ ಸಹ ನಡೆದಿದೆ. ಈಗಾಗಲೇ ಈ ಯೋಜನೆಗೆ ಹೆಚ್ಚುವರಿ ಅನುದಾನ ಕೇಳಲಾಗಿದೆ. ಈ ಕೇಂದ್ರದಲ್ಲಿ ಪಶ್ಚಿಮಘಟ್ಟದ ವಿಶಿಷ್ಟ ಮತ್ತು ವಿಶೇಷ ಪ್ರಾಣಿಗಳ ಧ್ವನಿ ಮಾದರಿಗಳನ್ನು ಅಳವಡಿಸಲಾಗುತ್ತಿದೆ.

ಜಿಲ್ಲೆಯ ಕಾಡಿನ ವಿಶೇಷ ವೈವಿಧ್ಯಗಳಾದ ಕಾಡುಕೋಣ, ಕಾಳಿಂಗ ಸರ್ಪ, ಹಾರ್ನ್‌ಬಿಲ್,ಸಿಂಗಳೀಕ, ಕಪ್ಪು ಚಿರತೆಗಳ ಧ್ವನಿ ಮಾದರಿಗಳನ್ನು, ಅವುಗಳ ಚಿತ್ರಗಳು ಮತ್ತು ಜೀವನ ಶೈಲಿಯ ಸಮಗ್ರ ಮಾಹಿತಿ ಹಾಗೂ ಅವು ಕಂಡು ಬರುವ ಕಾಡು ಪ್ರದೇಶಗಳ ವಿವರಗಳನ್ನು ಈ ಕೇಂದ್ರದಲ್ಲಿ ಅಳವಡಿಸಲಾಗುತ್ತಿದೆ.

ಜೀವ ವೈವಿಧ್ಯದ ಸಮಗ್ರ ಮಾಹಿತಿ, ಜಿಲ್ಲೆಯ ಪ್ರವಾಸಿತಾಣಗಳ ಮಾಹಿತಿಯನ್ನು ಈ ಕೇಂದ್ರದಲ್ಲಿ ಸಿ.ಡಿ.ರೂಪದಲ್ಲಿ, ಮುದ್ರಣ ರೂಪದಲ್ಲಿ ಇಡಲು ಯೋಜನೆ ರೂಪಿಸಲಾಗಿದೆ.



ಯಾವುದೇ ಕಾಲದಲ್ಲಿ ಬರಬಹುದು: ಶಾಲ್ಮಲಾ ಶಿಲ್ಪವನ ಪರಿಸರ ಪೂರಕ ಪ್ರವಾಸೋದ್ಯಮದ ಮಾದರಿಯಾಗಿ ರೂಪಿತವಾಗಿದೆ. 'ಇಕೋ ಟೂರಿಸಂ' ಪರಿಚಯಿಸುವ ಉದ್ದೇಶ ಸಹ ಅರಣ್ಯ ಇಲಾಖೆಗೆ ಇದ್ದು, ಈ ಪ್ರವಾಸಿಕೇಂದ್ರಕ್ಕೆ ಪ್ರವಾಸಿಗ ಯಾವುದೇ ಕಾಲದಲ್ಲಿ ಬರುವಂತೆ ರೂಪಿಸಲಾಗಿದೆ ಎನ್ನುತ್ತಾರೆ ಡಿಎಫ್‌ಓ ಮಂಜುನಾಥ.

ಶಿರಸಿ ಮಾರಿಕಾಂಬೆ ದೇವಸ್ಥಾನ ಪ್ರಮುಖ ಧಾರ್ಮಿಕ ಕೇಂದ್ರ. ಅಲ್ಲಿಗೆ ವರ್ಷದ ಎಲ್ಲಾ ಕಾಲದಲ್ಲೂ ಪ್ರವಾಸಿಗರು ಬರುತ್ತಾರೆ. ಶಿರಸಿಗೆ ಬಂದವರು ಚಿಪಗಿ ಶಿಲ್ಪವನವನ್ನು ನೋಡಿಯೇ ಹೋಗಬೇಕು. ಜೊತೆಗೆ ಶಿರಸಿ ವ್ಯಾಪ್ತಿಯ ಶಿವಗಂಗಾ ಜಲಪಾತ, ಮುಂಡಿಗೆಕೆರೆ ಪಕ್ಷಿಧಾಮ, ಕೈಲಾಸಗುಡ್ಡ ವೀಕ್ಷಣಾ ಗೋಪುರಗಳ ಅಭಿವೃದ್ಧಿ ಹಾಗೂ ಅಲ್ಲಿಗೆ ತಲುಪುವ ಸಂಪರ್ಕ ರಸ್ತೆಗಳ ಅಭಿವೃದ್ಧಿಯೂ ಆಗಿರುವ ಕಾರಣ ಪ್ರವಾಸಿಗರು ಒಂದು ದಿನವನ್ನು ಶಿರಸಿ ಪ್ರವಾಸಕ್ಕೆ ಮೀಸಲಿಡುವಂತೆ ಪ್ಯಾಕೇಜ್ ಪ್ರವಾಸಕ್ಕೆ ಅಣಿಯಾಗಿದೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd., Dr. Rajkumar Road, Bangalore - 560 010